ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 287 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ ಗುರುವಾರ 5 ಫೆಬ್ರವರಿ 2026

ಇಂಗ್ಲಿಷ್, ಗಣಿತ, ವಿಜ್ಞಾನ ಶಿಕ್ಷಕರಿಗೆ ಸ್ಮಾರ್ಟ್ ಬೋರ್ಡ್, ಕಂಪ್ಯೂಟರ್ ತರಬೇತಿ



ಮೈಸೂರು-ತಿ.ನರಸೀಪುರ ರಸ್ತೆಯಲ್ಲಿರುವ ಮೈಸೆಮ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶಿಕ್ಷಕರಿಗೆ ಆಯೋಜಿಸಿದ್ದ ಸ್ಮಾರ್ಟ್ ಬೋರ್ಡ್, ಕಂಪ್ಯೂಟರ್ ತರಬೇತಿ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಉದ್ಘಾಟಿಸಿದರು.

ಮೈಸೂರು,ಫೆ.4(ಜಿಎ)-ಮೈಸೂರು-ತಿ.ನರಸೀಪುರ ರಸ್ತೆಯಲ್ಲಿರುವ ಮೈಸೆಮ್ ಇಂಜಿನಿಂಯರಿಂಗ್ ಕಾಲೇಜಿನಲ್ಲಿ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗೆ ಸ್ಮಾರ್ಟ್ ಬೋರ್ಡ್, ಕಂಪ್ಯೂಟರ್ ತರಬೇತಿ ಕಾರ್ಯಾಗಾರ ನಡೆಸಲಾಯಿತು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರವನ್ನು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪ ನಿರ್ದೇಶಕಿ ಹೆಚ್.ಎಸ್. ಗಿರಿಜಾಂಬ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಈ ತರಬೇತಿಗೆ ಮೈಸೂರು, ಕೊಡಗು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ 50 ಜನ ಶಿಕ್ಷಕರು ತರಬೇತಿಗೆ ಬಂದಿದ್ದು, ಶಿಕ್ಷಕರು ಆಧುನಿಕ ಡಿಜಿಟಲ್ ಉಪಕರಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಬುಡಕಟ್ಟು ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಸರ್ಕಾರ ಈ ತರಬೇತಿ ಕಾರ್ಯಾಗಾರ ಆಯೋಜಿಸಿದ್ದು, ಶಿಕ್ಷಕರು ಇದರ ಸದುಪಯೋಗಪಡಿಸಿಕೊಳ್ಳಬೇಕು. ಶಿಕ್ಷಕರು ಸ್ಮಾರ್ಟ್ ಬೋರ್ಡ್ ಹಾಗೂ ಕಂಪ್ಯೂಟರ್ ತರಬೇತಿ ಪಡೆದು ಕೊಂಡು ಆಶ್ರಮ ಶಾಲೆಯ ಮಕ್ಕಳಿಗೆ ಪರಿಣಾಮಕಾರಿಯಾಗಿ ಶಿಕ್ಷಣವನ್ನು ನೀಡಿ ಎಂದು ಸಲಹೆ ನೀಡಿದರು.

ಮೈಸೆಮ್ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಸ್.ಮಂಜುನಾಥ್ ಮಾತನಾಡಿ, ಸ್ಮಾರ್ಟ್ ಬೋರ್ಡ್ ಮತ್ತು ಕಂಪ್ಯೂಟರ್ ತರಬೇತಿಗೆ ಬೇಕಾದ ಎಲ್ಲಾ ಸಹಕಾರವನ್ನು ಸಂಸ್ಥೆ ವತಿಯಿಂದ ನೀಡುತ್ತೇವೆ. ನಮ್ಮಲ್ಲಿರುವ ನುರಿತ ಪ್ರೊಫೆಸರ್‌ಗಳು ತರಬೇತಿ ನೀಡುತ್ತಾರೆ. ಇದರ ಸದುಪಯೋಗವನ್ನು ಶಿಕ್ಷಕರು ಪಡೆದುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಮಧುಸೂದನ್, ಕಾಲೇಜಿನ ಅಧ್ಯಾಪಕರಾದ ಡಾ.ಜಯರಾಂ, ಡಾ.ಹರ್ಷಕುಮಾರ್, ಪ್ರೊ.ಅಶ್ವಿನಿ, ಪ್ರೊ.ಬಿ.ಆರ್. ಸಂತೋಷ್, ಪ್ರೊ.ಮಾಧುರಿ, ಪ್ರೊ.ಪ್ರಜ್ವಲ್, ನಾಗೇಂದ್ರ ಹೆಬ್ಬಾರ್, ಭರತ್‌ಕುಮಾರ್, ಮಮತ, ಸಿದ್ದರಾಜು ಉಪಸ್ಥಿತರಿದ್ದರು.

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಚೆಂಬು, ತೆಂಗಿನ ಚಿಪ್ಪು!

ಮೈಸೂರಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕೆ

- ಕಾರ್ಪೊರೇಟ್ ಸ್ಟೈಲ್‌ನಲ್ಲಿರುವ ಆಯ-ವ್ಯಯ
- ಫೇಸ್ ಲೆಸ್, ಬೇಸ್ ಲೆಸ್, ವಿಷನ್‌ಲೆಸ್ ಬಜೆಟ್
- ಹಾಲಿ ರೈಲಿಗೆ ಸ್ಪೀಡ್ ರೈಲೆಂದು ಮರು ನಾಮಕರಣ
- ದೇಶದ ಪ್ರತಿಯೊಬ್ಬರ ತಲೆಮೇಲೆ 4.23 ಲಕ್ಷ ಸಾಲ

ಮೈಸೂರು, ಫೆ.4(ಬಿಎಲ್‌ಯು)-ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಬಜೆಟ್‌ನಿಂದ ಕರ್ನಾಟಕಕ್ಕೆ ಭಾರೀ ಅನ್ಯಾಯವಾಗಿದ್ದು, ಬರೀ ಖಾಲಿ ಚೆಂಬು, ತೆಂಗಿನ ಕಾಯಿ ಚಿಪ್ಪು ನೀಡಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ರಾಜ್ಯದ ಪಾಲು 2 ಲಕ್ಷ ಕೋಟಿ ನೀಡಬೇಕಿತ್ತು. ಆದರೆ 60 ಸಾವಿರ ಕೋಟಿ ಮಾತ್ರ ನೀಡಿದೆ ಎಂದು ಆರೋಪಿಸಿದರು.

ಇರುವ ರೈಲಿಗೆ ಸ್ಪೀಡ್ ನೀಡಿದ್ದಾರೆ: ಹಾಲಿ ಇರುವ ರೈಲುಗಳಿಗೆ ಸ್ಪೀಡ್ ರೈಲು ಎಂದು ಮರು ನಾಮಕರಣ ಮಾಡಿದ್ದಾರೆ. ಮೇಕೆದಾಟು, ಮಹದಾಯಿ ಯೋಜನೆಗೆ ನಯಾ ಪೈಸೆ ಹಣ ನೀಡಿಲ್ಲ. ಅನುದಾನ ನೀಡುವುದಿರಲಿ ಅನುಮತಿ ಕೂಡ ನೀಡುತ್ತಿಲ್ಲ. ಈ ಮೂಲಕ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಖಾಲಿ ಚೆಂಬು, ತೆಂಗಿನ ಕಾಯಿ ಚಿಪ್ಪು ನೀಡುತ್ತಿದೆ ಎಂದು



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿದರು.

ಲಕ್ಷ್ಮಣ್ ಅವುಗಳನ್ನು ಪ್ರದರ್ಶಿಸಿದರು.

ಸಿದ್ದರಾಮಯ್ಯ ಅಭಿವೃದ್ಧಿಗೆ ಸಾಲ ಮಾಡಿದ್ದಾರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಕ್ಕೆ ಬರುವ ಮುನ್ನ ರಾಜ್ಯದ ಸಾಲ 5.65 ಲಕ್ಷ ಕೋಟಿ ಇತ್ತು, ತರುವಾಯ ಅಭಿವೃದ್ಧಿಗಾಗಿ ಸಿದ್ದರಾಮಯ್ಯ ಅವರು 1.13 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಈ ಮೂಲಕ ಕರ್ನಾಟಕದ ಮೇಲೆ 6.78 ಲಕ್ಷ ಕೋಟಿ ಸಾಲವಿದೆ ಎಂದು ಅಂಕಿ ಅಂಶ ವಿವರ ನೀಡಿದರು.

ಭಾರತದ ಮೇಲೆ 218.06 ಕೋಟಿ ಸಾಲವಿದೆ. ಇದರಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸಿದ ಸರ್ಕಾರಗಳು 1947 ರಿಂದ 2014ರವರೆಗೆ 53.06 ಲಕ್ಷ ಕೋಟಿ ಮಾತ್ರ ಸಾಲ ಮಾಡಿತ್ತು. ಆದರೆ 2014ರಿಂದ ಇಲ್ಲಿವರೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 165 ಕೋಟಿ ರೂ. ಸಾಲ ಮಾಡಿದೆ. ಪ್ರತಿ ವರ್ಷ 13 ಲಕ್ಷ ಕೋಟಿ ಬಡ್ಡಿ ಹಾಗೂ 18 ಲಕ್ಷ ಕೋಟಿ ಅಸಲು ಸೇರಿದಂತೆ ಒಟ್ಟು 30 ಕೋಟಿ ಸಾಲವನ್ನು ದೇಶ ಮರು ಪಾವತಿ ಮಾಡಬೇಕಾಗಿದೆ ಎಂದು ಹೇಳಿದರು.

ಈ ಮೂಲಕ ಪ್ರತಿಯೊಬ್ಬರ ತಲೆ ಮೇಲೆ 4.23 ಲಕ್ಷ ಕೋಟಿ ಸಾಲವಿದೆ. ಕೇಂದ್ರ ಸರ್ಕಾರ ಸಾಲದ ಸಾಧನೆ ಮಾಡಿದೆಯೇ ಹೊರತು, ಅಭಿವೃದ್ಧಿ ಮಾಡಿಲ್ಲ. ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಸರ್ಕಾರಕ್ಕೆ ಬೆಲೆ ಏರಿಕೆ ಮೇಲೆ ನಿಯಂತ್ರಣ ಇಲ್ಲದಂತಾಗಿದೆ. ಚಿನ್ನದ ಬೆಲೆ ಗಗನಕ್ಕೇರುತ್ತಿದ್ದು, ಡಾಲರ್ ಮುಂದೆ ರೂಪಾಯಿ ಅಪಮೌಲ್ಯಗೊಳ್ಳುತ್ತಿದೆ. ಒಂದು ಡಾಲರ್‌ಗೆ 92 ರೂಪಾಯಿ ನಿಗದಿಯಾಗಿದೆ ಎಂದು ಲಕ್ಷ್ಮಣ್ ಅಂಕಿ ಅಂಶಗಳ ಸಹಿತ ಕೇಂದ್ರ ಸರ್ಕಾರಕ್ಕೆ ಚಾಟಿ ಬೀಸಿದರು.

ಅಲ್ಲಿವರೆಗೆ ಯಾರು ಬದುಕಿರುತ್ತಾರೋ: ವಿಕಸಿತ ಭಾರತ ಪರಿಕಲ್ಪನೆಯಲ್ಲಿ 2047 ಅನ್ನು ಗುರಿ ಇಟ್ಟುಕೊಂಡು ಭಾರತವನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುತ್ತಾರೆ. ಹಾಗಾದರೆ ದೇಶದ ಅಭಿವೃದ್ಧಿಗೆ ಇನ್ನು 30 ವರ್ಷ ಕಾಯಬೇಕೇ ಎಂದು ಪ್ರಶ್ನಿಸಿದ ಲಕ್ಷ್ಮಣ್, ಅಷ್ಟು ವರ್ಷದವರೆಗೆ ಯಾರು ಬದುಕಿರುತ್ತಾರೋ, ಯಾರು ಸಾಯುತ್ತಾರೋ ತಿಳಿಯದು ಎಂದು ವ್ಯಂಗ್ಯವಾಡಿದರು. ಒಟ್ಟಾರೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಆಯ ವ್ಯಯ ಕಾರ್ಪೊರೇಟ್ ಸ್ಟೈಲ್‌ನಲ್ಲಿದೆ. ಫೇಸ್ ಲೆಸ್, ಬೇಸ್ ಲೆಸ್, ವಿಷನ್ ಲೆಸ್ ಆಗಿರುವ ಸತ್ವವಿಲ್ಲದ ಬಜೆಟ್ ಎಂದು ಲೇವಡಿ ಮಾಡಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಧ್ಯಮ ವಕ್ತಾರ ಕೆ.ಮಹೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಅಬ್ರಾರ್, ನಜ್ಮಾ, ಮುಖಂಡರಾದ ಗೋಪಿನಾಥ್, ಗಿರೀಶ್, ಮಹದೇವ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಿರುಕುಳದಿಂದ ಯುವತಿ ಆತ್ಮಹತ್ಯೆ; ಪತಿ, ಅತ್ತೆ, ಮಾವನಿಗೆ ನಿರೀಕ್ಷಣಾ ಜಾಮೀನಿಗೆ ಕೋರ್ಟ್ ನಕಾರ

ಮೈಸೂರು, ಫೆ.4-ಪತಿ ಹಾಗೂ ಅತ್ತೆಯು ನೀಡುತ್ತಿದ್ದ ಮಾನಸಿಕ ಹಾಗೂ ದೈಹಿಕ ಕಿರುಕುಳದಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದ ಯುವತಿಯ ಪತಿ ಹಾಗೂ ಅತ್ತೆ-ಮಾವನಿಗೆ ನಿರೀಕ್ಷಣಾ ಜಾಮೀನು ನೀಡಲು ಮೈಸೂರಿನ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ನಿರಾಕರಿಸಿದೆ.

ಪ್ರಕರಣದ ವಿವರ: ಮೈಸೂರಿನ ದಟ್ಟಗಳ್ಳಿಯಲ್ಲಿ ಅಡುಗೆ ಸಹಾಯಕರಾಗಿ ದುಡಿಯುತ್ತಿರುವ ಸಹದೇವರಾವ್ ಅವರ ಪುತ್ರಿ ಸಂಪ್ರೀತಾ (28) ದಕ್ಷಿಣ ಕೊಡಗಿನ ಕಳತ್ಮಾಡು ಗ್ರಾಮದ ನಿವಾಸಿ ವಸಂತ್ ಎಂ.ಯು.ಅವರ ಪುತ್ರ ಕುಶಾಲ್ ಮುಕ್ಕಾಟಿ ಎಂಬಾತನನ್ನು ಪ್ರೀತಿಸಿ ವಿವಾಹವಾಗಿದ್ದಳು.

ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿರುವ ಕ್ವಾಂಟಿಫೈ ಅನಾಲಿಟಿಕ್ಸ್ ಸಲ್ಯೂಷನ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಸೈಬರ್ ಸೆಕ್ಯೂರಿಟಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಕುಶಾಲ್ ವಿವಾಹದ ನಂತರ ತನ್ನ ತಾಯಿಯ ಪ್ರಚೋದನೆಯ ಮೇರೆಗೆ ಪತ್ನಿಗೆ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದ. ಪತಿ ಕುಶಾಲ್ ಆಕೆ ಗರ್ಭಿಣಿ ಆದಾಗ ಬಲವಂತವಾಗಿ ಗರ್ಭಪಾತ



ಪತಿ ಕುಶಾಲ್ ಹಾಗೂ ಅತ್ತೆಯೊಂದಿಗೆ ಮೃತ ಸಂಪ್ರೀತಾ.

ಮಾಡಿಸಿದ್ದ. ನಂತರ ಆಕೆಯನ್ನು ಮನೆಯಿಂದ ಓಡಿಸಿ ತಲೆ ಮರೆಸಿಕೊಂಡಿದ್ದ. ಫೋನ್ ಕರೆಗೂ ಸಿಗುತ್ತಿರಲಿಲ್ಲ. ಮನನೊಂದ ಸಂಪ್ರೀತಾ ಮೈಸೂರಿನ ದಟ್ಟಗಳ್ಳಿಯಲ್ಲಿರುವ ತನ್ನ ತವರು ಮನೆಗೆ ಬಂದು ಈ ವಿಚಾರಗಳನ್ನು ತನ್ನ ಪೋಷಕರಿಗೆ ತಿಳಿಸಿದ್ದಳು. ನಂತರ ಮನನೊಂದು ತನ್ನ ಸಾವಿಗೆ ಪತಿ ಹಾಗೂ ಅತ್ತೆಯ ಕಿರುಕುಳವೇ ಕಾರಣ ಎಂದು ಡೆತ್ ನೋಟ್ ಬರೆದಿಟ್ಟು 10.12.2025ರಂದು ಸಂಜೆ ನೇಣಿಗೆ ಶರಣಾಗಿದ್ದರು. ಪ್ರಕರಣ ದಾಖಲಿಸಿಕೊಂಡ ಕುವೆಂಪುನಗರ ಪೊಲೀಸರು ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ಸಲ್ಲಿಸಿ ತನಿಖೆ ನಡೆಸುತ್ತಿದ್ದರು.

ಈ ನಡುವೆ ಬಂಧನದ ಭೀತಿಯಿಂದ ಪಾರಾಗಲು ಸಂಪ್ರೀತಾಳ ಪತಿ ಕುಶಾಲ್, ಆತನ ತಂದೆ ವಸಂತ ಹಾಗೂ ತಾಯಿ ರೇಣುಕಾ ನಿರೀಕ್ಷಣಾ ಜಾಮೀನು ಕೋರಿ ಮೈಸೂರಿನ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಕೆ.ಎನ್. ರೂಪಾ ಅವರು ಅಪರಾಧದ ಗಂಭೀರತೆ ಪರಿಗಣಿಸಿ ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ನೀಡಲು ನಿರಾಕರಿಸಿ ಅರ್ಜಿಯನ್ನು ತಿರಸ್ಕರಿಸಿದ್ದಾರೆ.

ರಾಜ್ಯದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಎ.ಎನ್.ಮಧು ತಕರಾರು ಸಲ್ಲಿಸಿ, ವಾದಿಸಿದ್ದರು. ಸಂಪ್ರೀತಾ ಅವರಿಗೆ ಮಾನಸಿಕ, ದೈಹಿಕ ಕಿರುಕುಳ ನೀಡಿ, ಆಕೆ ಆತ್ಮಹತ್ಯೆಗೆ ಶರಣಾಗಲು ಪ್ರಚೋದಿಸುವುದರೊಂದಿಗೆ ಸಾವಿಗೂ ಕಾರಣರಾಗಿ ತಲೆ ಮರೆಸಿಕೊಂಡಿರುವ ಪತಿ ಕುಶಾಲ್ ಹಾಗೂ ಆತನ ತಾಯಿಯ ಬಂಧನಕ್ಕೆ ಕುವೆಂಪು ನಗರ ಪೊಲೀಸರು ಬಲೆ ಬೀಸಿದ್ದಾರೆ.

ಬೆಂಗಳೂರು ಮೆಟ್ರೊ ಪ್ರಯಾಣದರ ಶೇ 5ರಷ್ಟು ಏರಿಕೆ: ಸರ್ಕಾರದ ಸಮ್ಮತಿ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣದರ ಶೇ 5ರಷ್ಟು ಹೆಚ್ಚಳ ಮಾಡುವ ಬಿಎಂಆರ್‌ಸಿಎಲ್ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. ಸದ್ಯ ಮೆಟ್ರೊ ಪ್ರಯಾಣದ ಕನಿಷ್ಠ ದರ 10 ಹಾಗೂ ಗರಿಷ್ಠ ದರ 90 ಇದೆ. ಈ ಪರಿಷ್ಕರಣೆ ಮೂಲಕ ಮೆಟ್ರೊ ಪ್ರಯಾಣದರ ಮತ್ತಷ್ಟು ಏರಿಕೆಯಾಗಲಿದೆ.

ಫೆಬ್ರವರಿ 9ರಿಂದ ಹೊಸ ದರ ಜಾರಿಗೆ ಬರಲಿದೆ. ದರವು ಕನಿಷ್ಠ 1 ಹಾಗೂ ಗರಿಷ್ಠ 5ರಷ್ಟು ಹೆಚ್ಚಳವಾಗಲಿದೆ. ಬಿಎಂಆರ್‌ಸಿಎಲ್ ಪ್ರತಿ ವರ್ಷ ಶೇ 5ರಷ್ಟು ಪ್ರಯಾಣದರ ಹೆಚ್ಚಳ ಮಾಡಬಹುದು ಎಂದು ದರ ನಿಗದಿ ಸಮಿತಿ (ಎಫ್‌ಎಫ್‌ಸಿ) 2025ರಲ್ಲಿ ಶಿಫಾರಸು ಮಾಡಿತ್ತು. ಈ ಬಗ್ಗೆ ಎರಡು ದಿನಗಳ ಹಿಂದೆ ನಡೆದ ಬಿಎಂಆರ್‌ಸಿಎಲ್ ಮಂಡಳಿ ಸಭೆಯಲ್ಲಿ ಚರ್ಚೆ ನಡೆದಿತ್ತು. ಶೇ. 5 ಏರಿಸಲು ಅನುಮೋದನೆ ನೀಡುವಂತೆ ರಾಜ್ಯ ಸರ್ಕಾರವನ್ನು ಕೇಳಿತ್ತು. ರಾಜ್ಯ ಸರ್ಕಾರವು ಸೋಮವಾರ ಅನುಮೋದನೆ ನೀಡಿದೆ.

ಫೆ.28ರೊಳಗೆ ಆಟೋ ಮೀಟರ್‌ಗಳ ಅಧಿಕೃತ ದುರಸ್ತಿಗೆ ಸೂಚನೆ

ಮೈಸೂರು,ಫೆ.4- ದಿನಾಂಕ: 12.11.2025 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಾರಿಗೆ ಪ್ರಾಧಿಕಾರದ ಸಭೆಯ ನಡವಳಿಯಂತೆ, ಮೈಸೂರು ಜಿಲ್ಲೆಯಲ್ಲಿರುವ ಆಟೋರಿಕ್ಷಾಗಳ ಬಾಡಿಗೆ ದರ ಪರಿಷ್ಕರಣೆಯಾಗಿದ್ದು, ಎಲ್ಲಾ ಆಟೋರಿಕ್ಷಾ ಚಾಲಕರು, ಮಾಲೀಕರು ತಮ್ಮ ಆಟೋರಿಕ್ಷಾ ಮೀಟರ್‌ಗಳನ್ನು ಹೊಸ ದರಕ್ಕೆ ಅಳವಡಿಸಿಕೊಳ್ಳಲು ಫೆ.28ರವರೆಗೆ ಕಾಲಾವಕಾಶ ನೀಡಲಾಗುತ್ತಿದೆ. ಆದ್ದರಿಂದ ಮೈಸೂರು ಜಿಲ್ಲೆಯಲ್ಲಿ ಸಂಚರಿಸುವ ಎಲ್ಲಾ ಆಟೋರಿಕ್ಷಾ ಚಾಲಕರು, ಮಾಲೀಕರು ತಮ್ಮ ಆಟೋರಿಕ್ಷಾ ಮೀಟರ್‌ಗಳನ್ನು ಮೊದಲ 2 ಕಿಮೀಗಳಿಗೆ ಕನಿಷ್ಠ ದರವನ್ನು ರೂ.36 ಹಾಗೂ ನಂತರದ ಪ್ರತಿ ಕಿಲೋ ಮೀಟರ್‌ಗೆ ರೂ.18ರಂತೆ ಅಧಿಕೃತ ದುರಸ್ತಿದಾರರಿಂದ ಬದಲಾಯಿಸಿಕೊಂಡು ನಿಗದಿತ ದಿನಾಂಕದೊಳಗೆ ಕಚೇರಿಗೆ ಸತ್ಯಾಪನೆ ಹಾಗೂ ಮುದ್ರೆಗೆ ಹಾಜರುಪಡಿಸುವಂತೆ ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರಪಾಲಿಕೆ ವ್ಯಾಪ್ತಿಯ ರಸ್ತೆಬದಿ ಮರಗಳ ಸಮೀಕ್ಷೆಗೆ ಮಂಗಳೂರು ಸಂಸ್ಥೆಯೊಂದಿಗೆ ಒಡಂಬಡಿಕೆ



ಮರಗಳ ಸಮೀಕ್ಷೆಗೆ ಮೈಸೂರು ಪಾಲಿಕೆಯೊಂದಿಗೆ ಸಿಎಫ್‌ಎಲ್ ಒಡಂಬಡಿಕೆ.

ಮೈಸೂರು, ಫೆ.4(ಎಂಕೆ)- 'ಮೈ-ಮರ' ಶೀರ್ಷಿಕೆಯಡಿ ಮೈಸೂರು ನಗರಪಾಲಿಕೆ ವ್ಯಾಪ್ತಿಯ ರಸ್ತೆ ಬದಿಯ ಸಾಲು ಮರಗಳ ಸಮೀಕ್ಷೆ ನಡೆಸಲು ಪಾಲಿಕೆ ಹಾಗೂ ಮಂಗಳೂರು ಮೂಲದ ಸೆಂಟರ್ ಫಾರ್ ಅಡ್ವಾನ್ಸ್ ಲರ್ನಿಂಗ್(ಸಿಎಫ್‌ಎಲ್) ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಮೈಸೂರು ಅರಮನೆ ಮಂಡಳಿ ಸಹಯೋಗದೊಂದಿಗೆ ಸಿಎಫ್‌ಎಲ್ ವತಿಯಿಂದ ರಸ್ತೆ ಬದಿ ಮರಗಳ ಸಮೀಕ್ಷೆ ನಡೆಸಲು ಅನುಮತಿ ನೀಡಲಾಗಿದ್ದು, ಈಗಾಗಲೇ ಸಮೀಕ್ಷೆಯನ್ನು ಆರಂಭಿಸಲಾಗಿದೆ. ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರು ಸಮೀಕ್ಷೆಯಲ್ಲಿ ಭಾಗವಹಿಸಲಿದ್ದು, ಪ್ರತೀ ಮರದ ಪ್ರಭೇದ, ದಪ್ಪ ಮತ್ತು ಅಂದಾಜು ಎತ್ತರದ ಮಾಹಿತಿಯನ್ನೊಳಗೊಂಡ ವರದಿಯನ್ನು ಸಿದ್ದಪಡಿಸಿ ಪಾಲಿಕೆಗೆ ಸಲ್ಲಿಸಲಿದ್ದಾರೆ.

ಸಮೀಕ್ಷೆಯಿಂದ ಪಾಲಿಕೆ ವ್ಯಾಪ್ತಿಯ ರಸ್ತೆಗಳ ಬದಿಯಲ್ಲಿರುವ ಮರಗಳ ಸಂಪೂರ್ಣ ಮಾಹಿತಿ ಲಭ್ಯವಾಗಲಿದ್ದು, ರಸ್ತೆ ಅಗಲೀಕರಣ ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿ ನಿರ್ಧಾರಗಳನ್ನು ಕೈಗೊಳ್ಳಲು ಅನುಕೂಲವಾಗಲಿದೆ. ಸಮೀಕ್ಷೆ ವೇಳೆ ಸಾರ್ವಜನಿಕರು ಸೂಕ್ತ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.

ಒಡಂಬಡಿಕೆ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ, ಸಿಎಫ್‌ಎಲ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಜೋಯಾಲುಕ್ಕಾಸ್‌ನಿಂದ ಆಭರಣಗಳ ಮಜೂರಿ ಮೇಲೆ ಶೇ.40 ರಿಯಾಯಿತಿ!

ಫೆ.22ರವರೆಗೆ ದೇಶದ ಎಲ್ಲಾ ಶೋರೂಂಗಳಲ್ಲಿ ಈ ಕೊಡುಗೆ ಲಭ್ಯ

ಮೈಸೂರು, ಫೆ. 4-ವಿಶ್ವದ ಅಚ್ಚುಮೆಚ್ಚಿನ ಜ್ಯುವೆಲ್ಲರ್ ಜೋಯಾಲುಕ್ಕಾಸ್ 'ರಾಷ್ಟ್ರವ್ಯಾಪಿ ವರ್ಷದ ಅತಿದೊಡ್ಡ ಆಭರಣ ಮಾರಾಟ' ಘೋಷಿಸಿದೆ.

ಈ ಉತ್ತೇಜಕ ಉಪಕ್ರಮವು ಭಾರತದಲ್ಲಿ ಆಭರಣಪ್ರಿಯರಿಗೆ ಅಸಾಧಾರಣ ಮೌಲ್ಯವನ್ನು ತರುವ ಗುರಿ ಹೊಂದಿದೆ. ಜ.23ರಿಂದ ಫೆ.22, 2026ರವರೆಗೆ ಆಯೋಜಿಸಿರುವ ಈ ಉತ್ಸವವು ತನ್ನ ವ್ಯಾಪಕವಾದ ರೀಟೇಲ್ ಜಾಲದ ಮೂಲಕ ಸರಿಸಾಟಿಯಿಲ್ಲದ ಆಯ್ಕೆ, ಗುಣಮಟ್ಟ ಮತ್ತು ಸೇವೆಯನ್ನು ನೀಡುವ ಜೋಯಾಲುಕ್ಕಾಸ್‌ನ ಬದ್ಧತೆಯನ್ನು ಖಾತ್ರಿಪಡಿಸುತ್ತದೆ.

Joyalukkas

12 ದೇಶಗಳಲ್ಲಿ 190ಕ್ಕೂ ಹೆಚ್ಚು ಶೋರೂಮ್‌ಗಳನ್ನು ಹೊಂದಿರುವ ಜೋಯಾಲುಕ್ಕಾಸ್, ಜಾಗತಿಕ ವಿನ್ಯಾಸ, ಸಂವೇದನೆಗಳನ್ನು ವಿಶ್ವಾಸಾರ್ಹ ಕರಕುಶಲತೆಯೊಂದಿಗೆ ಸಂಯೋಜಿಸುತ್ತ ಜನಪ್ರಿಯವಾಗಿದ್ದು, ಲಕ್ಷಾಂತರ ಗ್ರಾಹಕರಿಗೆ ಆದ್ಯತೆಯ ಆಭರಣ ತಾಣವಾಗಿದೆ.

ಈ ಅಭಿಯಾನದ ಅವಧಿಯಲ್ಲಿ, ಚಿನ್ನ, ವಜ್ರ ಮತ್ತು ಅನ್‌ಕಟ್ ವಜ್ರಗಳು, ಅಮೂಲ್ಯ ಹರಳು, ಪ್ಲಾಟಿನಂ ಮತ್ತು ಬೆಳ್ಳಿ ಆಭರಣಗಳು ಸೇರಿದಂತೆ ಬ್ರಾಂಡ್‌ನ ವ್ಯಾಪಕ ಶ್ರೇಣಿಯ ಆಭರಣ ವಿಭಾಗಗಳಲ್ಲಿ ಮಜೂರಿಯಲ್ಲಿ (V.A.) ಶೇ.40% ರಿಯಾಯಿತಿಯನ್ನು ಗ್ರಾಹಕರು ಪಡೆಯುವ ಅವಕಾಶವಿದೆ.

ಈ ಕೊಡುಗೆಯು ಜೋಯಾಲುಕ್ಕಾಸ್‌ನ ಒಂದು ಮಿಲಿಯನ್‌ಗಿಂತಲೂ ಹೆಚ್ಚು ವಿನ್ಯಾಸ ಆಯ್ಕೆಗಳ ವ್ಯಾಪಕತೆಯಲ್ಲಿ ವಿಸ್ತೃತಗೊಂಡಿದೆ. ಇದು ಭಾರತೀಯ ಸಾಂಪ್ರದಾಯಿಕ ಶೈಲಿ, ಸಮಕಾಲೀನ ಸೃಷ್ಟಿ, ಇಟಾಲಿಯನ್ ಮತ್ತು ಟರ್ಕಿಶ್ ಪ್ರಭಾವ, ಜನಾಂಗೀಯ-ಸಮಕಾಲೀನ ವಿನ್ಯಾಸ ಮತ್ತು ಜಾಗತಿಕವಾಗಿ ಪ್ರೇರೇಪಿತವಾದ ಸಂಗ್ರಹಗಳನ್ನೊಳಗೊಂಡಿದೆ. ಪ್ರತಿಯೊಂದು ಆಭರಣವೂ ಗುಣಮಟ್ಟ, ನಿಖರತೆ ಮತ್ತು ಸೌಂದರ್ಯದ ಶ್ರೇಷ್ಠತೆಯ ಬ್ರಾಂಡ್‌ನ ವಿಶಿಷ್ಟ ಲಕ್ಷಣವನ್ನು ಪ್ರತಿಬಿಂಬಿಸುತ್ತದೆ.

ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಡಾ.ಜೋಯ್ ಆಲುಕ್ಕಾಸ್ ಅವರು ಮಾತನಾಡಿ, ಜೋಯಾಲುಕ್ಕಾಸ್‌ನಲ್ಲಿ, ಪ್ರತಿಯೊಬ್ಬ ಗ್ರಾಹಕರು ನೈಜವಾದ ಸಂತಸದಾಯಕ ಖರೀದಿ ಅನುಭವವನ್ನು ಆನಂದಿಸುತ್ತಾರೆ ಎಂಬುದ ಖಚಿತಪಡಿಸಿಕೊಳ್ಳುವುದು ನಮ್ಮ ಧ್ಯೇಯವಾಗಿದೆ. ವರ್ಷದ ಅತಿದೊಡ್ಡ ಆಭರಣ ಉತ್ಸವದ ಮೂಲಕ, ನಮ್ಮ ಗ್ರಾಹಕರಿಗೆ ಅತ್ಯುತ್ತಮ ಮತ್ತು ವಿಶಾಲವಾದ ವೈವಿಧ್ಯಮಯ ಆಭರಣಗಳ ಆಯ್ಕೆಯೊಂದಿಗೆ ಅಸಾಧಾರಣ ಮೌಲ್ಯವನ್ನು ನೀಡಲು ನಾವು ಸಂತೋಷಪಡುತ್ತೇವೆ. ಈ ಉಪಕ್ರಮವು ಜೋಯಾಲುಕ್ಕಾಸ್‌ನ ಪ್ರತಿ ಶೋರೂಂನಲ್ಲಿ ಉನ್ನತ ಸೇವೆ, ಉತ್ಕೃಷ್ಟ ವಾತಾವರಣ ಮತ್ತು ವಿಶ್ವದರ್ಜೆಯ ಕರಕುಶಲತೆಯನ್ನು ತಲುಪಿಸುವ ನಮ್ಮ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.4-ರಾಮೇನಹಳ್ಳಿ ವಿದ್ಯುತ್ ಮಾರ್ಗಗಳಲ್ಲಿ ರಿಕಂಡಕ್ಟರಿಂಗ್ ಕೆಲಸದ ನಿಮಿತ್ತ ಫೆ.5, 6, 7, 8 ಮತ್ತು 9ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಹೊಸಕೋಟೆ, ದಡದಕಲ್ಲಹಳ್ಳಿ, ಹನುಮಂತಪುರ, ರಾಮೇನಹಳ್ಳಿ, ಗುಂಗ್ರಾಲ್ ಛತ್ರ, ಯಾಚೇಗೌಡನಹಳ್ಳಿ, ಸಾಗರಕಟ್ಟೆ, ಯಡ್ಡಹಳ್ಳಿ, ಛತ್ರದಕೊಪ್ಪಲು, ರಟ್ನಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


ನಿಧನ

ಶ್ರೀಮತಿ ಶಾಂತ ವಸಂತಕುಮಾರ್



ಮೈಸೂರು, ಫೆ.4- ಖ್ಯಾತ ಸಾಹಿತಿ ದಿವಂಗತ ಡಾ.ಮಳಲಿ ವಸಂತ್ ಕುಮಾರ್ ಅವರ ಪತ್ನಿ ಶ್ರೀಮತಿ ಶಾಂತ ವಸಂತ ಕುಮಾರ್ (70) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರ ರನ್ನ ಮಳಲಿ, ಪುತ್ರಿ ರೂಪ ಮಳಲಿ ಅವರನ್ನು ಅಗಲಿದ್ದಾರೆ. ಇವರ ಅಂತಿಮ ಸಂಸ್ಕಾರ ಇಂದು ಸಂಜೆ ಕಳಲವಾಡಿಯ ಅವರ ಭೂಮಿತಾಯಿ ತೋಟದಲ್ಲಿ ನಡೆಯಿತೆಂದು ಕುಟುಂಬದ ಮೂಲಗಳು ತಿಳಿಸಿವೆ.


ಎನ್. ಪ್ರಭಾವತಿ



ಮೈಸೂರಿನ ಯಾದವಗಿರಿ ನಿವಾಸಿ ಹಾಗೂ ಆಡಿಟರ್ ಡಿ.ನಾಗರಾಜು ಅವರ ಪತ್ನಿ ಎನ್.ಪ್ರಭಾವತಿ (81) ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ, ಪುತ್ರ ಆದಿತ್ಯ ವಿಕ್ರಮ್ ಬಗಾರೆ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಎಂ.ಸುರೇಶ್ ರಾವ್



ಮೈಸೂರು: ಮಂಗಳೂರು ಗಣೇಶ್ ಬೀಡಿ ವರ್ಕ್ಸ್‌ನ ಮಾಜಿ ಪಾಲುದಾರ, ಸುರೇಶ್ ಕಲರ್ ಲ್ಯಾಬ್ಸ್‌ನ ಮಾಲೀಕರಾದ ಎಂ.ಸುರೇಶ್ ರಾವ್(78 ವರ್ಷ) ಬುಧವಾರ ನಿಧನರಾದರು.

ಮೃತರು ಪುತ್ರ ಸಂದೀಪ್ ಶೆಣೈ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 9.30ಕ್ಕೆ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಬಿ.ಶಿವಕುಮಾರಸ್ವಾಮಿ



ಮೈಸೂರು: ಸುತ್ತೂರಿನ ಎಸ್.ಬಿ.ಶಿವಕುಮಾರ ಸ್ವಾಮಿ (92 ವರ್ಷ) ಅವರು ಬುಧವಾರ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಮೈಸೂರಿನ ಲಲಿತಾದ್ರಿಪುರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.2.2026 ಗುರುವಾರ, ಮಳೆ ನಕ್ಷತ್ರ: ಶ್ರವಣ 24.01.2026ರಿಂದ 05.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉತ್ತರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಹಾಗೂ ಕಣ್ಣು-ಮೂಗಿನ ಅಲರ್ಜಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ಕ್ರೈಸ್ಟ್ ಕಾಲೇಜು :** ಲೈಂಗಿಕ ಸಮಸ್ಯೆಗಳ ವಿವಿಧ ಆಯಾಮಗಳ ಅನಾವರಣಗೊಳಿಸುವುದು ಕುರಿತು ಕಾರ್ಯಾಗಾರ, ಮುಖ್ಯ ಅತಿಥಿಗಳು : ಡಾ. ಟಿ.ಎಸ್.ಸತ್ಯನಾರಾಯಣರಾವ್, ಸ್ಥಳ: ಕ್ರೈಸ್ಟ್ ಕಾಲೇಜು, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಸುರಭಿ ಫೌಂಡೇಷನ್ ಟ್ರಸ್ಟ್ :** ಸಿಎಸ್‌ಆರ್ ಉಪಕ್ರಮದ ಅಡಿಯಲ್ಲಿ ಅಂಗನವಾಡಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಸ್‌ಬಿಐ ಇಟ್ಟಿಗೆಗೂಡು ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ರುಬಿನಾ ಶಾಹೂ, ಅತಿಥಿಗಳು : ಟ್ರಸ್ಟ್ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಮಂಗಳ ಮೆಟ್ರಿ, ಆರ್. ರೋಹಿತ್, ಶ್ರೀಮತಿ ಸುಮಿತ್ರಾ, ಎಂ. ವಿಶಾಲ್, ಶ್ರೀಮತಿ ಎಂ. ತೇಜಸ್ವಿ, ಎಂ. ರೇತನ್, ಸ್ಥಳ: ಕೋಡ್ ನಂ. 30, ನಜರ್‌ಬಾದ್ ಪಾರ್ಕ್, ಬೆಳಗ್ಗೆ 11ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಯುವರಾಜ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಸ್. ಮಹದೇವಮೂರ್ತಿ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ಅವರಿಂದ ಸಂವಿಧಾನದ ಆಶಯಗಳು ಕುರಿತು ಉಪನ್ಯಾಸ, ಉಪಸ್ಥಿತರು : ಕಾಲೇಜು ಸಂಯೋಜಕ ಡಾ. ರವಿಚಂದ್ರ, ಸ್ಥಳ: ಐನ್‌ಸ್ಟೀನ್ ಸಭಾಂಗಣ, ಮಧ್ಯಾಹ್ನ 12ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ-ಪುರಂದರ ನಮನ, 'ಲಿಂಗಪುರಾಣ ಮತ್ತು ಬ್ರಹ್ಮಾಂಡ ಪುರಾಣ', ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ಸಂಚಲನ (ಮೈಸೂರು), ಅರಳಿ ಸೇವಾಟ್ರಸ್ಟ್ (ಬೆಂಗಳೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಚಲನ ದಶಮಾನೋತ್ಸವ-ರಂಗ ಸಂಭ್ರಮ, ಸಂಜೆ 6 ರಿಂದ ಸಭಾ ಕಾರ್ಯಕ್ರಮ, ಉಪಸ್ಥಿತರು : ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಎಚ್.ಡಿ. ಗಣೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ರಂಗ ನಿರ್ದೇಶಕ ಆಸಿಫ್ ಕ್ಷತ್ರಿಯ, ಯುವ ಮುಖಂಡ ಡಾ. ಚನ್ನಕೇಶವ, ನಮ್ಮ ರಾಗ ತಂಡದಿಂದ ಜನಪದ ಗೀತೆಗಳು, ರಂಗರಥ ತಂಡದಿಂದ 'ಇದ್ದಾಗ ನಿಮ್ದು ಕದ್ದಾಗ ನಮ್ದು' ನಾಟಕ ಪ್ರದರ್ಶನ, ಮೂಲ : ದಿ ವರ್ಚುಯಸ್ ಬರ್ಗಲರ್, ಸಂಗೀತ : ದಿಗ್ವಿಜಯ ಹೆಗ್ಗೋಡು, ನಿರ್ದೇಶನ : ಆಸಿಫ್ ಕ್ಷತ್ರಿಯ ಮತ್ತು ಶ್ವೇತ ಶ್ರೀನಿವಾಸ್, ಸ್ಥಳ: ಕಿರುರಂಗ ಮಂದಿರ, ಸಂಜೆ 6 ಗಂಟೆಯಿಂದ.
- **ಬ್ಲಡ್ ಆನ್‌ಕಾಲ್ ಕ್ಲಬ್ ಮೈಸೂರು :** ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಆರೋಗ್ಯ ರಕ್ಷಕ ಸೇವಾ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು : ಬಿಜೆಪಿ ನಗರ ಅಧ್ಯಕ್ಷ ನಾಗೇಂದ್ರ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಡಾ. ಎಸ್.ಪಿ. ಯೋಗಣ್ಣ, ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರದ ಆವರಣ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ-ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ-ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ ಎ.ಎನ್. ಶೀಲಾ, ವ್ಯಾಖ್ಯಾನ-ಎಂ.ವೈ.ಎಸ್. ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್. ಶಶಾಂಕ್-ಕೊಳಲು ವಾದನ, 11.00 ಸುತ್ತಮುತ್ತ- ಪ್ರಸ್ತುತಿ-ಚಂದನಾ .ಸಿ, ನಿತಿನ್‌ರಾಜಾರಾಂ ಶಾಸ್ತ್ರೀ ಹಾಗೂ ಅರ್ಚನಾ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ-ಸ್ನೇಹಾ ಟಿ.ಎಸ್., 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ- ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು-ರೇಖಾ ರವಿಶಂಕರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ-ನಿವೃತ್ತ ಪ್ರಾಂಶುಪಾಲರೂ ಹಾಗೂ ಜೀವನಾಡಿ ಪತ್ರಿಕೆಯ ಸಂಪಾದಕರೂ ಆಗಿರುವ ಮಂಡ್ಯದ ಡಾ.ಮುದ್ದೇಗೌಡ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸಿದ್ದಾರೆ ನಿವೇದಿತಾ ಎಚ್., 6.15 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 6.50 ಕೃಷಿರಂಗ, ಹಣ್ಣು-ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಹಾಪ್‌ಕಾಮ್ಸ್ ಮೂಲಕ ತೋಟಗಾರಿಕಾ ಉತ್ಪನ್ನಗಳ ಮಾರಾಟ ಈ ಕುರಿತು ಮೈಸೂರು ಜಿಲ್ಲಾ ಹಾಪ್ ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಎಂ. ಇಂಧೂಧರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು -ಎನ್.ಕೇಶವಮೂರ್ತಿ, 7.45 ವಿಧಾನ ಮಂಡಲದಲ್ಲಿ ಇಂದು, 8.00 ಯುವವಾಣಿ - ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ -ರಾಜ್ಯಶಾಸ್ತ್ರ (Political Sceince), ಭಾಗವಹಿಸುವವರು- ಮೈಸೂರಿನ ವಾಣಿವಿಲಾಸ ಅರಸು ಬಾಲಕಿಯರ ಪದವಿಪೂರ್ವ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಹೇಮಲತಾ ಟಿ.ಕೆ., ಪ್ರಸ್ತುತಿ-ದಿಗ್ವಿಜಯ್ .ಬಿ, 9.30 ಕನ್ನಡ ಭಾರತಿ, 10.00 ರಾಷ್ಟ್ರೀಯ ಕಾರ್ಯಕ್ರಮ-ಪಾದೇಶಿಕ ಜಾನಪದ ಹಾಗೂ ಲಘು ಸಂಗೀತ ಕಾರ್ಯಕ್ರಮ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 5 ಗುರುವಾರ 2026

ಮೈಸೂರು ಮಿತ್ರ 46 ಅತ್ಯುತ್ತಮ ಪತ್ರಿಕೋದ್ಯಮ

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 287 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಪಕ್ಷಗಳ ಗದ್ದಲ, ಸಭಾತ್ಯಾಗದ ನಡುವೆ

ಮನರೇಗಾ ಮರುಸ್ಥಾಪನೆ ನಿರ್ಣಯ ವಿಧಾನಸಭೆಯಲ್ಲಿ ಅಂಗೀಕಾರ

ಬೆಂಗಳೂರು, ಫೆ.4– ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ಯೋಜನೆ ಮಾರ್ಪಡಿಸಿ ಕೇಂದ್ರ ಸರ್ಕಾರ ರೂಪಿಸಿರುವ ವಿಬಿಜಿ ರಾಮ್ ಜಿ ಕಾಯಿದೆ ರದ್ದುಪಡಿಸಬೇಕು, ಮನರೇಗಾ ಕಾಯಿದೆ ಮರು ಸ್ಥಾಪಿಸಬೇಕು ಎಂದು ಆಗ್ರಹಿಸಿ ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ನಿರ್ಣಯಕ್ಕೆ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರ ಸಭಾತ್ಯಾಗದ ನಡುವೆ ವಿಧಾನಸಭೆಯಲ್ಲಿ ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿನ್ನೆ ಮಂಡಿಸಿದ ಈ ನಿರ್ಣಯದ ಪರವಾಗಿ ಒಟ್ಟು 17 ಮಂದಿ ಸದಸ್ಯರು 6 ಗಂಟೆ 57 ನಿಮಿಷಗಳ ಕಾಲ ಚರ್ಚೆ ನಡೆಸಿದ್ದಾರೆ ಎಂದು ಸಭಾಧ್ಯಕ್ಷ ಯು ಟಿ ಖಾದರ್ ಪ್ರಕಟಿಸಿದರು.

ಚರ್ಚೆ ನಡೆಯುತ್ತಿರುವ ವೇಳೆ ಪ್ರಮುಖ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಅಬಕಾರಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ನೈತಿಕ ಹೊಣೆ ಹೊತ್ತು ಅಬಕಾರಿ ಮಂತ್ರಿ ಆರ್ ಬಿ ತಿಮ್ಮಾಪುರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಮತ್ತು ಹಗರಣದ ಬಗ್ಗೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿ ಧರಣಿ ನಡೆಸುತ್ತಿದ್ದರು ಈ ಧರಣಿಯ ನಡುವೆಯೇ ಕಾಂಗ್ರೆಸ್ಸಿನ ಕೋನರೆಡ್ಡಿ, ಶರತ್ ಬಚ್ಚೇಗೌಡ, ಶಿವಲಿಂಗೇಗೌಡ ಸೇರಿದಂತೆ ಅನೇಕರು ಮಾತನಾಡಿ, ಕೇಂದ್ರ ಸರ್ಕಾರದ ವಿಬಿ ಜಿ ರಾಮ್ ಜಿ ಕಾಯಿದೆಯನ್ನು ಬಲವಾಗಿ ವಿರೋಧಿಸಿದರು. ಗ್ರಾಮೀಣ ಪ್ರದೇಶದ ಜನರ ಜೀವನಾಡಿ ಆಗಿದ್ದ ಮನರೇಗಾ ಯೋಜನೆಯನ್ನು ರದ್ದುಪಡಿಸುವ ಮೂಲಕ ಕೇಂದ್ರ ಸರ್ಕಾರ ಗ್ರಾಮ ಪಂಚಾಯಿತಿಗಳ ಅಧಿಕಾರವನ್ನು ಮೊಟಕುಗೊಳಿಸಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ಹೊರಟಿದೆ ಎಂದು ಆಪಾದಿಸಿದರು.

ಅಂತಿಮವಾಗಿ ಮಾತನಾಡಿದ ಗ್ರಾಮೀಣಾಭಿವೃದ್ಧಿ ಮಂತ್ರಿ ಪ್ರಿಯಾಂಕ ಖರ್ಗೆ ಮನರೇಗಾ ಕಾಯ್ದೆಯ ಹಲವಾರು ಯಶಸ್ವಿ ಪ್ರಯೋಗಗಳ ಬಗ್ಗೆ ಸದನದ ಗಮನ ಸೆಳೆದರು ಹಾಗೆಯೇ ▶ 10ನೇ ಪುಟಕ್ಕೆ



ವಿಧಾನಸಭೆಯಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರ ಧರಣಿ.

‘ಥೂ ನಿಮ್ ಯೋಗ್ಯತೆಗೆ ಬೆಂಕಿ ಹಾಕಾ.., ಲೇ ಆರೆಸ್ಸೆಸ್ಸು.. ನಿಂಗೆ ಮಾನ-ಮರ್ಯಾದೆ ಇದ್ಯಾ..!!!’



ಸದನದಲ್ಲಿ ವಿಪಕ್ಷ ಸದಸ್ಯರ ಮೇಲೆ ಹರಿಹಾಯ್ದ ಶಿವಲಿಂಗೇಗೌಡ

ಬೆಂಗಳೂರು: ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಆರೋಪ ಹಿನ್ನೆಲೆಯಲ್ಲಿ ಸಚಿವ ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ ನಡೆಸಿ ಇಂದು ವಿಧಾನಸಭೆಯಲ್ಲಿ ಪ್ರತಿಭಟನೆ ಮುಂದುವರಿಸಿದ ಬಿಜೆಪಿ ನಾಯಕರ ವಿರುದ್ಧ ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ, ಏಕವಚನದಲ್ಲೇ ಹಿಗ್ಗಾಮುಗ್ಗಾ ವಾಗ್ದಾಳಿ ನಡೆಸಿದ ಪ್ರಸಂಗ ನಡೆಯಿತು. ವಿಧಾನಸಭೆಯಲ್ಲಿ ಬಿಜೆಪಿ ನಾಯಕರ ವಿರುದ್ಧ ಕೆಂಡಕಾರಿದ ಶಾಸಕ ಕೆ.ಎಂ ಶಿವಲಿಂಗೇಗೌಡ, ನಿಮಗೆ ಏನಾದರೂ ಮಾನ–ಮರ್ಯಾದೆ ಇದೆಯಾ? ಇದು ಅಸೆಂಬ್ಲಿನಾ ಅಥವಾ ಡ್ಯಾನ್ಸ್ ಮಾಡೋಕೆ ಬಂದಿದ್ದೀರಾ, ನಾವೂ ಧರಣಿ ಮಾಡುತ್ತೇವೆ. ಆದರೆ, ಈ ರೀತಿಯಾಗಿ ಮಾಡಿಲ್ಲ. ▶ 10ನೇ ಪುಟಕ್ಕೆ

ನಾನು ಜೀವನದ ಕೊನೆಗಾಲದಲ್ಲಿದ್ದೇನೆ...

- ಕರ್ನಾಟಕದ ನೀರಾವರಿ ಯೋಜನೆ ಕುರಿತು ಗದ್ಗದಿತರಾದ ದೇವೇಗೌಡರು
- ಈ ವೃದ್ಧನ ಮನವಿಗೆ ಮಾನವೀಯತೆಯಿಂದ ಸ್ಪಂದಿಸಿ
- ನನ್ನ ರಾಜ್ಯಸಭೆಯ ಅವಧಿ ಇನ್ನು ಒಂದೂವರೆ ತಿಂಗಳಿದೆ
- ಬಿಜೆಪಿ, ಜೆಡಿಎಸ್ ಮೈತ್ರಿಕೂಟ ಅಬಾಧಿತ



ನವದೆಹಲಿ: ರಾಜ್ಯ ಎದುರಿಸುತ್ತಿರುವ ನೀರಾವರಿ ಬಿಕ್ಕಟ್ಟಿನ ಬಗ್ಗೆ ರಾಜ್ಯಸಭೆಯಲ್ಲಿ ಗದ್ಗದಿತರಾಗಿ ಮಾತನಾಡಿದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು, ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿದೆ. ದಯಮಾಡಿ ಪರಿಹರಿಸಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ರಾಜ್ಯಸಭೆಯಲ್ಲಿ ಬುಧವಾರ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದರು. ರಾಜ್ಯದ ಅನೇಕ ನೀರಾವರಿ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಆ ಎಲ್ಲಾ ಯೋಜನೆಗಳಿಗೆ ಅನುಮೋದನೆ ನೀಡುವ ಮೂಲಕ ಕರ್ನಾಟಕ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಸರ್ಕಾರಕ್ಕೆ ಕೈಮುಗಿದು ವಿನಂತಿಸಿದರು.

ರಾಜ್ಯದ ನೀರಾವರಿ ಬಿಕ್ಕಟ್ಟನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಅವರು, ನನ್ನ ರಾಜ್ಯಸಭಾ ಅವಧಿ ಇನ್ನೊಂದುವರೆ ತಿಂಗಳಲ್ಲಿ ಮುಗಿಯಲಿದೆ. ನನ್ನ ರಾಜ್ಯದ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಅವರ ಹಿತ ಕಾಯಿರಿ. ನಾವೆಲ್ಲರೂ ಮನುಷ್ಯರು ಮಳೆ ಬಿದ್ದರೆ ನೀರು, ಇಲ್ಲವಾದರೆ ಇಲ್ಲ. ಈ ಸದನದ ಎಲ್ಲಾ ಸದಸ್ಯರು ಕರ್ನಾಟಕದ ರಕ್ಷಣೆ ಮಾಡಬೇಕು ಎಂಬುದಾಗಿ ನಾನು ಕೈ ಮುಗಿದು ಬೇಡುತ್ತೇನೆ ಎಂದು ಮಾಜಿ ಪ್ರಧಾನಿಗಳು ಮನವಿ ಮಾಡಿದರು.

ಕರ್ನಾಟಕ ನಿರಂತರವಾಗಿ ನೆರೆ ರಾಜ್ಯಗಳ ಜೊತೆ ನೀರಾವರಿ ಹಕ್ಕಿಗಾಗಿ ಹೋರಾಟ ನಡೆಸುತ್ತಿದೆ. ನಾನು ಕೂಡ ನೀರಿಗಾಗಿ 65 ವರ್ಷಗಳಿಂದ ಹೋರಾಟ ನಡೆಸುತ್ತಾ ಬಂದಿದ್ದೇನೆ. ಈ ಸದನದಲ್ಲಿ ನಾನು ನ್ಯಾಯ ಮಂಡಳಿಗಳು ನೀಡಿರುವ ತೀರ್ಪುಗಳ ಬಗ್ಗೆ ಚರ್ಚಿಸಲು ಬಯಸುವುದಿಲ್ಲ. ಕರ್ನಾಟಕ ರಾಜ್ಯಕ್ಕೆ ನೀರಿನದ್ದೇ ಬಹುದೊಡ್ಡ ಬಿಕ್ಕಟ್ಟಾಗಿದೆ. ಒಂದೆಡೆ ತಮಿಳುನಾಡು, ಮತ್ತೊಂದೆಡೆಯಲ್ಲಿ ಆಂಧ್ರಪ್ರದೇಶ, ಇನ್ನೊಂದು ಕಡೆಯಲ್ಲಿ ಗೋವಾದಿಂದ ತೊಂದರೆ ಎದುರಿಸುತ್ತಿದೆ. ನಾನು ಜೀವನದ ಕೊನೆಗಾಲದಲ್ಲಿ ಇದ್ದೇನೆ. ಈ ವೃದ್ಧನ ಮನವಿಗೆ ಮಾನವೀಯತೆಯಿಂದ ಸ್ಪಂದಿಸಿ ಎಂದು ಮನವಿ ಮಾಡಿಕೊಂಡರು.

ನರೇಂದ್ರ ಮೋದಿ ಅವರ ಸರ್ಕಾರ ಈ ಬಿಕ್ಕಟ್ಟಿಗೆ ಪರಿಹಾರ ನೀಡಬೇಕು. ನಾನು ನಿಮ್ಮ (ಎನ್‌ಡಿಎ) ಜೊತೆಯಲ್ಲಿಯೇ ಇರುತ್ತೇನೆ. ನನ್ನ ಮಗ ನಿಮ್ಮ ಸಂಪುಟದಲ್ಲಿ ಇದ್ದಾನೆ. ನಾವು ಮುಂದೆಯೂ ನಿಮ್ಮ ಜೊತೆಗೇ ಇರುತ್ತೇವೆ. ಮೈತ್ರಿಕೂಟ ಬದಲಾವಣೆ ಮಾಡುವ ಯಾವ ಪ್ರಶ್ನೆಯೇ ಇಲ್ಲ. ರಾಜ್ಯದ ಜನರಿಗೆ ನ್ಯಾಯ ಒದಗಿಸಿ ಎಂಬುದಷ್ಟೇ ನನ್ನ ಏಕೈಕ ಮನವಿ ಎಂದು ದೇವೇಗೌಡರು ಕೋರಿಕೊಂಡರು.

ಮೋದಿ ಕೊಂಡಾಡಿದ ಗೌಡರು: ಇದೇ ವೇಳೆ ಯುರೋಪಿಯನ್ ಒಕ್ಕೂಟ ಹಾಗೂ ಅಮೆರಿಕ ಜೊತೆ ಯಶಸ್ವಿಯಾಗಿ ವ್ಯಾಪಾರ ಒಪ್ಪಂದ ಮಾಡಿಕೊಂಡ ಭಾರತದ ರಾಜತಾಂತ್ರಿಕ ಜಾಣ್ಮೆಯನ್ನು ಕೊಂಡಾಡಿದ ಮಾಜಿ ಪ್ರಧಾನಿಗಳು, ಇದಕ್ಕೆ ಕಾರಣೀಭೂತರಾದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಈ ಬಗ್ಗೆ ನಾನು ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ ಎಂಬ ಅಂಶವನ್ನು ಉಲ್ಲೇಖಿಸಿದರು.


ಕೆಸಿ ನಗರ ಕೆರೆಗೆ ದಿಢೀರ್ ಕಾಂಪೌಂಡ್; ಕಂದಾಯ ಸಚಿವರ ‘ಗೊಂದಲಕಾರಿ’ ಉತ್ತರ

ಬೆಂಗಳೂರು, ಫೆ. 4– ಮೈಸೂರಿನ ಕುರುಬಾರಹಳ್ಳಿ ಗ್ರಾಮದ ಸರ್ವೆ ನಂ. 4ರ ಪೈಕಿ ಕೆ.ಸಿ.ನಗರದಲ್ಲಿ ಬರುವ ಕೆರೆಗೆ ಕಾಂಪೌಂಡ್ ನಿರ್ಮಿಸಿರುವ ಸಂಬಂಧ ಶಾಸಕ ಶ್ರೀವತ್ಸ ಅವರ ಗಮನ ಸೆಳೆಯುವ ಪ್ರಸ್ತಾಪಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ನೀಡಿರುವ ಉತ್ತರ ಗೊಂದಲಕಾರಿಯಾಗಿದೆ. ಅವರು ಸ್ಪಷ್ಟವಾಗಿ ಇದು ಕೆರೆ ಹೌದು ಇಲ್ಲವೇ ಅಲ್ಲ ಎಂಬುದನ್ನು ನಿಖರವಾಗಿ ಸ್ಪಷ್ಟಪಡಿಸಿಲ್ಲ. ಹಾಗಾಗಿ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಇತ್ತೀಚೆಗೆ ಕುರುಬಾರಹಳ್ಳಿ ಸರ್ವೆ ನಂ. 4ರ ವ್ಯಾಪ್ತಿ ಕೆ.ಸಿ.ನಗರದಲ್ಲಿನ ಕೆರೆಗೆ ಕಾಂಪೌಂಡ್ ನಿರ್ಮಿಸಿ, ಅಲ್ಲಿ ಎರಡು ಫಲಕಗಳನ್ನು ಅಳವಡಿಸಲಾಗಿತ್ತು ಒಂದರಲ್ಲಿ 23 ಗುಂಟೆ, ಮತ್ತೊಂದರಲ್ಲಿ 3.17 ಎಕರೆ ಭೂಮಿಯನ್ನು ನಮೂದಿಸಿ, ಇಲ್ಲಿ ಅತಿಕ್ರಮ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಇದನ್ನೂ ಮೀರಿ ಪ್ರವೇಶಿಸಿದ್ದಲ್ಲಿ ಕಾನೂನು ರೀತ್ಯಾ ▶ 10ನೇ ಪುಟಕ್ಕೆ



ಶ್ರೀವತ್ಸ

> ಸಜ್ಜನ, ಪ್ರಾಮಾಣಿಕರೆಂದೇ ಪರಿಗಣಿತ ಕಂದಾಯ ಸಚಿವ ಕೃಷ್ಣ ಬೈರೇಗೌಡರಿಂದ ಇಂತಹ ಉತ್ತರ ನಿರೀಕ್ಷಿಸಿರಲಿಲ್ಲ. ಕೆರೆ ಉಳಿಸಲು ಹೋರಾಟ ಒಂದೇ ಮಾರ್ಗ ಎಂದೆನಿಸುತ್ತದೆ. ಜಂಟಿ ಸರ್ವೆ ಬಳಿಕ ಮುಂದಿನ ಕ್ರಮದ ನಿರ್ಧಾರ ಮಾಡುತ್ತೇನೆ.
> – ಶ್ರೀವತ್ಸ, ಶಾಸಕರು



ಕೃಷ್ಣ ಬೈರೇಗೌಡ

ನಕ್ಕರೆ ಅದೇ ಸ್ವರ್ಗ

ಜ್ಯೋತಿಷಿ : ನಿಮ್ಮ ಕೈ ನೋಡಿ ಹೇಳ್ತಿದ್ದೀನಿ. ನಿಮಗೆ 80 ವರ್ಷದವರೆಗೂ ಯಾವುದೇ ಕಾಯಿಲೆ ಬರಲ್ಲ?

ಗುಂಡ : ತುಂಬಾ ಥ್ಯಾಂಕ್ಸ್ ಸ್ವಾಮಿಗಳೇ, ಈ ವಿಷಯವನ್ನು ನನಗೆ ಸಾಲ ಕೊಟ್ಟವರಿಗೂ ಸ್ವಲ್ಪ ಹೇಳ್ತಿರಾ! ಅವರು ಇಂದೋ, ನಾಳೆಯೋ ಸತ್ತು ಹೋಗ್ತಾನೆ ಅನ್ನೋ ತರ ಬಂದು ಬಾಗಿಲು ತಟ್ಟುತ್ತಿದ್ದಾರೆ.

ಮೈಸೂರು ಮಿತ್ರ

ಗುರುವಾರ, ಫೆಬ್ರವರಿ 5, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಬದುಕು ನಮ್ಮನ್ನು ಕಷ್ಟಗಳ ಆಳದ ನೀರಿಗೆ ಆಗಾಗ ಕರೆದೊಯ್ಯುವುದು ನಮ್ಮನ್ನು ಮುಳುಗಿಸುವುದಕ್ಕಲ್ಲ. ಚೆನ್ನಾಗಿ ತೊಳೆದು ಶುದ್ಧವಾಗಿಸಲು ಅಷ್ಟೆ. ಇದು ನಮಗೆ ನೆನಪಿದ್ದರೆ ಬದುಕು ಸುಂದರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೃತಿ ಇಲ್ಲದ ಮಾತು ಕಸ ಬೆಳೆದ ತೋಟವಿದ್ದಂತೆ.

ನಿಮ್ಮ ಪತ್ರಗಳು

ಶಿಕ್ಷಣ ಅಂಕಗಳಿಗಾಗಿ ಮಾತ್ರವಲ್ಲ, ಬದುಕಿಗಾಗಿ ಇರಬೇಕು

ಮಾನ್ಯರೆ,

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಕಗಳು ಮತ್ತು ಶ್ರೇಣಿಗಳಿಗೆ ಅತಿಯಾದ ಮಹತ್ವ ನೀಡಲಾಗುತ್ತಿದೆ. ವಿದ್ಯಾರ್ಥಿಯ ಸಾಮರ್ಥ್ಯವನ್ನು ಅಂಕ ಪಟ್ಟಿಯ ಆಧಾರದಲ್ಲಿ ಅಳೆಯುವ ಮನೋಭಾವ ಹೆಚ್ಚಾಗಿದೆ. ಆದರೆ ಶಿಕ್ಷಣದ ನಿಜವಾದ ಉದ್ದೇಶ ಕೇವಲ ಉತ್ತಮ ಅಂಕಗಳನ್ನು ಪಡೆಯುವುದಲ್ಲ;ಅದು ವ್ಯಕ್ತಿಯನ್ನು ಜೀವನಕ್ಕೆ ಸಿದ್ಧಗೊಳಿಸುವ ಪ್ರಕ್ರಿಯೆಯಾಗಿರಬೇಕು. ಅಂಕಗಳಿಗಾಗಿ ಮಾತ್ರ ಇರುವ ಶಿಕ್ಷಣ ಬದುಕಿನ ನಿಜವಾದ ಸವಾಲುಗಳನ್ನು ಎದುರಿಸಲು ಸಾಕಾಗುವುದಿಲ್ಲ. ಶಿಕ್ಷಣವು ಮನುಷ್ಯನ ಸಮಗ್ರ ವ್ಯಕ್ತಿತ್ವವನ್ನು ರೂಪಿಸಬೇಕು.

ಪಠ್ಯಪುಸ್ತಕದ ಜ್ಞಾನಕ್ಕಿಂತ ಹೊರತಾಗಿ ಜೀವನ ಕೌಶಲ್ಯಗಳು, ಮೌಲ್ಯಗಳು ಮತ್ತು ಚಿಂತನಾ ಶಕ್ತಿಯನ್ನು ಬೆಳೆಸಬೇಕು.ಅಂಕಗಳು ತಾತ್ಕಾಲಿಕ ಸಾಧನೆಯನ್ನು ತೋರಿಸಬಹುದು,ಆದರೆ ಅವು ವ್ಯಕ್ತಿಯ ಸೃಜನಶೀಲತೆ, ಆತ್ಮವಿಶ್ವಾಸ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ನಿರ್ಧರಿಸುವುದಿಲ್ಲ. ಜೀವನದಲ್ಲಿ ಯಶಸ್ಸು ಸಾಧಿಸಲು ಸಂವಹನ ಕೌಶಲ್ಯ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಪರಿಶ್ರಮ ಮತ್ತು ಹೊಂದಿಕೊಳ್ಳುವ ಗುಣಗಳು ಅತ್ಯಂತ ಅಗತ್ಯ.ಅಂಕಗಳ ಒತ್ತಡದಿಂದ ಇಂದು ಅನೇಕ ವಿದ್ಯಾರ್ಥಿಗಳು ಮಾನಸಿಕ ಒತ್ತಡ ಮತ್ತು ಆತಂಕಕ್ಕೆ ಒಳಗಾಗುತ್ತಿದ್ದಾರೆ. ಮೊದಲ ಸ್ಥಾನ ಮತ್ತು ರ‍್ಯಾಂಕ್‌ಗಳಿಗಾಗಿ ನಡೆಯುವ ಸ್ಪರ್ಧೆ ಮಕ್ಕಳ ಸಹಜ ಪ್ರತಿಭೆ ಮತ್ತು ಆಸಕ್ತಿಯನ್ನು ಕುಗ್ಗಿಸುತ್ತದೆ. ಶಿಕ್ಷಣವು ಭಯ ಹುಟ್ಟಿಸುವುದಕ್ಕಿಂತ ಪ್ರೇರಣೆ ನೀಡಬೇಕು.ವಿದ್ಯಾರ್ಥಿಗಳು ಪ್ರಶ್ನೆ ಕೇಳಲು,ಹೊಸದನ್ನು ಪ್ರಯತ್ನಿಸಲು ಮತ್ತು ತಪ್ಪುಗಳಿಂದ ಕಲಿಯಲು ಅವಕಾಶ ಸಿಕ್ಕಾಗಲೇ ನಿಜವಾದ ಕಲಿಕೆ ಸಾಧ್ಯವಾಗುತ್ತದೆ.ಬದುಕಿಗಾಗಿ ಇರುವ ಶಿಕ್ಷಣವು ಸ್ವಾವಲಂಬನೆಯನ್ನು ಬೆಳೆಸುತ್ತದೆ.ಹಣ ನಿರ್ವಹಣೆ, ಸಮಯ ನಿರ್ವಹಣೆ, ಆರೋಗ್ಯ ಅರಿವು, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಜವಾಬ್ದಾರಿ ಇವುಗಳನ್ನು ಶಿಕ್ಷಣದ ಭಾಗವನ್ನಾಗಿಸಬೇಕು. ಇವುಗಳಿಲ್ಲದೆ ಪಡೆದ ಅಂಕಗಳು ಜೀವನದಲ್ಲಿ ಹೆಚ್ಚು ಸಹಾಯ ಮಾಡುವುದಿಲ್ಲ. ಶಿಕ್ಷಣವು ಬದುಕಿನೊಂದಿಗೆ ಸಂಪರ್ಕ ಹೊಂದಿದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ.

ಪೋಷಕರು ಮಕ್ಕಳನ್ನು ಅಂಕಗಳ ಆಧಾರದಲ್ಲಿ ಹೋಲಿಸುವುದನ್ನು ಬಿಟ್ಟು, ಅವರ ಆಸಕ್ತಿ ಮತ್ತು ಸಾಮರ್ಥ್ಯವನ್ನು ಗುರುತಿಸಬೇಕು.ಶಿಕ್ಷಕರು ಪಾಠ ಬೋಧಕರಷ್ಟೇ ಅಲ್ಲ, ಮಾರ್ಗದರ್ಶಕರಾಗಬೇಕು. ಸಮಾಜವೂ ಅಂಕಗಳಿಗಿಂತ ಮೌಲ್ಯಗಳಿಗೆ ಮಹತ್ವ ನೀಡುವ ದೃಷ್ಟಿಕೋನ ಬೆಳೆಸಬೇಕು.

ಸಮಾರೋಪವಾಗಿ, ಶಿಕ್ಷಣ ಅಂಕಗಳಿಗಾಗಿ ಮಾತ್ರ ಸೀಮಿತವಾದರೆ ಅದು ಪರೀಕ್ಷೆಗೆ ತಯಾರಿಸುತ್ತದೆ. ಆದರೆ ಬದುಕಿಗಾಗಿ ಇರುವ ಶಿಕ್ಷಣ ಜೀವನಕ್ಕೆ ತಯಾರಿಸುತ್ತದೆ. ಅಂಕಗಳು ಮುಖ್ಯವಾದರೂ ಅವೇ ಅಂತಿಮ ಗುರಿಯಲ್ಲ. ಮಾನವೀಯತೆ, ಜ್ಞಾನ ಮತ್ತು ಜೀವನ ಕೌಶಲ್ಯಗಳನ್ನು ಬೆಳೆಸುವ ಶಿಕ್ಷಣವೇ ನಿಜವಾದ ಶಿಕ್ಷಣ.

–ಅಂತೋಣಿ ಮುತ್ತು ವಿ, ಶಿಕ್ಷಕರು, ಮೈಸೂರು.

ಸದನ ಎಂದರೆ ಕದನ, ಕೋಲಾಹಲ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ವಿಧಾನಸಭಾ ಅಥವಾ ಲೋಕಸಭಾ ಅಧಿವೇಶನ ಆರಂಭವಾಯಿತೆಂದರೆ ಪ್ರತಿನಿತ್ಯ ಕದನ ಕೋಲಹಲವೇ ಹೊರತು ಮತ್ತೇನಿಲ್ಲ. ಆಡಳಿತ ಪಕ್ಷದ ವಿರುದ್ಧ ಪ್ರತಿಪಕ್ಷ, ಪ್ರತಿಪಕ್ಷದ ವಿರುದ್ದ ಆಡಳಿತ ಪಕ್ಷಗಳು ಸದನದಲ್ಲಿ ಕೋಲಹಲ ಎಬ್ಬಿಸುವುದೆ ಅಧಿವೇಶನ. ಇದೇನ ಸರ್ಕಾರದ ರೀತಿ, ನೀತಿಗಳು, ಇದೇನಾ ವಿರೋಧ ಪಕ್ಷದ ಕಾರ್ಯವೈಕರಿಗಳು ಎನ್ನುವಂತಾಗಿದೆ.

ಸಾರ್ವಜನಿಕ ಸಮಸ್ಯೆಗಳು ಸಾವಿರಾರು, ನಿರುದ್ಯೋಗ ಸಮಸ್ಯೆ, ರೈತರ ಸಮಸ್ಯೆ, ಕಾರ್ಮಿಕರ ಸಮಸ್ಯೆ, ವಿದ್ಯುತ್ ಮತ್ತು ನೀರಿನ ಬವಣೆ, ರಸ್ತೆ, ಮೂಲ ಸೌಕರ್ಯಗಳ ಕೊರತೆ ಇಂತಹ ನೂರಾರು ಪ್ರಮುಖ ಸಮಸ್ಯೆ ಇದ್ದರು ಚಕಾರ ಎತ್ತದ ಜನಪ್ರತಿನಿಧಿಗಳು, ಭ್ರಷ್ಟಾಚಾರ, ಜಿ ರಾಮ್ ಜಿ, ನರೇಗಾ, ಇಲಿ, ಹೆಗ್ಗಣ, ಧರಣಿ ಇವೆ ಮಾತುಗಳು ಪ್ರತಿಧ್ವನಿಸುತ್ತಿವೆಯೆ ಹೊರತು ಸರ್ಕಾರಕ್ಕೆ ಜನರ ಸಮಸ್ಯೆಗಳನ್ನು ಮುಟ್ಟಿಸುವುದು ಯಾವಾಗ ಅದಕ್ಕೆ ಪರಿಹಾರ ಯಾವಾಗ, ಇವರ ಕಿತ್ತಾಟದಲ್ಲೆ ಐದು ವರ್ಷಗಳ ಅವಧಿ ಮುಗಿದು ಹೋಗಿರುತ್ತದೆ, ಸದನ ಕಳ್ಳರ ಸಂತೆಯಾಗುವುದು ಬೇಡ, ಚಿಂತನ ಸಭೆಗಳಾಗಲಿ. ಪಕ್ಷಭೇದ ಮರೆತು ಜನಸೇವೆಮಾಡಿ, ಸಂವಿಧಾನದ ಆಶಯ ಈಡೇರಿಸಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ. ಚಾಮರಾಜನಗರ ಜಿಲ್ಲೆ.

ರಸ್ತೆ ರಿಪೇರಿ ಮಾಡಿಸಲು ಮನವಿ

ಮಾನ್ಯರೆ,



ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಪ್ರಕೃತಿಯ ರಮಣೀಯ ಸೌಂದರ್ಯವನ್ನು ತನ್ನ ಮಡಿಲಿನಲ್ಲಿಟ್ಟುಕೊಂಡು ಲಕ್ಷಾಂತರ ಪ್ರವಾಸಿಗರನ್ನು ಅದರಲ್ಲೂ ಮಳೆಗಾಲದ ಸಂದರ್ಭದಲ್ಲಿ ತನ್ನತ್ತ ಸೆಳೆಯುತ್ತಿರುವ ಗಗನಚುಕ್ಕಿ ಮತ್ತು ಭರಚುಕ್ಕಿ ಅವಳಿ ಜಲಪಾತಕ್ಕೆ ತಲುಪುವ ಮಾರ್ಗದ ರಸ್ತೆಗಳು ತುಂಬಾ ಹಾಳಾಗಿದ್ದು ಅನೇಕ ಗುಂಡಿಗಳಿಂದ ಕೂಡಿದೆ. ಹ್ಯಾಂಡ್ ಪೋಸ್ಟ್‌ನಿಂದ ಶಿವನಸಮುದ್ರದ ಶ್ರೀ ಆದಿಶಕ್ತಿ ಮಾರಮ್ಮ ಮಾರ್ಗವಾಗಿ ಸುಮಾರು 5 ಕಿ.ಮೀ ಪ್ರವಾಸಿಗರಿಗೆ ನರಕಯಾತನೆಯ ಪ್ರಯಾಣವಾಗಿದೆ. ರಸ್ತೆಯುದ್ದಕ್ಕೂ ಗುಂಡಿಗಳದ್ದೆ ಕಾರುಬಾರು ಆಗಿದ್ದು ಜೀವಭಯದಿಂದ ಪ್ರಯಾಣವನ್ನು ಮಾಡುವ ಪರಿಸ್ಥಿತಿ ಉಂಟಾಗಿದೆ. ರಸ್ತೆಯ ಧೂಳು ಪ್ರವಾಸಿಗರಿಗೆ ತುಂಬಾ ತೊಂದರೆಯನ್ನುಂಟು ಮಾಡುತ್ತಿದೆ. ಜಲಪಾತಗಳ ಸೌಂದರ್ಯವನ್ನೇ ವೀಕ್ಷಿಸಲು ಬರಲೇಬಾರದೆಂದು ಅನುಭವ ಅಲ್ಲಿ ಬರುವ ಅನೇಕ ಪ್ರವಾಸಿಗರಿಗಾಗುತ್ತದೆ. ರಸ್ತೆಯ ಕುರಿತು ಪ್ರವಾಸಿಗರು ಇಡೀ ಶಾಪವನ್ನು ಹಾಕಿ ಹೋಗುತ್ತಿದ್ದಾರೆ. ಹಾಗೆಯೇ ಮತ್ತೊಂದು ಸಂಗತಿ ಏನೆಂದರೆ ಗಗನಚುಕ್ಕಿ ಜಲಪಾತವನ್ನು ವೀಕ್ಷಿಸುವ ಸ್ಥಳವು ಸ್ವಚ್ಛತೆ ಇಲ್ಲದೆ ಗಬ್ಬು ನಾರುತ್ತಿದೆ. ಜಲಪಾತದ ವೈಭವವನ್ನು ವೀಕ್ಷಿಸುವ ಸ್ಥಳದಲ್ಲಿ ಕಸವನ್ನು ಹಾಕಲಾಗಿದ್ದು ಕಸದ ರಾಶಿಯು ಗಾಳಿಗೆ ತೂರಿ ಮೂಗಿಗೆ ದುರ್ವಾಸನೆಯನ್ನು ಸೇವಿಸಿಕೊಂಡು ವೀಕ್ಷಿಸಬೇಕು ಎನ್ನುವ ವಾತಾವರಣ ನಿರ್ಮಾಣವಾಗಿದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟವರು ಸೂಕ್ತ ಕ್ರಮವನ್ನು ವಹಿಸಬೇಕೆಂದು ಮನವಿ. **–ಎನ್.ಪಿ.ಪರಶಿವಮೂರ್ತಿ, ನಂಜೀಪುರ, ಸರಗೂರು ತಾಲೂಕು.**



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬಾರನೆಂಬುದನ್ನು ಬಿಡು ಹರುಷಕ್ಕಿದೆ ದಾರಿ...

ಮೂರು ಹೊತ್ತು ನೆಮ್ಮದಿಯಾದ ಊಟ, ಉಳಿದುಕೊಳ್ಳಲು ಒಂದು ಜಾಗ, ಅಗತ್ಯ ವಸ್ತುಗಳನ್ನು ಖರೀದಿ ಮಾಡಲು ಸ್ವಲ್ಪ ಹಣ ಇಷ್ಟು ಇದ್ದರೆ ಸಾಕು ಗೆಳೆಯ ಜೀವನದಲ್ಲಿ ನೆಮ್ಮದಿಯಾಗಿರಬಹುದು ಎಂದು ಹೇಳಿದ್ದ. ಆ ಗೆಳೆಯನೇ ಇವತ್ತು ಎಲ್ಲವೂ ಇದೆ, ಅಂದುಕೊಂಡಿದ್ದಕ್ಕಿಂತ ಜಾಸ್ತಿಯೇ ಒದಗಿ ಬಂದಿದೆ. ಆದರೆ, ನೆಮ್ಮದಿ ಮಾತ್ರ ಕಾಣದ ರೀತಿಯಲ್ಲಿ ಕಣ್ಮರೆಯಾಗಿದೆ ಗೆಳೆಯ ಎಂದಾಗ ಏನುತ್ತರ ನೀಡಬೇಕೆಂದು ತಿಳಿಯದೇ ನಿರುತ್ತರನಾದೆ...

ಹಾಗಾದರೆ ನೆಮ್ಮದಿ ಎಲ್ಲಿ ಸಿಗುತ್ತದೆ, ನೆಮ್ಮದಿ ಸಿಗಬೇಕೆಂದರೆ ಏನು ಮಾಡಬೇಕು, ಯಾವ ಯಾವ ವಸ್ತುಗಳಲ್ಲಿ ನೆಮ್ಮದಿ ಅಡಕವಾಗಿದೆ... ಎಂಬಿತ್ಯಾದಿ ಪ್ರಶ್ನೆಗಳ ಸುರಿಮಳೆಯೇ ಕೊರೆಯುತ್ತಲಿತ್ತು. ನೆಮ್ಮದಿ ಎಂಬುದು ಎಲ್ಲೋ ಒಂದು ಕಡೆ ಮಾರಾಟ ಮಾಡುವ ವಸ್ತುವಾಗಲೀ, ಎಲ್ಲೆಂದರಲ್ಲಿ ಉಚಿತವಾಗಿ ಸಿಗುವುದಿಲ್ಲ. ಅದು ನಮ್ಮೊಳಗಿದೆ, ಅದನ್ನು ಹುಡುಕುವ, ಕಂಡುಕೊಳ್ಳುವ ಮೂಲಕ ಅದನ್ನು ಪಡೆಯಬಹುದೇ ವಿನಃ ಬೇರೆಲ್ಲಿಯೂ ಪತ್ತೆ ಹಚ್ಚಲಾಗದು.

ಓಡು ಎಲ್ಲಿಯೂ ನಿಲ್ಲದಿರು, ಅವರಿವರ ತಳ್ಳಿ ಮುನ್ನುಗ್ಗು, ಹೀರೂ, ಬೇರೂರು ಎಂಬ ಸಾಲುಗಳು ಆಧುನಿಕ ವ್ಯಕ್ತಿಯ ಚಿಂತಾಜನಕವಾದ ಬಗೆಯನ್ನು ಅರಿವಿಗೆ ತರುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ 'ಮುಂಬೈ ಜಾತಕ' ಪದ್ಯದಲ್ಲಿ ನೆಮ್ಮದಿ ಯಿಲ್ಲದ ಸಮೃದ್ಧವಾದ ಜೀವವೊಂದು ಹೇಗೆಲ್ಲ ಪರಿತಪಿಸುತ್ತದೆ ಎಂಬುದನ್ನು ಮಾರ್ಮಿಕವಾಗಿ ಸಾದರಪಡಿಸಲಾಗಿದೆ.


ಮಾನವನ ಬದುಕು ಹೊರಗೆ ನೋಡಲು ಸುಖ ಸಮೃದ್ಧಿಯತ್ತ ದೌಡಾಯಿಸುವ ಪ್ರಯಾಣದಂತೆ ಕಾಣಿಸುತ್ತದೆ. ಭೌತಿಕ ಸೌಕರ್ಯಗಳು ಹೆಚ್ಚಿದಂತೆ, ವಿಜ್ಞಾನ, ತಂತ್ರಜ್ಞಾನವು ಅಚ್ಚರಿ ಮೂಡಿಸುವ ವೇಗದಲ್ಲಿ ಬೆಳೆಯುತ್ತಾ ಬಂದಂತೆ, ಬದುಕು ಸುಲಭವಾಗುತ್ತಿದೆ ಎಂಬ ಭ್ರಮೆಯೂ ನಮ್ಮೊಳಗೆ ಬೆಳೆದುಬಂದಿದೆ. ಆದರೆ ಈ ಎಲ್ಲ ಸಾಧನೆಗಳ ನಡುವೆಯೇ ಮನುಷ್ಯನು ಹುಡುಕುತ್ತಿರುವ ಅತೀ ದೊಡ್ಡ ಸಂಪತ್ತು ನೆಮ್ಮದಿ ಮಾತ್ರ ಕೈಗೆ ಸಿಗದ ಮರೀಚಿಕೆಯಂತೆ ದೂರ ಸರಿಯುತ್ತಲೇ ಹೋಗುತ್ತಿದೆ.

ಒಂದು ಕಾಲದಲ್ಲಿ ಸರಳ ಜೀವನ, ಹಿತವಾದ ಸಂಬಂಧಗಳು, ಪರಸ್ಪರ ನಂಬಿಕೆ ಹಾಗೂ ತೃಪ್ತಿಯೇ ಬದುಕಿನ ಮೂಲಾಧಾರವಾಗಿದ್ದವು. ಇಂದು ಅದೇ ಮನುಷ್ಯ ಸ್ಪರ್ಧೆ, ಆತುರ, ಅಸಮಾಧಾನ ಮತ್ತು ಅತೃಪ್ತಿಯ ಹೊರೆ ಹೊತ್ತು ಸಾಗುತ್ತಿದ್ದಾನೆ. ಹಣ, ಹುದ್ದೆ, ಕೀರ್ತಿ, ಸೌಕರ್ಯಗಳ ಹಿಂದೆ ಓಡುತ್ತಾ, ಅವುಗಳಲ್ಲೇ ನೆಮ್ಮದಿ ಅಡಗಿದೆ ಎಂಬ ತಪ್ಪು ನಂಬಿಕೆಗೆ ಒಳಗಾಗಿದ್ದಾನೆ. ಫಲವಾಗಿ ಸಾಧನೆಯ ಶಿಖರ ತಲುಪಿದ ಮೇಲೂ ಮನಸ್ಸಿನೊಳಗೆ ಖಾಲಿತನ, ಅಶಾಂತಿ ಮತ್ತು ಒಂಟಿತನ ಕಾಡುತ್ತಲೇ ಇರುತ್ತದೆ. ಈ ಸಂದರ್ಭದಲ್ಲಿ ನೆಮ್ಮದಿ ಎಂದರೆ ಏನು, ಅದು ನಿಜಕ್ಕೂ ಹೊರಗಿನ ಸಾಧನಗಳಲ್ಲಿ ಸಿಗುವುದೇ ಅಥವಾ ಅದು ನಮ್ಮ ಒಳಗಿನ ಅರಿವು, ತೃಪ್ತಿ ಮತ್ತು ಸಮತೋಲನದಲ್ಲೇ ಅಡಗಿದೆಯೇ ಎಂಬ ಪ್ರಶ್ನೆಗಳು ಅನಿವಾರ್ಯವಾಗಿ ನಮ್ಮ ಮುಂದೆ ನಿಂತುಕೊಳ್ಳುತ್ತವೆ. ನೆಮ್ಮದಿ ಎಂಬ ಕಾಣದ ಮರೀಚಿಕೆಯ ಬೆನ್ನತ್ತುವ ಇಂದಿನ ಮಾನವನ ಮನಸ್ಥಿತಿ, ಅವನ ಅಂತರಾಳದ ತಲ್ಲಣಗಳು ಮತ್ತು ನಿಜವಾದ ನೆಮ್ಮದಿಯ ದಾರಿ ಯಾವುದು ಎಂಬ ವಿಚಾರಗಳನ್ನು ವಿಶ್ಲೇಷಿಸಲು ಪ್ರಯತ್ನಿಸೋಣ.

ಇರುವುದರಲ್ಲಿ ತೃಪ್ತಿ ಅನುಭವಿಸಬೇಕು

ನಮ್ಮ ಜೀವನವನ್ನು ಬೇರೆಯವರ ಬದುಕಿನೊಂದಿಗೆ ಹೋಲಿಸಿಕೊಂಡು ಪರಿತಪಿಸುವ ಬದಲು ಇರುವುದರಲ್ಲಿಯೇ ತೃಪ್ತಿಯನ್ನು ಅನುಭವಿಸುವುದನ್ನು ಮೊದಲು ಕಲಿಯಬೇಕು. ಕೋಟಿಗಟ್ಟಲೆ ಹಣ ಇರುವವರಿಗೆ ಅವರದೇ ಆದ ಸಮಸ್ಯೆಗಳಿರುತ್ತವೆ. ದೂರದ ಬೆಟ್ಟ ನುಣ್ಣಗೆ ಎಂಬಂತೆ ನಮಗೆ ಅವರ ಹತ್ತಿರವಿರುವ ಹಣ ಕಾಣಿಸುತ್ತದೆಯೇ ವಿನಃ ಸಮಸ್ಯೆಗಳಲ್ಲ. ಹಾಗಾಗಿ ನಮ್ಮ ಹತ್ತಿರ ಇಲ್ಲದಿರುವುದರ ಬಗ್ಗೆ ಕೊರಗುವ ಬದಲು ಇರುವುದರಲ್ಲಿ ಆತ್ಮತೃಪ್ತಿಯನ್ನು ಅನುಭವಿಸುವುದನ್ನು ಕಲಿಯಬೇಕು. ನಮ್ಮ ಬದುಕು ನಮ್ಮದು, ಇರುವುದರಲ್ಲಿ ಸಂತೋಷವಾಗಿರುವುದನ್ನು ಕಲಿತು ಸಂಭ್ರಮಿಸಬೇಕು. ಆಗ ನೆಮ್ಮದಿ ಸಿಗುತ್ತದೆ. ನಮ್ಮ ಹತ್ತಿರ ಮನೆ ಇಲ್ಲ, ನಿವೇಶನ ಇಲ್ಲ, ಹಣ ಇಲ್ಲ ಹೀಗೆ ಇಲ್ಲದಿರುವ ಪಟ್ಟಿಗಳನ್ನು

> “ ಮಾನವನ ಬದುಕು ಹೊರಗೆ ನೋಡಲು ಸುಖ ಸಮೃದ್ಧಿಯತ್ತ ದೌಡಾಯಿಸುವ ಪ್ರಯಾಣದಂತೆ ಕಾಣಿಸುತ್ತದೆ. ಭೌತಿಕ ಸೌಕರ್ಯಗಳು ಹೆಚ್ಚಿದಂತೆ, ವಿಜ್ಞಾನ, ತಂತ್ರಜ್ಞಾನವು ಅಚ್ಚರಿ ಮೂಡಿಸುವ ವೇಗದಲ್ಲಿ ಬೆಳೆಯುತ್ತಾ ಬಂದಂತೆ, ಬದುಕು ಸುಲಭವಾಗುತ್ತಿದೆ ಎಂಬ ಭ್ರಮೆಯೂ ನಮ್ಮೊಳಗೆ ಬೆಳೆದುಬಂದಿದೆ. ಆದರೆ ಈ ಎಲ್ಲ ಸಾಧನೆಗಳ ನಡುವೆಯೇ ಮನುಷ್ಯನು ಹುಡುಕುತ್ತಿರುವ ಅತಿ ದೊಡ್ಡ ಸಂಪತ್ತು ನೆಮ್ಮದಿ ಮಾತ್ರ ಕೈಗೆ ಸಿಗದ ಮರೀಚಿಕೆಯಂತೆ ದೂರ ಸರಿಯುತ್ತಲೇ ಹೋಗುತ್ತಿದೆ.



ಮಾಡುವ ಬದಲು ನಮ್ಮಲ್ಲಿ ಒಗ್ಗಟ್ಟಿದೆ, ಮನುಷ್ಯತ್ವವಿದೆ, ಒಬ್ಬರ ಕಷ್ಟಕ್ಕೆ ಮರುಗುವ ಶಕ್ತಿಯಿದೆ, ಎಲ್ಲಕ್ಕಿಂತ ಮುಖ್ಯವಾಗಿ ಸಮಯಕ್ಕೆ ಸರಿಯಾಗಿ ತಿನ್ನುವುದಕ್ಕೆ, ಧರಿಸಿಕೊಳ್ಳಲು ವೈವಿಧ್ಯಮಯ ಬಟ್ಟೆ, ಇರುವುದಕ್ಕೊಂದು ನೆಲೆ, ಮಲಗಿದ ಕೂಡಲೇ ನಿಶ್ಚಿಂತೆಯಾಗಿ ನಿದ್ದೆ ಬರುತ್ತದೆ ಎಂಬ ನಮ್ಮಲ್ಲಿರುವ ಅಂಶಗಳನ್ನು ಪಟ್ಟಿ ಮಾಡಿ ನೋಡಿದರೆ ನೆಮ್ಮದಿ ಸಿಗುತ್ತದೆ. ಬದುಕು ಸುಂದರವಾದದ್ದು, ಅದನ್ನು ಇಲ್ಲಸಲ್ಲದ ಗೊಂದಲಗಳಿಗೀಡು ಮಾಡಿಕೊಂಡು ಪರಿತಪಿಸುವ ಬದಲು ಸಂಭ್ರಮದಿಂದ ಕಳೆಯುವುದನ್ನು ಕಲಿಯಬೇಕು, ಆಗ ನೆಮ್ಮದಿ ತಾನಾಗಿಯೇ ಸಿಗುತ್ತದೆ ಅದನ್ನೆಲ್ಲಿಯೂ ಹುಡುಕಬೇಕಾದ ತಾಪತ್ರಯವಿಲ್ಲ.

ಮತ್ತೊಬ್ಬರ ಮಾತಿಗೆ ಕಿವಿಯಾಗುವುದನ್ನು ಬಿಡಬೇಕು

ಯಾರೋ ನಮ್ಮ ಬಗ್ಗೆ ಇಲ್ಲಸಲ್ಲದ್ದನ್ನು ಮಾತನಾಡಿದರೆ ಅಥವಾ ನಮಗೆ ಹತ್ತಿರವಾದರೆ ಮಾತನಾಡಿದರೆ ಅದನ್ನೇ ಆಲೋಚಿಸುವುದನ್ನು ಬಿಡಬೇಕು. ನಮ್ಮ ಬದುಕು ನಮಗಷ್ಟೇ ತಿಳಿದಿರುತ್ತದೆ, ನಮಗೆ ಸಿಕ್ಕ ಅವಕಾಶ ಅವರಿಗೆ ಸಿಕ್ಕಿಲ್ಲವೆಂದು, ನಮಗಿಂತ ಮುಂದುವರೆಯುವರೆಂದು ಹೀಗೆ ಇಲ್ಲಸಲ್ಲದ ಕಾರಣಗಳನ್ನಿಟ್ಟುಕೊಂಡು ನಮ್ಮತನವನ್ನು ಕೆಣಕುವ, ಕೆದಕುವ ಹಾಗೇ ಮಾಡಲು ಸಿದ್ಧವಿರುವವರ ತಾಳಕ್ಕೆ ತಕ್ಕಂತೆ ನಾವು ಕುಣಿಯುವುದನ್ನು ಮೊದಲಿಗೆ ಬಿಡಬೇಕು.

ಮಹಾನ್ ವ್ಯಕ್ತಿಗಳನ್ನೇ ನಿಂದಿಸಿ ತಮಗೆ ಹೇಗೆ ಬೇಕೋ ಹಾಗೇ ಬಳಸಿಕೊಂಡು ನಿಂದಿಸುವ ಇಂದಿನ ಕಾಲಘಟ್ಟದಲ್ಲಿ ನಮ್ಮನ್ನು ಯಾರು ಪ್ರಶ್ನಿಸಬಾರದು, ನಾವೆಲ್ಲ ಪ್ರಶ್ನಾತೀತರು, ಟೀಕಿಸಬಾರದು, ಎಲ್ಲ ನಮ್ಮ ಬಗ್ಗೆ ಒಳ್ಳೆಯದ್ದನ್ನೇ ಮಾತನಾಡಬೇಕೆಂದುಕೊಳ್ಳುವುದು ಮೂರ್ಖತನ. ಮತ್ತೊಬ್ಬರ ಟೀಕೆಯ ಮಾತುಗಳಿಗೆ ಕಿವಿಯಾಗುವುದನ್ನು ಮೊದಲು ಬಿಟ್ಟಾಗ ಮಾತ್ರ ನೆಮ್ಮದಿಯಾಗಿರಬಹುದು. ಬೇರೆಯವರಂತೆ ನಾವಿಲ್ಲ ಎಂದ ಮೇಲೆ ನಮ್ಮಂತೆ ಬೇರೆಯವರು ಇರಲಾರರು.ಆಗಿದ್ದ ಮೇಲೆ ನಮ್ಮ ಹಿಂದೆ ಅಥವಾ ಮುಂದೆ ಮಾತನಾಡಿ ನಿಂದಿಸುವವರ ಬಗ್ಗೆ ಆಲೋಚಿಸುವುದನ್ನು ಮೊದಲು ಬಿಡಬೇಕು ,ಆಗ ನೆಮ್ಮದಿ ತನ್ನಿಂದ ತಾನೇ ಸಿಗುತ್ತದೆ.

ಕಾಣದ ಮರೀಚಿಕೆಯ ಬೆನ್ನತ್ತುವುದನ್ನು ನಿಲ್ಲಿಸಬೇಕು

ವಾಸ್ತವದಲ್ಲಿ ಇಲ್ಲದಿರುವುದು ಇರುವಂತೆ ಭಾಸವಾದರೆ ಅದನ್ನು ಸಾಮಾನ್ಯವಾಗಿ ಮರೀಚಿಕೆ ಎಂದು ಕರೆಯಲಾಗುತ್ತದೆ. ನಮ್ಮಲ್ಲಿ ಬಹುತೇಕರು ಈ ಕಾಣದ ಮರೀಚಿಕೆಯ ಬೆನ್ನತ್ತಿ ಹಿಡಿಯುವ ಕೆಲಸವನ್ನು ಮಾಡುತ್ತಾರೆ. ಪ್ರಸಿದ್ಧರಾಗಬೇಕು. ನಮ್ಮನ್ನು ಎಲ್ಲರೂ ಇಷ್ಟಪಡಬೇಕು, ಗೌರವ, ಅಧಿಕಾರ ಸಿಕ್ಕರೆ ಎಲ್ಲವೂ ದೊರೆಯುತ್ತದೆ. ನೆಮ್ಮದಿಯಂತೂ ಸಿಕ್ಕೇ ಸಿಗುತ್ತದೆ ಎಂಬ ಕಾಣದ ಮರೀಚಿಕೆಯ ಬೆನ್ನತ್ತಿ ಅದರ ಹಿಂದೆಯೇ ಓಡುವ ಕೆಲಸವನ್ನು ಮಾಡುತ್ತಿರುತ್ತೇವೆ. ಕಣ್ಣಿಗೆ ಕಾಣದ, ವಾಸ್ತವದಲ್ಲಿ ಸಿಗದುದರ ಬಗ್ಗೆ ಚಿಂತಿಸಿ ಕಾಲ ಕಳೆಯುವ ಬದಲು ಇರುವ ವಾಸ್ತವತೆಯನ್ನು ಒಪ್ಪಿ ಅಪ್ಪಿಕೊಂಡು ಬದುಕುವುದನ್ನು ರೂಢಿಸಿಕೊಂಡಾಗ ತೃಪ್ತಿ, ನೆಮ್ಮದಿ ಸಿಕ್ಕೇ ಸಿಗುತ್ತದೆ.

ಆಸೆಗಳಿಗೆ ಮಿತಿ ಇರಬೇಕು

ಬೇಕು ಬೇಕೆಂಬ ಆಸೆಗಳ ಪಟ್ಟಿ ಹೆಚ್ಚಾಗಿ ಹೋದಂತೆ ನೆಮ್ಮದಿ ತನ್ನಿಂದ ತಾನೇ ದೂರವಾಗಿ ನಿಲ್ಲುತ್ತದೆ. ಆಸೆಗಳಿಗೆ ಕಡಿವಾಣ ಇದ್ದಷ್ಟು ಒಳ್ಳೆಯದು. ಇಲ್ಲದಿದ್ದರೆ ಅದರಿಂದ ಸಂಕಟವನ್ನು ಅನುಭವಿಸಬೇಕಾಗುತ್ತದೆ. ಇದನ್ನು ಹೇಳುವಾಗ ಹಿಂದೊಮ್ಮೆ ಓದಿದ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆ: ಒಮ್ಮೆ ಒಂದು ಹಳ್ಳಿಯಲ್ಲಿ ಅನಂತ ಎಂಬ ರೈತನು ವಾಸಿಸುತ್ತಿದ್ದ. ಅವನ ಬಳಿ ಸಾಕಷ್ಟು ಹೊಲ, ಮನೆ, ಕುಟುಂಬ ಎಲ್ಲವೂ ಇದ್ದರೂ ಮನಸ್ಸಿಗೆ ಮಾತ್ರ ನೆಮ್ಮದಿ ಇರಲಿಲ್ಲ. ಇನ್ನೂ ಹೆಚ್ಚು ಬೇಕು, ಇನ್ನೂ ಚೆನ್ನಾಗಿರಬೇಕು ಎಂಬ ಆಸೆ ಅವನ ನಿದ್ರೆಯನ್ನೂ ಕಸಿದುಕೊಂಡಿತ್ತು. ಒಂದು ದಿನ ಅವನು ಬೆಟ್ಟದ ಮೇಲಿರುವ ಬೃಹತ್ ಆಲದ ಮರದ ಕೆಳಗೆ ಕುಳಿತ ವೃದ್ಧನನ್ನು ಕಂಡ. ಮುಖದಲ್ಲಿ ಅಪಾರ ಶಾಂತಿ, ಕಣ್ಣುಗಳಲ್ಲಿ ತೃಪ್ತಿ. ಅನಂತನು ಕೇಳಿದ, ತಾತಾ, ನಿಮ್ಮ ಬಳಿ ಏನೂ ಕಾಣುತ್ತಿಲ್ಲ; ಆದರೂ ನಿಮ್ಮ ಮುಖದಲ್ಲಿ ಇಷ್ಟು ನೆಮ್ಮದಿ ಹೇಗೆ? ವೃದ್ಧ ನಗುತ್ತಾ ಹೇಳಿದರು, ಮಗನೆ, ನನ್ನ ಬಳಿ ಇಲ್ಲದಿದ್ದನ್ನು ನಾನು ಎಣಿಸುವುದಿಲ್ಲ. ನನ್ನ ಬಳಿ ಇರುವುದನ್ನು ಮಾತ್ರ ಗೌರವಿಸುತ್ತೇನೆ. ಅವರು ಅನಂತನಿಗೆ ಒಂದು ಚಿಕ್ಕ ಕಲ್ಲು ಕೊಟ್ಟು ಹೇಳಿದರು, ಈ ಕಲ್ಲನ್ನು ಕೈಯ್ಯಲ್ಲಿ ಬಿಗಿಯಾಗಿ ಹಿಡಿದುಕೊಂಡು ಸ್ವಲ್ಪ ದೂರ ನಡೆ. ಅನಂತನು ಹಾಗೆ ಮಾಡಿದ. ಸ್ವಲ್ಪ ಹೊತ್ತಲ್ಲೇ ಕೈ ನೋವಾಯಿತು. ವೃದ್ಧ ಕೇಳಿದರು, ನೋವು ಏಕೆ? ಅನಂತ ಉತ್ತರಿಸಿದ, ಕೈ ಬಿಗಿಯಾಗಿ ಹಿಡಿದಿರುವುದರಿಂದ. ಅವರು ಶಾಂತವಾಗಿ ಹೇಳಿದರು; ನಿನ್ನ ಆಸೆಗಳು, ಹೋಲಿಕೆಗಳು, ಅಸಮಾಧಾನ ಇದೇ ರೀತಿ. ಬಿಗಿ ಯಾಗಿ ಹಿಡಿದರೆ ನೋವು. ಸಡಿಲವಾಗಿ ಬಿಟ್ಟರೆ ನೆಮ್ಮದಿ. ಆ ಮಾತು ಅನಂತನ ಹೃದಯ ತಟ್ಟಿತು. ಆ ದಿನದಿಂದ ಅವನು ಇದ್ದುದರಲ್ಲಿ ಸಂತೋಷ, ಮಾಡಿದ ಕೆಲಸದಲ್ಲಿ ಸತ್ಯ, ಹಂಚಿಕೊಂಡ ಬದುಕಿನಲ್ಲಿ ಸುಖ ಕಂಡನು. ಕಾಲ ಕಳೆದಂತೆ ಅವನ ಹೊಲದಲ್ಲಿ ಬೆಳೆ ಮಾತ್ರವಲ್ಲ, ಮನಸ್ಸಿನಲ್ಲಿ ಶಾಂತಿಯೂ ಬೆಳೆಯಿತು.

ಈ ಕಥೆಯಲ್ಲಿ ಉತ್ಪ್ರೇಕ್ಷೆಗಳು ಏನೇ ಇದ್ದರೂ ಅದು ತಿಳಿಸಿ ಕೊಡುವ ನೀತಿ ಮುಖ್ಯವಾದದ್ದು. ಬೇಕು ಬೇಕು ಎಂಬ ಆಸೆಗಳ ಪಟ್ಟಿ ಹೆಚ್ಚಾದಂತೆ ನೆಮ್ಮದಿ ಇನ್ನಿಲ್ಲದಂತೆ ಕಣ್ಮರೆಯಾಗಿ ಹೋಗುತ್ತದೆ. ಹಾಗಾಗಿ ಆಸೆಗಳಿಗೆ ಮಿತಿಗಳೆಂಬುದು ಇದ್ದಷ್ಟು ಒಳ್ಳೆಯದು.

ಒಟ್ಟಾರೆಯಾಗಿ ಹೇಳುವುದಾದರೆ ಒಂದನ್ನು ಪಡೆಯಬೇಕಾದರೆ ಮತ್ತೊಂದನ್ನು ಕಳೆದುಕೊಳ್ಳಬೇಕಾಗುತ್ತದೆ. ಹಾಗಾಗಿ ಮೊದಲು ಯಾವುದು ಮುಖ್ಯ ಎಂಬುದನ್ನು ನಿರ್ಧರಿಸಿ–ಹಣ, ಆಸ್ತಿ, ಅಧಿಕಾರ, ಪದವಿ ಮುಖ್ಯ ಎಂದಾದರೆ ನೆಮ್ಮದಿ ಎಂಬುದನ್ನು ಬಿಟ್ಟುಕೊಡಬೇಕಾಗುತ್ತದೆ. ನೆಮ್ಮದಿ ಮುಖ್ಯ ಎಂದಾದರೆ ಇರುವುದರಲ್ಲಿ ಸಂತೋಷವನ್ನು ಕಂಡುಕೊಳ್ಳಬೇಕಾಗುತ್ತದೆ. ಇಲ್ಲದುದರ ಆಲೋಚಿಸುವುದನ್ನು ಮರೆಯಬೇಕಾಗುತ್ತದೆ. ಇದರಿಂದ ನೆಮ್ಮದಿ ತಾನಾಗಿಯೇ ದೊರೆಯುತ್ತದೆ. ಆಯ್ಕೆ ನಮ್ಮ ಕೈಯ್ಯಲ್ಲಿಯೇ ಇರುತ್ತದೆ. ಆಲೋಚಿಸಿ. ನೆಮ್ಮದಿ ಎಂದರೆ ಹೊರಗಿನ ಪರಿಸ್ಥಿತಿಗಳ ಮೇಲೆ ಅವಲಂಬಿತವಾದ ಸ್ಥಿತಿ ಅಲ್ಲ; ಅದು ನಮ್ಮೊಳಗಿನ ಮನಸ್ಥಿತಿಯ ಪ್ರತಿಬಿಂಬ. ಅತಿಯಾದ ಆಸೆ, ಹೋಲಿಕೆ, ಭಯ ಮತ್ತು ಅಸಮಾಧಾನಗಳು ಮನಸ್ಸನ್ನು ಅಶಾಂತಗೊಳಿಸುತ್ತವೆ; ಆದರೆ ಸ್ವೀಕಾರ, ಸಂಯಮ, ಸರಳತೆ ಮತ್ತು ಸಕಾರಾತ್ಮಕ ಚಿಂತನೆಗಳು ನೆಮ್ಮದಿಗೆ ದಾರಿಯಾಗುತ್ತವೆ. ಇಂದಿನ ವೇಗದ ಬದುಕಿನಲ್ಲಿ ಕ್ಷಣಕಾಲ ನಿಂತು ಆತ್ಮಪರಿಶೀಲನೆ ಮಾಡುವುದು, ಇಂದಿನ ಕ್ಷಣವನ್ನು ಗೌರವಿಸುವುದು ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯ. ಹೀಗಾಗಿ, ನೆಮ್ಮದಿಯನ್ನು ಹೊರಗೆ ಹುಡುಕುವ ಬದಲು ನಮ್ಮೊಳಗೆ ಬೆಳೆಸಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ ಮತ್ತು ಜೀವನವು ನಿಜಾರ್ಥದಲ್ಲಿ ಸುಖಮಯವಾಗುತ್ತದೆ.

ಪಠ್ಯಕ್ರಮದಲ್ಲಿ ಪ್ರಾದೇಶಿಕ ಪಠ್ಯಗಳ ಅಳವಡಿಸಿಕೊಳ್ಳಲು ಸಿದ್ಧತೆ ಮಾಡಿಕೊಳ್ಳಿ

ಪಠ್ಯ ರಚನೆ ಕಾರ್ಯಾಗಾರದಲ್ಲಿ ಪ್ರೊ.ಎನ್.ಕೆ.ಲೋಲಾಕ್ಷಿ ಸಲಹೆ



ಮೈಸೂರು ವಿಶ್ವವಿದ್ಯಾನಿಲಯದ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ನಡೆದ ತರಬೇತಿ ಕಾರ್ಯಾಗಾರದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ 'ಗಣಕ ಗಂಗೋತ್ರಿ–2' ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.

ಮೈಸೂರು,ಫೆ4(ಎಂಟಿವೈ)– ಎನ್‌ಇಪಿ ಮತ್ತು ಎಸ್‌ಇಪಿ ಸೂಚನೆ ಮೇರೆಗೆ ಪಠ್ಯಕ್ರಮದಲ್ಲಿ ಪ್ರಾದೇಶಿಕ ಪಠ್ಯಗಳನ್ನು ಹೆಚ್ಚಾಗಿ ಅಳವಡಿಸಬೇಕಾಗಿದ್ದು, ಅದಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಹಾಗೂ ಕನ್ನಡ ಅಧ್ಯಯನ ಮಂಡಳಿ ವತಿಯಿಂದ ರೂಸಾ ಯೋಜನೆಯಡಿ ಆಯೋಜಿಸಿದ್ದ 'ಪದವಿ ಪಠ್ಯ ರಚನೆ–ಬೋಧನೆ, ಪ್ರಶ್ನೆಪತ್ರಿಕೆ ತಯಾರಿ ಮತ್ತು ಮೌಲ್ಯಮಾಪನದ ವಿಧಿವಿಧಾನಗಳು' ಕುರಿತ ಎರಡು ದಿನಗಳ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ದಕ್ಷಿಣ ಕನ್ನಡಕ್ಕೆ ಹೋದರೆ ರಾಷ್ಟ್ರಕವಿ ಕುವೆಂಪು, ಮಲೆ ಮಹದೇಶ್ವರ, ಮಂಟೇಸ್ವಾಮಿ ಹಾಗೂ ಈ ಭಾಗದ ಮಹನೀಯರು ಯಾರೆಂದು ಗೊತ್ತಿಲ್ಲ. ಪಠ್ಯಗಳಲ್ಲಿ ನಮ್ಮ ಪ್ರಾದೇಶಿಕವಾದಂತಹ ಮಂಟೇಸ್ವಾಮಿ, ಮಲೆ ಮಹದೇಶ್ವರ ಸ್ವಾಮಿ, ಚಾಮುಂಡಿ, ಯದು ವಂಶದ ಕೃತಿಗಳನ್ನು ಇಟ್ಟರೆ ಓದಿಸುವವರು ಯಾರು ಎಂದು ಪ್ರಶ್ನಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಸೃಜನಾತ್ಮಕವಾಗಿ ಯೋಚಿಸುವ ಶಕ್ತಿ ಬೆಳೆಸಬೇಕು. ಅಲ್ಲದೆ, ಜೀವನ ನಿರ್ವಹಣೆಗಾಗಿ ಬೇಕಾಗುವ ಕೌಶಲ್ಯಗಳನ್ನು ಮೈಗೂಡಿಸುವ ಕೆಲಸ ಮಾಡಬೇಕು. ಇಂದು ಮಕ್ಕಳಿಗೆ 100 ಅಂಕ ತೆಗೆಯುವ ಪಾಠ ಅಥವಾ ಪರೀಕ್ಷೆಯಲ್ಲ. ಅವರು ಎಷ್ಟೇ ಅಂಕ ಪಡೆದರೂ ಕ್ರಿಯಾತ್ಮಕವಾಗಿ ಏನನ್ನು ಸೃಷ್ಟಿ ಮಾಡುತ್ತಾರೆ ಎಂಬುದು ಮುಖ್ಯ. ಮಕ್ಕಳಿಗೆ ಪಠ್ಯಪುಸ್ತಕಗಳು ಅನುಭವವಾಗಬೇಕು. ಬರೆಯುವ ಶಕ್ತಿ, ಕಥೆಯನ್ನು ಬರೆಯುವ, ವಿಮರ್ಶೆಗಳನ್ನು ಬರೆಯುವುದನ್ನು ಕಲಿಸಬೇಕು. ಇಂದು ಪರೀಕ್ಷೆಗೋಸ್ಕರ ಬರೆಯುವ ಮಾರ್ಕ್ಸ್‌ವಾದ (ಅಂಕ) ಈಗ ಇಲ್ಲ. ನಾವು ಈಗ ಇರುವುದು ಸಮಾಜವಾದದಲ್ಲಿ ಎಂದರು.

ವಿದ್ಯಾರ್ಥಿಗಳು ತಮ್ಮದೇ ಆದ ಗ್ರಂಥಾಲಯವನ್ನು ಹೊಂದಬೇಕು. ಉತ್ತಮ ಗುಣಮಟ್ಟದ ಪಠ್ಯಪುಸ್ತಕಗಳ ಅವಶ್ಯಕತೆ ಇದೆ. ಹಿಂದಿನ ವರ್ಷದ ಪಠ್ಯ ಪುಸ್ತಕಗಳಲ್ಲಿ ಬೇಕಾದ ಉತ್ತರವನ್ನು ಆ ಪಠ್ಯ ಪುಸ್ತಕಗಳಲ್ಲೇ ಸಿಗುತ್ತಿತ್ತು ಇದರಿಂದ ಗೈಡ್‌ಗೂ ಪಠ್ಯ ಪುಸ್ತಕಗಳಿಗೂ ವ್ಯತ್ಯಾಸವೇ ಇಲ್ಲದಂತಾಗಿತ್ತು ಇದು ಓದುಗರನ್ನು, ವಿದ್ಯಾರ್ಥಿಗಳನ್ನು ಕಟ್ಟಿ ಹಾಕಿದ ಹಾಗೆ ಮಾಡುತ್ತದೆ. ನಾವು ಕಠಿಣ ಪದದ ಅರ್ಥ, ಯಾವ ಭಾಗದಿಂದ ಆಯ್ಕೆ ಮಾಡಿಕೊಂಡಿದ್ದೇವೆ. ಇದರ ಉದ್ದೇಶ ಏನು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ವಿ. ಷಣ್ಮುಗಂ, ಎಂಎಂಟಿಟಿಸಿ ನಿರ್ದೇಶಕರಾದ ಪ್ರೊ.ಹೆಚ್.ಪಿ.ಜ್ಯೋತಿ, ಮಹಾರಾಜ ಕಾಲೇಜಿನ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಪ್ರೊ.ಡಿ.ವಿಜಯಲಕ್ಷ್ಮಿ, ಕನ್ನಡ ಸಂಘದ ಸಂಚಾಲಕರಾದ ಪ್ರೊ.ಬಿ.ಪಿ.ಆಶಾಕುಮಾರಿ, ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಾದ ಡಾ.ಟಿ.ಕೆ.ಕೆಂಪೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾವೇರಿ ಆಸ್ಪತ್ರೆಯಿಂದ ಕ್ಯಾನ್ಸರ್ ಜಾಗೃತಿ



ಕಾವೇರಿ ಆರೋಗ್ಯ ವಿಜ್ಞಾನ ಸಂಸ್ಥೆಯಲ್ಲಿ 'ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ' ನಡೆಯಿತು.

ಮೈಸೂರು, ಫೆ.4(ಎಂಕೆ)– ಮೈಸೂರಿನ ಕಾವೇರಿ ಆರೋಗ್ಯ ವಿಜ್ಞಾನ ಸಂಸ್ಥೆಯ ಮಾಸ್ಟರ್ ಆಫ್ ಹಾಸ್ಪಿಟಲ್ ವಿಭಾಗದ ವತಿಯಿಂದ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ 'ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ' ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕಾವೇರಿ ಹೃದಯ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹಿರಿಯ ಕನ್ಸಲ್ಟೆಂಟ್ ಸರ್ಜಿಕಲ್ ಆಂಕಾಲಜಿಸ್ಟ್ ಡಾ.ಕಿರಣ್ ಶಂಕರ್ ಮಾತನಾಡಿ, ಕ್ಯಾನ್ಸರ್ ತಡೆಗಟ್ಟುವಿಕೆಗೆ ಜೀವನ ಶೈಲಿ ಬದಲಾಗಬೇಕು. ಮುಖ್ಯವಾಗಿ ಯುವ ಜನತೆ ಎಚ್ಚೆತ್ತುಕೊಳ್ಳಬೇಕು. ಆರಂಭದಲ್ಲೇ ಕ್ಯಾನ್ಸರ್ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಗುಣಮುಖರಾಗಿ ಹೊಸ ಜೀವನ ನಡೆಸಬಹುದಾಗಿದೆ ಎಂದು ತಿಳಿಹೇಳಿದರು.

ಕಾವೇರಿ ಆರೋಗ್ಯ ವಿಜ್ಞಾನ ಸಂಸ್ಥೆಯ ಪ್ರಾಂಶುಪಾಲ ಡಾ.ಆರ್.ಎಂ.ಅರವಿಂದ್ ಮಾತನಾಡಿ, ಶಿಕ್ಷಣ ಸಂಸ್ಥೆಗಳು ಆರೋಗ್ಯ ಜಾಗೃತಿ ಮುಖ್ಯವಾಗಿದ್ದು, ಆರೋಗ್ಯ ಚಟುವಟಿಕೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ ಎಂದರು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಬೀದಿ ನಾಟಕದ ಮೂಲಕ ವಿದ್ಯಾರ್ಥಿಗಳು ಸಾರ್ವಜನಿಕರಲ್ಲಿ ಕ್ಯಾನ್ಸರ್ ಜಾಗೃತಿ ಮೂಡಿಸಿದರು.

ಕಾವೇರಿ ಸಮೂಹ ಸಂಸ್ಥೆಗಳ ಡೀನ್ ಪ್ರೊ.ಶ್ರೀಕಂಠಸ್ವಾಮಿ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪ ಪ್ರಾಂಶುಪಾಲರಾದ ಪ್ರೊ.ಶಿಮ್ಯಾ ವಾಸು, ಪ್ರೊ.ಸಂಪದಾ ಜೈನ್, ಸಾಂದ್ರ ಸಾಬು, ದಿವ್ಯಶ್ರೀ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.4– ಹೂಟಗಳ್ಳಿ ಉಪವಿಭಾಗ ವ್ಯಾಪ್ತಿಯ ಲೈನ್ ಮಾರ್ಗಗಳ ಕಾಮಗಾರಿ ನಿಮಿತ್ತ ಫೆ.5ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಎಲ್ ಅಂಡ್ ಟಿ, ಅರೋಮ ಬೇಕರಿ ರಸ್ತೆ, ಸದರನ್ ಗ್ಯಾಸ್, ಸ್ಪ್ರೆ, ವಿಜಯ ಕರ್ನಾಟಕ, ಮೆಟ್‌ಕ್ಯಾನ್, ಟಿ.ಆರ್.ಸಿ, ಅಂಬಾಡಿ, ದಿವ್ಯ ಇಂಜಿನಿಯರಿಂಗ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಡಾಲರ್ ಬರ್ಡ್, ವಾಟರ್ ಟೆಕ್, ಅ5 ಕೋಲ್ಡ್, ಓಯಾಸೀಸ್ ಹೋಟೆಲ್, ಪಟ್ಟಾಬಿ, ಪ್ರೇಮ ಇಂಡಸ್ಟ್ರಿಸ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳು. ಸಂದೇಶ್ವರ ಇಂಡಸ್ಟ್ರಿಸ್, ಐ.ಟಿ ಕ್ಯಾಮ್ಸ್, ಇನ್‌ಫೋಮೈಜ್ ಸಾಫ್ಟ್‌ವೇರ್ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಿಬಿ ಜಿ ರಾಮ್ ಜಿ ಕಾಯ್ದೆ ಪಾರದರ್ಶಕ; ಕಾಂಗ್ರೆಸ್ ಏಜೆಂಟ್‌ಗಳಿಗೆ ಅಕ್ರಮ ನಡೆಸಲು ಅಡ್ಡಿಯಾಗಿದೆ ಹಾಗಾಗಿ

ಸಿಎಂ ಸಿದ್ದರಾಮಯ್ಯ ನಿಯಮಬಾಹಿರವಾಗಿ ನಿರ್ಣಯ

ಬೆಂಗಳೂರು, ಫೆ.4– ವಿಬಿ ಜಿ ರಾಮ್ ಜಿ ಕಾಯ್ದೆ ಪಾರದರ್ಶಕವಾಗಿದ್ದು, ಕಾಂಗ್ರೆಸ್ ಏಜೆಂಟ್‌ಗಳಿಗೆ ಅಕ್ರಮ ನಡೆಸಲು ಸಮಸ್ಯೆಯಾಗಿರುವುದರಿಂದ ವಿರೋಧ ಕೇಳಿಬರುತ್ತಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯನವರು ನಿಯಮ ಬಾಹಿರವಾಗಿ ನಿರ್ಣಯ ತಂದಿದ್ದು, ಅದನ್ನು ವಿರೋಧಿಸುತ್ತೇವೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಬಿ ಜಿ ರಾಮ್ ಜಿ ಕಾಯ್ದೆಯ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಮಾಡುವುದೇ ಅಕ್ರಮ. ಏಳು ದಿನಗಳ ಮೊದಲು ಸೂಚನೆ ನೀಡಿ ಚರ್ಚೆ ಮಾಡಬೇಕಿತ್ತು. ಆದರೆ ಏಕಾಏಕಿ ನಿರ್ಣಯ ತಂದು ಕೇಂದ್ರ ಸರ್ಕಾರದ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಉದ್ಯೋಗ ಖಾತರಿ ಯೋಜನೆಯಲ್ಲಿ 2023–24 ರಲ್ಲಿ 31,624 ಪ್ರಕರಣಗಳಲ್ಲಿ 16,019 ಕೋಟಿ ರೂ. ದುರ್ಬಳಕೆಯಾಗಿದೆ. 2024–25 ರಲ್ಲಿ 20,742 ಪ್ರಕರಣಗಳಲ್ಲಿ 50.23 ಕೋಟಿ ರೂ. ದುರ್ಬಳಕೆಯಾಗಿದೆ. 2025–26 ರಲ್ಲಿ18.13 ಕೋಟಿ ರೂ. ದುರ್ಬಳಕೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಮೀಕ್ಷೆಯಲ್ಲಿ ತಿಳಿದು ಬಂದಿದೆ. ಸ್ವಜನ ಪಕ್ಷಪಾತ, ಬೋಗಸ್ ಬಿಲ್, ಕಾಂಗ್ರೆಸ್ ಏಜೆಂಟ್‌ಗಳಿಗೆ ಕಾಮಗಾರಿ ಮೊದಲಾದ ರೀತಿಯಲ್ಲಿ ಲೂಟಿ ಮಾಡಲಾಗಿದೆ ಎಂದರು. ಕೇಂದ್ರ ಸರ್ಕಾರ ಯಾವುದೇ ಕಾಮಗಾರಿ ಮಾಡಿಸುವುದಿಲ್ಲ. ಎಲ್ಲವನ್ನೂ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದಲೇ ಮಾಡಿಸಲಾಗುತ್ತದೆ. ಕಾಂಗ್ರೆಸ್ ಸರ್ಕಾರದ ಬಳಿ ಹಣವಿಲ್ಲದೆ 40% ಪಾಲು ನೀಡಲು ಹಿಂದೇಟು ಹಾಕುತ್ತಿದೆ. ಹಣವಿಲ್ಲದೆಯೇ ಖ್ಯಾತೆ ತೆಗೆಯಲಾಗಿದೆ. ಇದು ಜನಪರವಾದ ಹಾಗೂ ಪಾರದರ್ಶಕ ಯೋಜನೆ. ಈ ನಿರ್ಣಯವನ್ನು ನಾವೆಲ್ಲರೂ ವಿರೋಧಿಸುತ್ತೇವೆ. ನರೇಗಾ ಯೋಜನೆಗೆ 20 ವರ್ಷ ಕಳೆದಿದ್ದು, ಹೆಸರು ಬದಲಿಸಲಾಗಿದೆ.

ವಿಪಕ್ಷ ನಾಯಕ ಅಶೋಕ್ ಆರೋಪ



ಬಜೆಟ್‌ನಲ್ಲಿ ತಂದ ಹೊಸ ಯೋಜನೆಗೆ ಮಹಾತ್ಮ ಗಾಂಧಿ ಹೆಸರಿಡಲಾಗಿದೆ. ಆದರೆ ಕಾಂಗ್ರೆಸ್ 400 ಕ್ಕೂ ಅಧಿಕ ಯೋಜನೆ, ಸಂಸ್ಥೆಗಳಿಗೆ ನೆಹರು ಕುಟುಂಬದವರ ಹೆಸರಿಡಲಾಗಿದೆ ಎಂದರು. ಈ ಹಿಂದೆ ಉದ್ಯೋಗ ಖಾತರಿಯಲ್ಲಿ 100 ದಿನಗಳ ಕಾಲ ಕೆಲಸ ಇತ್ತು. ಅದನ್ನು 125 ದಿನಗಳಿಗೆ ಏರಿಸಲಾಗಿದೆ. ಇದರಿಂದಾಗಿ ಇನ್ನೂ 25 ದಿನ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುತ್ತದೆ. ಹೊಸ ಯೋಜನೆ ಕುರಿತು ಎಲ್ಲ ರಾಜ್ಯ ಸರ್ಕಾರಗಳೊಂದಿಗೆ ಸುದೀರ್ಘವಾಗಿ ಚರ್ಚೆ ಮಾಡಲಾಗಿದೆ. ತಾಂತ್ರಿಕ ಕಾರ್ಯಾಗಾರ ಮತ್ತು ಬಹುಪಕ್ಷೀಯ ಸಭೆಗಳನ್ನು ನಡೆಸಲಾಗಿದೆ. ಆಗ ಯಾವುದೇ ವಿರೋಧ ಮಾಡದ ಕಾಂಗ್ರೆಸ್ ಕೇವಲ ರಾಜಕಾರಣಕ್ಕಾಗಿ ಈಗ ವಿರೋಧ ಮಾಡುತ್ತಿದೆ ಎಂದರು.

2013ರ ಸಿಎಜಿ ವರದಿಯಲ್ಲಿ 4.33 ಲಕ್ಷಕ್ಕೂ ಅಧಿಕ ನಕಲಿ ಜಾಬ್ ಕಾರ್ಡ್ ಸೃಷ್ಟಿಸಲಾಗಿದೆ ಎಂಬ ಸತ್ಯ ಬಯಲಾಗಿದೆ. ಇದರಿಂದ ಸಾವಿರಾರು ಕೋಟಿ ರೂ. ನಷ್ಟವಾಗಿದೆ. ಜಾಬ್ ಕಾರ್ಡ್‌ನ ಅವಧಿಯನ್ನು 5 ರಿಂದ 3 ವರ್ಷಕ್ಕೆ ಇಳಿಸಲಾಗಿದೆ. ಪ್ರತಿ 3 ವರ್ಷಕ್ಕೆ ಒಂದು ಬಾರಿ ಕಾರ್ಡ್ ಕುರಿತು ಸಮಗ್ರ ಪರಿಶೀಲನೆ ಮಾಡಲಾಗುತ್ತದೆ. ಹೀಗಾಗಿ ಹಿಂದಿನಂತೆ ಮೃತರ ಹೆಸರಲ್ಲಿ ಜಾಬ್ ಕಾರ್ಡ್ ನೀಡಲು ಸಾಧ್ಯವಿಲ್ಲ. 23 ರಾಜ್ಯಗಳಲ್ಲಿ ಸಂಬಳ ನೀಡಲು ವಿಳಂಬ ಮಾಡಲಾಗಿದೆ. ಈಗ ವೇತನ ನೀಡಲು ಕಾಲಮಿತಿ ವಿಧಿಸಲಾಗಿದೆ.

ಅತಿಯಾದ ಭ್ರಷ್ಟಾಚಾರವನ್ನು ತಡೆಗಟ್ಟಲು ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿದೆ. ಜಿಪಿಎಸ್ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮೂಲಕ ಅಕ್ರಮ ತಡೆಯಬಹುದು. ಪ್ರತಿ ವಾರ ಗ್ರಾಮ ಪಂಚಾಯಿತಿಗಳಲ್ಲಿ ಸಭೆ ಮಾಡಿ, ಕಾಮಗಾರಿಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಕಲ್ಪಿಸಿರುವುದರಿಂದ ಅಗತ್ಯವಾದ ಕಾಮಗಾರಿ ಹಾಗೂ ಅನಗತ್ಯವಾದ ಕಾಮಗಾರಿಗಳನ್ನು ಸರಿಯಾಗಿ ಗುರುತಿಸಬಹುದು. ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸಿದ್ದು, ಗೈರಾದವರ ಪತ್ತೆ ಸುಲಭವಾಗುತ್ತದೆ. ಹಳ್ಳಿಗಳಲ್ಲಿ ಕೊಯ್ಲು ಸಮಯದಲ್ಲಿ 60 ದಿನಗಳಿಗೆ ಕೃಷಿಗೆ ಕಾರ್ಮಿಕರು ಸಿಗುವುದಿಲ್ಲ. ಈ ಸಮಯದಲ್ಲಿ ಕಾಮಗಾರಿ ಕೈಗೊಂಡರೆ ರೈತರಿಗೆ ಕಷ್ಟವಾಗುತ್ತದೆ. 60 ದಿನ ಕಾಮಗಾರಿ ಸ್ಥಗಿತವಾಗುತ್ತದೆ. ಆದರೆ ಒಟ್ಟು ಕೆಲಸದ ದಿನಗಳ ಸಂಖ್ಯೆ 100 ರಿಂದ 125 ಆಗಿದೆ ಎಂದರು.

ಮೋದಿ ಸರ್ಕಾರದಿಂದ ಬೆಂಬಲ

ಮೋದಿ ಸರ್ಕಾರ ಮನರೇಗಾ ಯೋಜನೆಗೆ ಹೆಚ್ಚು ಬೆಂಬಲ ನೀಡಿದೆ. ಮನರೇಗಾ ಯೋಜನೆಗೆ ಮನಮೋಹನ್ ಸಿಂಗ್ ಸರ್ಕಾರ 2013–14 ರಲ್ಲಿ ಬಜೆಟ್‌ನಲ್ಲಿ 33,000 ಕೋಟಿ ರೂ. ನೀಡಿದ್ದರೆ, 2024–25 ರಲ್ಲಿ ಬಜೆಟ್‌ನಲ್ಲಿ ಮೋದಿ ಸರ್ಕಾರ 2,86,000 ಕೋಟಿ ರೂ. ನೀಡಿದೆ. ಯುಪಿಎ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಮನರೇಗಾ ಯೋಜನೆಗೆ 2.13 ಲಕ್ಷ ಕೋಟಿ ರೂ. ಬಿಡುಗಡೆಯಾಗಿದ್ದರೆ, ಎನ್‌ಡಿಎ ಅವಧಿಯಲ್ಲಿ 8.53 ಲಕ್ಷ ಕೋಟಿ ರೂ. ಬಿಡುಗಡೆಯಾಗಿದೆ. ಯುಪಿಎ ಅವಧಿಯಲ್ಲಿ ವರ್ಷಕ್ಕೆ 153 ಲಕ್ಷ ಕಾಮಗಾರಿಗಳು ನಡೆಯುತ್ತಿದ್ದರೆ. ಎನ್‌ಡಿಎ ಅವಧಿಯಲ್ಲಿ 862 ಲಕ್ಷ ಕಾಮಗಾರಿಗಳು ನಡೆಯುತ್ತಿವೆ ಎಂದು ತಿಳಿಸಿದರು.

ಮಾಜಿ ಪ್ರಧಾನಿ ಇಂದಿರಾಗಾಂಧಿ ಗರೀಬಿ ಹಟಾವೋ ಘೋಷಣೆ ಮಾಡಿದ್ದರು. ಮನರೇಗಾ ಯೋಜನೆಗಳನ್ನು ಇಷ್ಟು ವರ್ಷಗಳ ಕಾಲ ನಡೆಸಿಯೂ ಕಾಂಗ್ರೆಸ್‌ನಿಂದ ಬಡತನ ನಿರ್ಮೂಲನೆಯಾಗಲೇ ಇಲ್ಲ. ಮೋದಿ ಸರ್ಕಾರದಲ್ಲಿ, ಬಡತನದ ಪ್ರಮಾಣ ಇಳಿಕೆ ಕಂಡಿದೆ. 2011–12ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೇ.25.7ರಷ್ಟು ಬಡತನವಿತ್ತು. 2023–24ರಲ್ಲಿ ಅದು ಶೇ.5ಕ್ಕೆ ಇಳಿದಿದೆ ಎಂದರು.

ರಾಜೀನಾಮೆ ನೀಡಿ, ತನಿಖೆ ಮಾಡಿ

ವಿಧಾನಸಭೆಯಲ್ಲಿ ಮಾತನಾಡಿದ ಆರ್.ಅಶೋಕ್, ಇಡೀ ಕರ್ನಾಟಕ ಬೆಚ್ಚಿಬೀಳುವಂತೆ ಅಬಕಾರಿ ಇಲಾಖೆಯಲ್ಲಿ 6,000 ಕೋಟಿ ರೂ. ಹಗರಣ ನಡೆದಿದೆ. ಇದಕ್ಕೆ ಸಂಬಂಧಿಸಿದಂತೆ 5 ದಾಖಲೆಗಳನ್ನು ನಾನು ನೀಡಿದ್ದೇನೆ. ಆಡಿಯೋ ದಾಖಲೆ, ಲೋಕಾಯುಕ್ತದಲ್ಲಿನ ದೂರಿನ ಪ್ರತಿ ನೀಡಿದ್ದೇನೆ. ಅಬಕಾರಿ ಇಲಾಖೆಯ ಜಂಟಿ ಆಯುಕ್ತ ಮಾತನಾಡಿದ ಮಾತಿನ ಧ್ವನಿ ಮುದ್ರಣ ಲಭ್ಯವಿದೆ. ಇಷ್ಟಾದರೂ ಸಚಿವ ಆರ್.ಬಿ.ತಿಮ್ಮಾಪುರ ರಾಜೀನಾಮೆ ನೀಡಿಲ್ಲ. ಹಿಂದೆ ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆ ಕೊಟ್ಟು ತನಿಖೆಯ ಬಳಿಕ ಮತ್ತೆ ಸಚಿವರಾಗಿದ್ದರು. ಅದರಂತೆಯೇ ತಿಮ್ಮಾಪುರ ಕೂಡ ರಾಜೀನಾಮೆ ನೀಡಿ, ತನಿಖೆಯಾಗಲಿ. ಬಳಿಕ ಆರೋಪಮುಕ್ತರಾಗಿ ಮತ್ತೆ ಸಚಿವರಾಗಲಿ ಎಂದರು. ಮದ್ಯ ಮಾರಾಟಗಾರರು ಅಬಕಾರಿ ಇಲಾಖೆ ಅಧಿಕಾರಿಗಳು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಇದರ ವಿರುದ್ಧ ಕ್ರಮ ವಹಿಸದಿದ್ದರೆ ಸಿಎಂ ಸಿದ್ದರಾಮಯ್ಯನವರಿಗೆ ಇದರಲ್ಲಿ ಪಾಲು ಇದೆ ಎಂದೇ ಭಾವಿಸಬೇಕಾಗುತ್ತದೆ. ಬಳ್ಳಾರಿ ಲೋಕಸಭಾ ಚುನಾವಣೆಗೆ ಅಕ್ರಮವಾಗಿ ಹಣ ಬಳಸಲಾಗಿತ್ತು. ಈಗ ಅಸ್ಸಾಂ ಹಾಗೂ ಕೇರಳ ಚುನಾವಣೆಗೂ ಹಣ ಬಳಸಲಾಗುತ್ತಿದೆ. ಇದು ಕೇವಲ ಎಟಿಎಂ ಅಲ್ಲ, ಕರ್ನಾಟಕವನ್ನು ಕೇಂದ್ರದ ಕಾಂಗ್ರೆಸ್ ನಾಯಕರು ರಿಸರ್ವ್ ಬ್ಯಾಂಕ್ ಮಾಡಿಕೊಂಡಿದ್ದಾರೆ ಎಂದರು.

ಅಧಿಕಾರ ಹಂಚಿಕೆ ಸಂಬಂಧ ಫೆ. 8 ರಂದು ಸಭೆ ನಿಗದಿ

• ವಾಟ್ಸಾಪ್ ಮೂಲಕ ಸಿಎಂ, ಡಿಸಿಎಂಗೆ ರಾಹುಲ್ ಗಾಂಧಿ ಮಾಹಿತಿ • ಇದರ ಬೆನ್ನಲ್ಲೇ ಡಾ.ಪರಮೇಶ್ವರ್, ಎಂ.ಬಿ. ಪಾಟೀಲ್ ನೇತೃತ್ವದಲ್ಲಿ ಸಮುದಾಯದ ಶಾಸಕರ ಪ್ರತ್ಯೇಕ ಸಭೆ

ಬೆಂಗಳೂರು, ಫೆ. 4(ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನಲ್ಲಿನ ಅಧಿಕಾರ ಹಂಚಿಕೆ ಗೊಂದಲ ನಿವಾರಿಸಲು ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಕೊನೆಗೂ ಸಮಯ ನಿಗದಿಪಡಿಸಿದ್ದಾರೆ.

ಫೆಬ್ರವರಿ 8ರಂದು ದೆಹಲಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳಿಗೆ ಆಹ್ವಾನ ನೀಡಿದ್ದಾರೆ. ಉಭಯ ನಾಯಕರಿಗೂ ವಾಟ್ಸ್ ಆಪ್ ಸಂದೇಶ ಕಳುಹಿಸಿ, ದೆಹಲಿಯ ಇಂದಿರಾ ಭವನಕ್ಕೆ ಬರುವಂತೆ ಸೂಚಿಸಿದ್ದಾರೆ.

ರಾಹುಲ್ ಆಹ್ವಾನ ಖಚಿತವಾಗುತ್ತಿದ್ದಂತೆ ಕಾಂಗ್ರೆಸ್‌ನಲ್ಲಿನ ವೀರಶೈವ/ಲಿಂಗಾಯಿತ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗದ ಸಚಿವರು, ಶಾಸಕರು ದಿಢೀರ್ ಪ್ರತ್ಯೇಕ ಸಭೆ ಸೇರಿ ಹಠಾತ್ ಬೆಳವಣಿಗೆ ಕುರಿತು ಚರ್ಚಿಸಿದ್ದಾರೆ.

ಕಳೆದ ರಾತ್ರಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರು, ಶಾಸಕರು ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿ, ಸಿದ್ದರಾಮಯ್ಯ ಬದಲಾವಣೆ ಮಾಡುವುದೇ ಆದರೆ, ದಲಿತ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಬೇಕೆಂಬ ನಿರ್ಣಯ ಕೈಗೊಂಡಿದ್ದು, ವರಿಷ್ಠರಿಗೆ ತಿಳಿಸುವ ತೀರ್ಮಾನ ಕೈಗೊಂಡಿದ್ದಾರೆ.



ಸಭೆಯಲ್ಲಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ, ಶಿವರಾಜ್ ತಂಗಡಗಿ, ಮಾಜಿ ಸಚಿವ ಕೆ.ಎನ್.ರಾಜಣ್ಣ ಸೇರಿದಂತೆ 20ಕ್ಕೂ ಹೆಚ್ಚು ಶಾಸಕರು ಭಾಗವಹಿಸಿದ್ದರು.

ಸಿದ್ದರಾಮಯ್ಯ ಬದಲಿಸಿದರೆ, ನಮ್ಮ ಸಮುದಾಯಕ್ಕೆ ಅವಕಾಶ ನೀಡಬೇಕು. ಜೊತೆಗೆ ಎಸ್‌ಟಿಪಿಎಸ್/ಟಿಎಸ್‌ಪಿ ಅನುದಾನ ಬಳಕೆ, ಮುಂಗಡಪತ್ರದಲ್ಲಿ ದಲಿತರಿಗೆ ವಿಶೇಷ ಅನುದಾನ ನೀಡುವಂತೆ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಲು ಸಭೆ ನಿರ್ಣಯಿಸಿತು. ಸೋಮವಾರ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ವೀರಶೈವ/ಲಿಂಗಾಯಿತ ಸಮುದಾಯಕ್ಕೆ ಸೇರಿದ 28 ಶಾಸಕರು ಸಭೆ ಸೇರಿ, ಮುಂದೆ ಆಗಲಿರುವ ರಾಜಕೀಯ ಬೆಳವಣಿಗೆ ಕುರಿತು ಸುದೀರ್ಘ ಸಮಾಲೋಚನೆ ನಡೆಸಿ, ಹೊಸ ಸರ್ಕಾರ ರಚನೆ ಅಥವಾ ಸಂಪುಟ ಪುನರ್ ರಚನೆ ವೇಳೆ ತಮ್ಮ ಸಮುದಾಯಕ್ಕೆ ಹೆಚ್ಚಿನ ಅವಕಾಶ ನೀಡಬೇಕೆಂಬ ನಿರ್ಣಯ ಮಾಡಿ ವರಿಷ್ಠರಿಗೆ ಕಳುಹಿಸಲು ತೀರ್ಮಾನಿಸಿದರು.

ಸಮುದಾಯದ ದೃಷ್ಟಿಯಿಂದ ಒಗ್ಗಟ್ಟು ಪ್ರದರ್ಶನ ಮಾಡಿದ್ದೇವೆಯೇ ಹೊರತು ಯಾವುದೇ ನಾಯಕರ ಪರ ಅಥವಾ ವಿರೋಧಕ್ಕಲ್ಲ.

ಸಿದ್ದರಾಮಯ್ಯ ಅವರ ಬದಲಾವಣೆ ಮಾಡುವುದೇ ಆದರೆ, ನಮ್ಮ ಸಮುದಾಯ ಆ ಸ್ಥಾನ ಪಡೆಯಲು ಮುಂದಾಗುವುದಿಲ್ಲ. ಆದರೆ, ನಮಗೆ ಸಂಪುಟದಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು.

ಅಲ್ಲದೆ, ಸಮುದಾಯದ ಅಭಿವೃದ್ಧಿಗೆ ಮುಂಗಡಪತ್ರದಲ್ಲಿ ಹೊಸ ಕಾರ್ಯಕ್ರಮ ರೂಪಿಸಿ ಅನುದಾನ ನೀಡುವಂತೆ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

ದೆಹಲಿಯಲ್ಲಿ ಭಾನುವಾರ ನಡೆಯಲಿರುವ ಸಭೆಯ ಮಾಹಿತಿಯನ್ನು ಶಿವಕುಮಾರ್ ಅವರೇ ತಮ್ಮ ಆಪ್ತ ಶಾಸಕರಿಗೆ ಖಚಿತ ಪಡಿಸಿದ್ದಾರೆ.

ಮಂಗಳವಾರ ಬೆಳಗ್ಗೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಆಪ್ತ ಶಾಸಕರೊಂದಿಗಿನ ಸಮಾಲೋಚನೆ ವೇಳೆ ಕೆಲವರು, ಅಧಿಕಾರ ಪಡೆಯುವಲ್ಲಿ ಕಠಿಣ ನಿಲುವು ಕೈಗೊಳ್ಳುವಂತೆ ಶಿವಕುಮಾರ್ ಅವರನ್ನು ಒತ್ತಾಯಿಸಿದರು ಎನ್ನಲಾಗಿದೆ.

ಈ ಸಂದರ್ಭದಲ್ಲಿ ಸಭೆ ಕರೆಯುವಂತೆ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದ್ದೆ. ಇದಕ್ಕೆ ಸ್ಪಂದಿಸಿದ ಅವರು ವಾಟ್ಸ್ ಆಪ್ ಮೂಲಕವೇ ಫೆಬ್ರವರಿ 8ರಂದು ಸಭೆ ನಿಗದಿಪಡಿಸಿರುವುದಾಗಿ ತಿಳಿಸಿದ್ದಾರೆ. ಭಾನುವಾರದ ಸಭೆ ನಂತರ ಮುಂದಿನ ತೀರ್ಮಾನ ಕೈಗೊಳ್ಳೋಣ ಎಂಬುದಾಗಿ ಆಪ್ತರಿಗೆ ಶಿವಕುಮಾರ್ ಹೇಳಿದ್ದಾರೆ.

ಉನ್ನತ ಮೂಲಗಳ ಪ್ರಕಾರ ಮುಂದಿನ ಎಂಟು–ಹತ್ತು ದಿನಗಳಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ಪರಿಹಾರವಾಗಲಿದೆ.

ಸೈಬರ್ ವಂಚಕರ ಜಾಲಕ್ಕೆ ಸಿಲುಕಿ

2 ಲಕ್ಷ ಹಣ ಕಳೆದುಕೊಂಡ ಕಾಲೇಜು ವಿದ್ಯಾರ್ಥಿ

ಮೈಸೂರು, ಫೆ.4(ಪಿಎಂ)– ಕಾಲೇಜು ವಿದ್ಯಾರ್ಥಿಯೊಬ್ಬ ಸೈಬರ್ ವಂಚನೆಗೆ ಒಳಗಾಗಿ 2,03,000 ರೂ. ಕಳೆದು ಕೊಂಡಿರುವ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ 21 ವರ್ಷದ ಯುವಕನೊಬ್ಬ ಹೀಗೆ ವಂಚನೆಗೆ ಒಳಗಾಗಿದ್ದಾನೆ. ಇನ್‌ಸ್ಟಾಗ್ರಾಂನಲ್ಲಿ ಬಂದಿದ್ದ ಬಿಸಿನೆಸ್ ಬಗೆಗಿನ ಮಾಹಿತಿ ನಂಬಿ ಮುಂದುವರೆದಾಗ, ಆನ್‌ಲೈನ್ ಟ್ರೇಡರ್ ಒಬ್ಬರು ಯುಪಿಐ ಮೂಲಕ ಹಣ ಹಾಕಿಸಿ ಕೊಂಡು ಹೆಚ್ಚು ಹಣ ಹಾಕುವಂತೆ ಬೆದರಿಸಿದರು ಎಂದು ಈ ಯುವಕ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಹೇಳಿಕೊಂಡಿದ್ದಾನೆ.

ಬಿಡಿ ಬಿಡಿಯಾಗಿ ಹಣ ಹಾಕಿಸಿಕೊಂಡಿದ್ದು, ಹಲವು ಬಾರಿ ಹಣ ವರ್ಗಾವಣೆ ಮಾಡಿದ್ದಾನೆ. ನನ್ನ ಬ್ಯಾಂಕ್ ಖಾತೆಯಿಂದ ಮಾತ್ರವಲ್ಲದೇ ನನ್ನ ತಾಯಿಯವರ ಬ್ಯಾಂಕ್ ಖಾತೆಯಿಂದಲೂ 2 ಬಾರಿ ಹಣ ಕಳುಹಿಸಿದ್ದೇನೆ. ಹೀಗೆ ಒಟ್ಟಾರೆ 2,03,000 ರೂ. ಅನ್ನು ವಂಚಕರಿಗೆ ವರ್ಗಾವಣೆ ಮಾಡಿ ಮೋಸ ಹೋಗಿದ್ದೇನೆಂದು ಯುವಕ ನೀಡಿದ ದೂರಿನನ್ವಯ ಫೆ.3ರಂದು ಪ್ರಕರಣ ದಾಖಲಾಗಿದೆ.

ಅಕ್ರಮ ಸಂಬಂಧ, ಹತ್ಯೆ ಆರೋಪಿ ಜ್ಯೋತಿಷಿ ಕಮಲಾಕರ್ ವಿಚಾರ ರಾಜಕೀಯ ತಿರುವು

ಸಿಎಂ ಸಿದ್ದರಾಮಯ್ಯ ಜೊತೆ ಕಮಲಾಕರ್ ಚಿತ್ರ ಹರಿಬಿಟ್ಟ ಶಾಸಕ ಸುರೇಶ್ ಕುಮಾರ್‌ಗೆ ಹರಿಪ್ರಸಾದ್ ತಿರುಗೇಟು!

ಬೆಂಗಳೂರು, ಫೆ.4–ಅಕ್ರಮ ಸಂಬಂಧ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಹತ್ಯೆ ಪ್ರಕರಣದಲ್ಲಿ ಬಂಧಿತನಾಗಿರುವ ಜ್ಯೋತಿಷಿ ಕಮಲಾಕರ ಭಟ್ ವಿಚಾರ ಇದೀಗ ರಾಜಕೀಯ ತಿರುವು ಪಡೆದುಕೊಂಡಿದೆ.

ಹತ್ಯೆ ಆರೋಪ ಪ್ರಕರಣದಲ್ಲಿ ಬಂಧಿತನಾಗಿರುವ ಖ್ಯಾತ ಜ್ಯೋತಿಷಿ ಕಮಲಾಕರ ಭಟ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಇರುವ ಚಿತ್ರವೊಂದನ್ನು ಬಿಜೆಪಿ ನಾಯಕ ಸುರೇಶ್ ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್ ಹಿರಿಯ ನಾಯಕ ಬಿಕೆ ಹರಿಪ್ರಸಾದ್ ಈ ಪ್ರಕರಣಕ್ಕೆ ಬಿಜೆಪಿ ಹಿರಿಯ ನಾಯಕ ಸುರೇಶ್ ಕುಮಾರ್ ಅವರ ಕುಮ್ಮಕ್ಕೇ ಕಾರಣ ಎಂದು ಆಪಾದಿಸಿದ್ದಾರೆ.

ಜ್ಯೋತಿಷಿ ಕಮಲಾಕರ್ ಭಟ್ ಅಕ್ರಮ ಸಂಬಂಧ ವಿಚಾರ ರಾಜ್ಯಾದ್ಯಂತ ಈಗ ಚರ್ಚೆಗೆ ಗ್ರಾಸವಾಗಿದೆ. ಇಂತಹವರನ್ನು ಓರ್ವ ಶಾಸಕನಾಗಿ ಪ್ರೋತ್ಸಾಹಿಸಿ ಬೆಳೆಸಿದ್ದು ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ ಎಂದು ಶಾಸಕ ಸುರೇಶ್ ಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಈ ಪ್ರಕರಣ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಹರಿಪ್ರಸಾದ್. ಕಾರವಾರದ ಸಿದ್ದಾಪುರದಲ್ಲಿ ಕಮಲಾಕರ್ ಭಟ್ ಹೆಸರಿನ ಜ್ಯೋತಿಷಿಯ ಅಕ್ರಮ ಸಂಬಂಧಕ್ಕೆ 41 ವರ್ಷದ ಅಮಾಯಕ ವಸಂತ್ ನಾಯ್ಕ್ ಬಲಿಯಾಗಿದ್ದಾರೆ.

ಈ ಕ್ರಿಮಿನಲ್ ಪ್ರಕರಣ ನ್ಯಾಯಯುತ ತನಿಖೆಯಾಗಿ, ನ್ಯಾಯಾಲಯ ತೀರ್ಪು ಕೊಡುತ್ತದೆ. ಆದರೆ, ಇಂತಹ ಪ್ರಕರಣದಲ್ಲಿ ಸಂಘಪರಿವಾರದ ಹಿನ್ನಲೆಯಿಂದ ಬಂದ ಬಿಜೆಪಿಯ ಸುರೇಶ್ ಕುಮಾರ್, ಬಿವೈ ವಿಜಯೇಂದ್ರ ಅಂತಹ ಜನಪ್ರತಿನಿಧಿಗಳ ಪಾತ್ರ ಏನು ಎಂಬುದು ಸ್ವಸ್ಥ ಸಮಾಜ ದೃಷ್ಟಿಯಿಂದ ಮುಖ್ಯವಾಗುತ್ತದೆ ಎಂದಿದ್ದಾರೆ. ಕಮಲಾಕರ ಭಟ್ ಎಂಬ ಜೋತಿಷಿ ಭಾಗಿಯಾದ ಕೊಲೆ ಕೇಸ್‌ನಲ್ಲಿ ರಾಜಾಜಿನಗರ ಶಾಸಕ ಸುರೇಶ್ ಕುಮಾರ್ ಅವರಂತಹವರ ಪಾತ್ರವಿಲ್ಲವೇ, ಕೊಲೆ ಆರೋಪಿ ಜೋತಿಷಿ 'ಗುರೂಜಿ' ಕಮಲಾಕರ ಭಟ್ಟನನ್ನು ಓರ್ವ ಶಾಸಕನಾಗಿ ಪ್ರೋತ್ಸಾಹಿಸಿ ಬೆಳೆಸಿದ್ದು ಸಂವಿಧಾನಕ್ಕೆ ಮಾಡುವ ಅಪಚಾರವಲ್ಲವೇ. ಓರ್ವ ಮಾಜಿ ಕಾನೂನು ಸಚಿವನಿಗೆ ಇಷ್ಟೂ ಅರಿವಿಲ್ಲದಿರುವುದು ಈ ರಾಜ್ಯದ ದುರಂತವಾಗಿದೆ ಎಂದು ಟೀಕಾ ಪ್ರಹಾರ ನಡೆಸಿದ್ದಾರೆ.



ಹರಿಪ್ರಸಾದ್



ಸುರೇಶ್‌ಕುಮಾರ್


ಕೊಲೆಗಡುಕ, ಮಹಿಳಾ ಪೀಡಕ ಕಮಲಾಕರ ಭಟ್ ತನ್ನಲ್ಲಿಗೆ ಜೋತಿಷ್ಯ ಕೇಳಲು ಬರುವ ಗ್ರಾಹಕರನ್ನು ಲೈಂಗಿಕವಾಗಿ ಶೋಷಿಸುತ್ತಿದ್ದ. ಅದರ ಭಾಗವಾಗಿಯೇ ಮಹಿಳೆಯ ಜೊತೆ ಅಕ್ರಮ ಸಂಬಂಧ ಹೊಂದಿ ಅದು ಕೊಲೆಯವರೆಗೂ ಹೋಗಿದೆ. ಈ ರೀತಿ ಜನರ ಮೂಢನಂಬಿಕೆಯನ್ನೇ ಬಳಸಿಕೊಂಡು ಹಲವು ಅಕ್ರಮ ಸಂಪತ್ತು ಸಂಪಾದಿಸಿಕೊಂಡು ಇಂತಹ 'ಜೀ–ಗುರೂಜಿ'ಗಳು ಸಮಾಜ ಸೇವೆಯ ಹೆಸರಿನಲ್ಲಿ ಸಮಾಜವನ್ನೇ ಯಾಮಾರಿಸುತ್ತಾರೆ. ಇಂತಹ ಮೂಢನಂಬಿಕೆಯ ಅಕ್ರಮ ದಂಧೆಗಳನ್ನು ಬಿಜೆಪಿಯ ಸ್ವಯಂ ಘೋಷಿತ ಸಜ್ಜನ ಶಾಸಕ ಬಿರುದಾಂಕಿತ ಬಿಜೆಪಿಯ ಸುರೇಶ್ ಕುಮಾರ್ ಬೆನ್ನುತಟ್ಟಿ ಪ್ರೋತ್ಸಾಹಿಸಿ ಬೆಳೆಸಿದ್ದಾರೆ. ಹಾಗಾಗಿ ಈ ಕೊಲೆಯಲ್ಲಿ ಸುರೇಶ್ ಕುಮಾರ್ ಅಂತಹವರ ಪಾತ್ರ ಬಹಳ ಮುಖ್ಯವಾಗುತ್ತದೆ ಎಂದಿದ್ದಾರೆ.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



ಮೈಸೂರು ಮಿತ್ರ

ಗುರುವಾರ 5 ಫೆಬ್ರವರಿ 2026


ಮಾನವ-ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ತಡೆಯೊಡ್ಡಿ

ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್‌ಗೆ ಹೆಚ್.ಡಿ.ಕುಮಾರಸ್ವಾಮಿ ಮನವಿ

● ಪ್ರಾಣಿ ಉಪಟಳ ಪರಿಣಾಮದ ವಿವರಣೆ ● ಜನರ ಜೀವ ರಕ್ಷಣೆಗೆ ಕೋರಿಕೆ ● ಸಮಗ್ರ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ

ನವದೆಹಲಿ, ಫೆ4(ಬಿಎಲ್‌ಯು)– ಮೈಸೂರು, ಹಾಸನ, ಕೊಡಗು, ಚಾಮರಾಜನಗರ ಸೇರಿದಂತೆ ಕರ್ನಾಟಕದ ಇತರೆ ಜಿಲ್ಲೆಗಳ ಮಾನವ– ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ತಡೆಯೊಡ್ಡಿ, ಜನರ ಜೀವ ರಕ್ಷಣೆ ಮಾಡಬೇಕೆಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಆಗ್ರಹಿಸಿದ್ದಾರೆ.

ನವ ದೆಹಲಿಯ ಸಂಸತ್‌ನ ಅವರ ಕಚೇರಿಯಲ್ಲಿ ಇಂದು ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿದ ಅವರು, ಪ್ರಾಣಿಗಳ ಉಪಟಳದಿಂದ ಜನರು ಯಾವ ರೀತಿ ಯಾತನೆ ಅನುಭವಿಸುತ್ತಿದ್ದಾರೆ ಎಂಬುದನ್ನು ವಿವರಿಸಿದರು.



ನವದೆಹಲಿಯ ಸಂಸತ್ ಭವನದಲ್ಲಿ ಬುಧವಾರ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಹಳೇ ಮೈಸೂರು ಭಾಗದ ಪ್ರಾಣಿಗಳ ಉಪಟಳ ತಡೆಯುವ ನಿಟ್ಟಿನಲ್ಲಿ ತುರ್ತು ಕ್ರಮಕ್ಕೆ ಆಗ್ರಹಿಸಿದರು.

ಅರಣ್ಯದಂಚಿನಲ್ಲಿರುವ ಜನರು ಕಾಡು ಪ್ರಾಣಿಗಳಿಗೆ ಬಲಿಯಾಗುತ್ತಿದ್ದಾರೆ. ಹಲವರು ಮೃತರಾದರೆ, ಇನ್ನೂ ಕೆಲವರು ಗಾಯಗೊಂಡು ಶಾಶ್ವತ ಅಂಕವೈಕಲ್ಯಕ್ಕೆ ತುತ್ತಾಗುತ್ತಿದ್ದಾರೆ. ಜನರು ನಿರ್ಭೀತಿಯಿಂದ ಬದುಕು ನಡೆಸುವ ಪರಿಸ್ಥಿತಿ ಇಲ್ಲ ಎಂದು ಕುಮಾರಸ್ವಾಮಿ ಅವರು ವಸ್ತುಸ್ಥಿತಿ ಮನವರಿಕೆ ಮಾಡಿಕೊಟ್ಟರು.

ಈ ವೇಳೆ ಕುಮಾರಸ್ವಾಮಿ ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಭೂಪೇಂದ್ರ ಯಾದವ್ ಅವರು, ಈ ಬಗ್ಗೆ ತುರ್ತು ಗಮನ ಹರಿಸುವುದಾಗಿ– ಭರವಸೆ ನೀಡಿದರು. ಅಲ್ಲದೆ ಈ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಯಾವ ರೀತಿಯ ಪರಿಹಾರ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅಲ್ಲದೆ ಸಂಸತ್ ಅಧಿವೇಶನ ಪೂರ್ಣಗೊಳ್ಳುವ ಮುನ್ನ ಈ ಸಮಸ್ಯೆ ಬಗ್ಗೆ ಸಮಗ್ರ ಮಾಹಿತಿ ನೀಡಬೇಕೆಂದು ಭೂಪೇಂದ್ರ ಯಾದವ್ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಒಡೆಯರ್ ಎಕ್ಸ್‌ಪ್ರೆಸ್ ರಾಮನಗರದಲ್ಲಿ ನಿಲುಗಡೆಗೆ ಮನವಿ

ಇದೇ ವೇಳೆ ಸಂಸತ್ ಭವನದಲ್ಲಿ ಇಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಕೂಡ ಭೇಟಿ ಮಾಡಿದ ಹೆಚ್.ಡಿ.ಕುಮಾರಸ್ವಾಮಿ ಅವರು, ಮೈಸೂರು– ಬೆಂಗಳೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲುಗಡೆಗೆ ಅವಕಾಶ ನೀಡುವಂತೆ ಮನವಿ ಸಲ್ಲಿಸಿದರು. ಅಲ್ಲದೆ ಮಂಡ್ಯದಲ್ಲಿ ಸುಧಾರಿತ ಆಧಾರ್ ಸೇವೆಗಳು ಮತ್ತು ಮೂಲಸೌಕರ್ಯಗಳನ್ನು ಒದಗಿಸುವ ಬಗ್ಗೆಯೂ ಮನವರಿಕೆ ಮಾಡಿಕೊಟ್ಟರು.

ಈ ವೇಳೆ ಬೆಂಗಳೂರು– ಮುಂಬೈ ನಡುವೆ ಹೊಸ ರೈಲು ಸಂಚಾರ ಆರಂಭಿಸಲಾಗುವುದು ಎಂದು ಅಶ್ವಿನಿ ವೈಷ್ಣವ್ ಭರವಸೆ ನೀಡಿದರು. ಜೊತೆಗೆ ಬೆಂಗಳೂರು– ಪುಣೆ ನಡುವೆ ಹೈ–ಸ್ಪೀಡ್ ರೈಲು ಕಾರಿಡಾರ್ ನೀಡಲಾಗಿದ್ದು, ಅದು ಬೆಳಗಾವಿ– ಹುಬ್ಬಳ್ಳಿ ಮೂಲಕ ಹಾದು ಹೋಗಲಿದೆ ಎಂದು ಅಶ್ವಿನಿ ವೈಷ್ಣವ್ ಅವರು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಹೊಸ ರೈಲು ಸಂಪರ್ಕ, ಹಾಲಿ ರೈಲು ಮಾರ್ಗಗಳಲ್ಲಿ ವನ್ಯಜೀವಿಗಳ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ರೈಲ್ವೆ ಬೇಲಿ ಮತ್ತು ಬ್ಲಾಕ್ ಕಾರಿಡಾರ್‌ಗಳ ಅನುಷ್ಠಾನ ಕುರಿತಂತೆಯೂ ಕುಮಾರಸ್ವಾಮಿ ಹಾಗೂ ಅಶ್ವಿನಿ ವೈಷ್ಣವ್ ಅವರು ಮಾತುಕತೆ ನಡೆಸಿದರು. ಈ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್, ಸಂಸದ ಮಲ್ಲೇಶ್ ಬಾಬು, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಜರಿದ್ದರು.

ನಿರ್ಮಲಾ ಸೀತಾರಾಮನ್ ಭೇಟಿ: ಇದೇ ಸಂದರ್ಭದಲ್ಲಿ ಸಂಸತ್ ಭವನದಲ್ಲಿ ಇಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಉಕ್ಕು ವಲಯವನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಸಮಾಲೋಚನೆ ನಡೆಸಿದರು.

ಉಕ್ಕು ಸಚಿವಾಲಯದ ಹೊಸ ಹೂಡಿಕೆಗಳು ಮತ್ತು ಈಗಾಗಲೇ ನಡೆಯುತ್ತಿರುವ ಯೋಜನೆಗಳ ಬಗ್ಗೆ ಕೂಡ ಚರ್ಚೆ ನಡೆಸಿದರು. ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವ ಮತ್ತು ವಿಕಸಿತ ಭಾರತ– 2047 ರ ದೃಷ್ಟಿಕೋನವನ್ನು ಮುನ್ನಡೆಸುವ ಭವಿಷ್ಯತ್ತಿನ ಕೇಂದ್ರದ ಆಯವ್ಯಯ ಮಂಡನೆ ಮಾಡಿರುವುದಕ್ಕೆ ಕುಮಾರಸ್ವಾಮಿ ಅವರು ನಿರ್ಮಲಾ ಸೀತಾರಾಮನ್ ಅವರನ್ನು ಅಭಿನಂದಿಸಿದರು.



ಮಂಗಳವಾರ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ದೆಹಲಿಯಲ್ಲಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿದರು. ಈ ವೇಳೆ ಮಾಜಿ ಸಚಿವ ಸಾರಾ ಮಹೇಶ್, ಎಂಎಲ್‌ಸಿ ಸಿ.ಎನ್ ಮಂಜೇಗೌಡ ಉಪಸ್ಥಿತರಿದ್ದರು.

ಮಾದಕ ವಸ್ತು ಮಾರಾಟಕ್ಕೆ ಯತ್ನ ; ಮೂವರ ಬಂಧನ

1.20 ಲಕ್ಷ ಮೌಲ್ಯದ 11.90 ಗ್ರಾಂ ಎಂಡಿಎಂಎ ಮಾದಕ ಪದಾರ್ಥ, ಕೃತ್ಯಕ್ಕೆ ಬಳಸಿದ್ದ ಕಾರು ವಶಕ್ಕೆ



ಅಮೀರ್‌ಖಾನ್



ಸೈಯದ್ ಇಮ್ರಾನ್



ಮಹಮ್ಮದ್ ನಬೀಲ್

ಮೈಸೂರು,ಫೆ.4(ಪಿಎಂ)– ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಮೂವರನ್ನು ಬಂಧಿಸಿರುವ ಉದಯಗಿರಿ ಪೊಲೀಸರು, ಅವರಿಂದ 1.20 ಲಕ್ಷ ರೂ. ಮೌಲ್ಯದ 11 ಗ್ರಾಂ 90 ಮಿಲಿಗ್ರಾಂ ತೂಕದ ಎಂಡಿಎಂಎ ಮಾದಕ ಪದಾರ್ಥ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಕೆಆರ್ ಮೊಹಲ್ಲಾ ನಿವಾಸಿಯಾದ ವಾಹನ ಚಾಲಕ ಅಮೀರ್ ಖಾನ್(27), ಎನ್‌ಆರ್ ಮೊಹಲ್ಲಾ ನಿವಾಸಿಯಾದ ಮೊಬೈಲ್ ರಿಪೇರಿ ಕೆಲಸಗಾರ ಸೈಯದ್ ಇಮ್ರಾನ್(30) ಹಾಗೂ ಬೆಳವಾಡಿ ನಿವಾಸಿಯಾದ ಇಂಜಿನಿಯರಿಂಗ್ ವಿದ್ಯಾರ್ಥಿ ಮಹಮ್ಮದ್ ನಬೀಲ್ (25) ಬಂಧಿತ ಆರೋಪಿಗಳು.

ಮಂಗಳವಾರ ಸಂಜೆ 5ರ ಸಮಯದಲ್ಲಿ ಸಾತಗಳ್ಳಿ ವಿಟಿಯು ಕಾಲೇಜು ಮತ್ತು ರಿಂಗ್ ರಸ್ತೆ ಕಡೆ ಗಸ್ತು ಮಾಡುತ್ತಿದ್ದ ಉದಯಗಿರಿ ಪೊಲೀಸರಿಗೆ ಈ ಮೂವರು ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತಿದೆ. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು, ಕಾರಿನಲ್ಲಿ ಬಂದು ಮೂನ್‌ಬಕ್ಸ್ ಕೆಫೆ ಬಳಿ ಡ್ರಗ್ಸ್ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾಗ ಈ ಮೂವರನ್ನು ಬಂಧಿಸಿದ್ದಾರೆ.

ಈ ವೇಳೆ ಅಮೀರ್‌ಖಾನ್ ಪ್ಯಾಂಟ್ ಜೇಬಿನಲ್ಲಿ ಎಂಡಿಎಂಎ ಮಾದಕ ವಸ್ತು ಪತ್ತೆಯಾಗಿದೆ. ವಿಚಾರಣೆ ವೇಳೆ ರೈಸೂಲ್ ಎಂಬವನಿಂದ ಖರೀದಿ ಮಾಡಿ ಇಮ್ರಾನ್ ಮತ್ತು ನಬೀಲ್‌ನ ಜೊತೆ ಸೇರಿ ಮಾರಾಟ ಮಾಡಲು ಕಾರಿನಲ್ಲಿ ಬಂದಿದ್ದೆವು ಎಂದು ಅಮೀರ್‌ಖಾನ್ ಒಪ್ಪಿಕೊಂಡಿದ್ದಾನೆ. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಾಗಿದೆ. ಅಮೀರ್‌ಖಾನ್ ವಿರುದ್ಧ ಈ ಹಿಂದೆ ಕೂಡ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಈ ಮೂವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೈಲಿಗೆ ಸಿಲುಕಿ ಎರಡು ಹಸು ಸಾವು

ಮೈಸೂರು,ಫೆ.4(ಪಿಎಂ)–ಮೈಸೂರಿನ ಮೇಟಗಳ್ಳಿಯ ಬಿಎಂ ಶ್ರೀ ನಗರದ ಸಮೀಪ ಚಲಿಸುತ್ತಿದ್ದ ರೈಲಿಗೆ ಸಿಲುಕಿ ಎರಡು ಹಸುಗಳು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ರೈಲ್ವೆ ಹಳಿ ಬಳಿ ಮೇಯುತ್ತಿದ್ದ ಹಸುಗಳು ಮೈಸೂರು ಮಾರ್ಗವಾಗಿ ತೆರಳುತ್ತಿದ್ದ ಅರಸೀಕೆರೆ ರೈಲಿಗೆ ಸಿಲುಕಿ ಸಾವನ್ನಪ್ಪಿವೆ. ಹಳಿಯಲ್ಲಿ ಬಿದ್ದಿದ್ದ ಹಸುಗಳ ಕಳೇಬರಗಳನ್ನು ರೈಲ್ವೆ ಸಿಬ್ಬಂದಿ ತೆರವು ಮಾಡಿದ್ದಾರೆ ಎಂದು ವರದಿಯಾಗಿದೆ. ಆದರೆ ಈ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲವೆಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

ಯುವ ವಿಶ್ವಕಪ್; ಅಫ್ಘನ್ ಮಣಿಸಿ 6ನೇ ಬಾರಿಗೆ ಫೈನಲ್ಸ್ ಪ್ರವೇಶಿಸಿದ ಭಾರತ

ಹರಾರೆ, ಫೆ.4(ವಿವಿಹೆಚ್)– 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯ ಎರಡನೇ ಸೆಮಿಫೈನಲ್ಸ್ ಪಂದ್ಯದಲ್ಲಿ ಅಫ್ಘಾನಿಸ್ತಾನವನ್ನು ಮಣಿಸಿದ ಭಾರತ ತಂಡ ದಾಖಲೆಯ 6ನೇ ಬಾರಿಗೆ ಫೈನಲ್ಸ್ ಪ್ರವೇಶಿಸಿತು.

ಇಲ್ಲಿನ ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಅಫ್ಘಾನಿಸ್ತಾನ ತಂಡ ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿತು. ತಂಡದ ಪರ ಫೈಸಲ್ ಶಿನೋಜಾಡಾ 93 ಎಸೆತಗಳಲ್ಲಿ 110 ರನ್‌ಗಳ ಶತಕ ಬಾರಿಸಿದರೆ, ಉಜ್ಜೈರುಲ್ಲಾ ನಯಾಜೈ ಅಜೇಯರಾಗಿ ಉಳಿದು 101 ರನ್‌ಗಳ ಇನ್ನಿಂಗ್ಸ್ ಆಡಿದರು. ಇಬ್ಬರೂ ಮೂರನೇ ವಿಕೆಟ್‌ಗೆ 208 ರನ್‌ಗಳ ಜೊತೆಯಾಟ ನೀಡಿ ತಂಡ ಮುನ್ನೂರರ ಗಡಿದಾಟಲು ಸಹಕರಿಸಿದರು.

ಉಳಿದಂತೆ ಉಸ್ಮಾನ್ ಸಾದತ್ 39, ಖಾಲಿದ್ ಅಹ್ಮದ್‌ಜೈ 31, ಅಜಿಜುಲ್ಲಾ 11 ಹಾಗೂ ಅಬುಲ್ ಅಜೀಜ್ ಅಜೇಯ 7 ರನ್ ಗಳಿಸಿದರು. ಅಂತಿಮವಾಗಿ ಅಫ್ಘನ್ 50 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 310ರನ್ ಗುರಿ ನೀಡಿತು. ಟೀಂ ಇಂಡಿಯಾ ಪರ ದಿಪೇಶ್ ದೇವೇಂದ್ರನ್ ಕಾನಿಷ್ಕ್ ಚೌಹಾಣ್ ತಲಾ 2 ವಿಕೆಟ್ ಕಿತ್ತರು.

ಅಫ್ಘನ್ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಭಾರತಕ್ಕೆ ಆರೋನ್ ಜಾರ್ಜ್ ಆಸರೆಯಾದರು. ಅವರು 104 ಎಸೆತಗಳಲ್ಲಿ 15 ಬೌಂಡರಿ, 2 ಸಿಕ್ಸರ್ ಸಹಿತ 115 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು.

ಇವರಿಗೆ ಸಾಥ್ ನೀಡಿದ ವೈಭವ್ ಸೂರ್ಯವಂಶಿ 33 ಎಸೆತಗಳಲ್ಲಿ 6, ನಾಯಕ ಆಯೂಷ್ ಮ್ಹಾತ್ರೆ 59 ಎಸೆತಗಳಲ್ಲಿ 62 ರನ್ ಗಳಿಸಿದರು. ಅಂತಿಮವಾಗಿ ವಿಹಾನ್ ಮಲ್ಹೋತ್ರ ಹಾಗೂ ವೇದಾಂತ್ ತ್ರಿವೇದಿ ಅಜೇಯರಾಗಿ ಉಳಿದು, ಕ್ರಮವಾಗಿ 38, 5 ರನ್ ಬಾರಿಸುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಜಾರ್ಜ್ ಹೋರಾಟದ ಫಲವಾಗಿ ಭಾರತ 41.1 ಓವರ್‌ಗಳಲ್ಲಿ ಕೇವಲ 3 ವಿಕೆಟ್ ನಷ್ಟಕ್ಕೆ 311ರನ್ ಗಳಿಸಿ 7 ವಿಕೆಟ್‌ಗಳ ಸುಲಭ ಗೆಲುವು ದಾಖಲಿಸಿದರು.



ಆರೋನ್ ಜಾರ್ಜ ಬ್ಯಾಟಿಂಗ್ ವೈಖರಿ.

ಅಫ್ಘಾನಿಸ್ತಾನ ಪರ ನೂರಿಸ್ತಾನಿ ಓಮರ್‌ಜೈ 2, ವಹೀದುಲ್ಲಾ ಜದ್ರಾನ್ ಒಂದು ವಿಕೆಟ್ ಪಡೆದರು. ಈ ಗೆಲುವಿನೊಂದಿಗೆ ಫೈನಲ್ಸ್‌ಗೆ ಲಗ್ಗೆಯಿಟ್ಟ ಭಾರತ ಅದರೊಂದಿಗೆ ದಾಖಲೆಯ 10ನೇ ಬಾರಿಗೆ ಫೈನಲ್ಸ್ ಪ್ರವೇಶಿಸಿದ ಹೆಗ್ಗಳಿಕೆ ಪಾತ್ರವಾಯಿತು. ಈವರೆಗೆ 5 ಬಾರಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದು, ಇದೇ ಫೆ.6 ರಂದು ಹರಾರೆ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ತಂಡದ ವಿರುದ್ಧ ಆಯೂಷ್ ಮ್ಹಾತ್ರೆ ತಂಡ ಪ್ರಶಸ್ತಿಗಾಗಿ ಕಾದಾಟ ನಡೆಸಲಿದೆ.

ಎರಡನೇ ಸೆಮಿಫೈನಲ್ಸ್‌ನಲ್ಲಿ ಶತಕ ದಾಖಲಿಸಿ ಟೀಂ ಇಂಡಿಯಾ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಆರೋನ್ ಜಾರ್ಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಚಿವ ಪಾಟೀಲ್ ನೇತೃತ್ವದಲ್ಲಿ ವೀರಶೈವ, ಲಿಂಗಾಯಿತ ಶಾಸಕರ ಸಭೆ

ಬೆಂಗಳೂರು: ಸಮುದಾಯದ ಹಿತಾಸಕ್ತಿ ರಕ್ಷಣೆಗೆ ಸೋಮವಾರ ರಾತ್ರಿ ಕಾಂಗ್ರೆಸ್ ಪಕ್ಷದ ವೀರಶೈವ/ಲಿಂಗಾಯತ ಶಾಸಕರ ಸಭೆ ನಡೆಸಿದ್ದು, ನಾಯಕತ್ವದ ವಿಚಾರವಾಗಲಿ, ವೈಯಕ್ತಿಕ ಅಜೆಂಡಾಗಳಾಗಲಿ ಇರಲಿಲ್ಲ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ಸಮುದಾಯಗಳ ಶಾಸಕರೂ ಆಗಿಂದಾಗ್ಗೆ ಸಭೆ ಸೇರುವುದು ಸರ್ವೇ ಸಾಮಾನ್ಯ, ವೀರಶೈವ/ಲಿಂಗಾಯಿತ ರಾಜ್ಯದ ಅತ್ಯಂತ ದೊಡ್ಡ ಸಮುದಾಯವಾಗಿದೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸಮುದಾಯದ 57 ಮಂದಿಗೆ ಟಿಕೆಟ್ ಕೊಟ್ಟಿತ್ತು. ಇದರಲ್ಲಿ 34 ಜನ ಗೆದ್ದಿದ್ದಾರೆ ಎಂದರು. ಸೋಮವಾರದ ಸಭೆಗೆ ಪಕ್ಷದ 28 ಶಾಸಕರು ಬಂದಿದ್ದರು. ಸಚಿವರ ಪೈಕಿ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಶರಣಬಸಪ್ಪ ದರ್ಶನಾಪುರ ಅನಿವಾರ್ಯ ಕಾರಣಗಳಿಂದ ಬಂದಿರಲಿಲ್ಲ, ಉಳಿದ ಎಲ್ಲ ಲಿಂಗಾಯಿತ ಸಚಿವರೂ ಬಂದಿದ್ದರು.

ನಮ್ಮ ಸಮುದಾಯಕ್ಕೆ ಸರ್ಕಾರದ ವಿವಿಧ ಹಂತಗಳಲ್ಲಿ ಸಿಗಬೇಕಾದ ನ್ಯಾಯಬದ್ಧ ಪ್ರಾತಿನಿಧ್ಯ, ಮುಂತಾದ ವಿಚಾರ ಕುರಿತು ಸಭೆಯಲ್ಲಿ ವಿಚಾರ ವಿನಿಮಯ ನಡೆಯಿತು. ನಮ್ಮ ಶಾಸಕರ ಸಂಖ್ಯೆ ಸಮುದಾಯ ಎಷ್ಟು ದೊಡ್ಡದು ಎನ್ನುವುದನ್ನು ತೋರಿಸುತ್ತದೆ.

ಅಪಾಯಕ್ಕೆ ಬಾಯ್ತೆರೆದ ಗುಂಡಿ; ವಾಹನ ಸವಾರರಿಗೆ ಸಂಕಷ್ಟ

ಮೈಸೂರು ಹೃದಯಭಾಗದಲ್ಲೇ ಅವ್ಯವಸ್ಥೆ



ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದಲ್ಲಿ ಇರ್ವಿನ್ ರಸ್ತೆಯವರೆಗೆ ಇರುವ ಹಳ್ಳವನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಫೆ.4(ಪಿಎಂ)– ರಸ್ತೆಬದಿ ಹಾಗೂ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಸ್ಥಳದಲ್ಲಿ ಗುಂಡಿಯೊಂದು ಅಪಾಯಕ್ಕೆ ಬಾಯ್ತೆರೆದಿದೆ. ಜೊತೆಗೆ ಅಲ್ಲಿರುವ ಸಿಮೆಂಟ್ ಬ್ಲಾಕ್‌ಗಳು, ಸೈಜುಗಲ್ಲುಗಳು ಮತ್ತಷ್ಟು ಅಪಾಯ ತಂದೊಡ್ಡುವಂತೆ ಕಾದು ಕುಳಿತಿವೆ.

ನಗರದ ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ವೃತ್ತದಲ್ಲಿ ಇಂತಹ ದುಸ್ಥಿತಿ ನಿರ್ಮಾಣವಾಗಿದೆ. ಸದರಿ ಕಾಲೇಜಿನ ಎದುರು ಫುಟ್‌ಪಾತ್‌ಗೆ ಹೊಂದಿ ಕೊಂಡಂತೆ ರಸ್ತೆಯಲ್ಲಿ ಯಾವುದೋ ಕೇಬಲ ಅಳವಡಿಕೆಗಾಗಿ ಗುಂಡಿ ತೆಗೆದಿದ್ದ ಪರಿಣಾಮ ಇಂತಹ ದುಸ್ಥಿತಿ ನಿರ್ಮಾಣ ವಾಗಿದೆ. ಕೇಬಲ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದೆಯೋ ಇಲ್ಲವೋ ಗೊತ್ತಿಲ್ಲ. ಅರ್ಧಕ್ಕೆ ತುಂಡಾಗಿರುವ ಭಾರೀ ಗಾತ್ರದ ಕೇಬಲ್, ಸಿಮೆಂಟ್ ಬ್ಲಾಕ್, ಸೈಜುಗಲ್ಲುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ವಾಹನ ಸವಾರರು ಹಾಗೂ ಪಾದಚಾರಿಗಳು ಇಲ್ಲಿ ಎಚ್ಚರಿಕೆಯಿಂದ ಸಾಗದಿದ್ದರೆ ಅನಾಹುತಕ್ಕೆ ಒಳಗಾಗಬೇಕಾಗುತ್ತದೆ.

ಗುಂಡಿ ತೆಗೆದ ಬಳಿಕ ಸಮರ್ಪಕವಾಗಿ ಮುಚ್ಚದ ಪರಿಣಾಮ ಉಂಟಾಗಿರುವ ಹಳ್ಳದಿಂದ ವಾಹನ ಸವಾರರು ಸರಾಗವಾಗಿ ಸಂಚರಿಸಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ವೃತ್ತ ದಾಟಿ ಇರ್ವಿನ್ ರಸ್ತೆಯಲ್ಲಿ ಕೆಟಿ ಸ್ಟ್ರೀಟ್‌ನತ್ತ ಸಂಚರಿಸುವ ಸವಾರರು ಜಾಗರೂಕತೆಯಿಂದ ಮುಂದೆ ಸಾಗಬೇಕಿದೆ. ಇಲ್ಲವಾದರೆ ಅಪಾಯ ತಪ್ಪಿದ್ದಲ್ಲ.

ಇಂತಹ ದುರವಸ್ಥೆ ನಗರದ ಹೃದಯ ಭಾಗದಲ್ಲೇ ಇರುವುದು ದುರ್ದೈವವೇ ಸರಿ. ಇದೊಂದು ಪ್ರಮುಖ ವೃತ್ತವಾಗಿದ್ದು, ಸಮೀಪದಲ್ಲೇ ಕೆಆರ್ ಆಸ್ಪತ್ರೆ ಸಹ ಇದೆ. ಪ್ರತಿದಿನ ಬೆಳಗ್ಗೆಯಿಂದ ಸಂಜೆಯವರೆಗೆ ಈ ವೃತ್ತದಲ್ಲಿ ವಾಹನ ಸಂಚಾರ ಹೆಚ್ಚಿನ ಸಂಖ್ಯೆಯಲ್ಲೇ ಇರುತ್ತದೆ. ಇಂತಹ ಜನನಿಬಿಡ ಸ್ಥಳದಲ್ಲಿ ತ್ವರಿತಗತಿಯಲ್ಲಿ ಕಾಮಗಾರಿ ಮುಗಿಸಿ ಶೀಘ್ರವಾಗಿ ಸುಸ್ಥಿತಿಗೊಳಿಸಬೇಕಿರುವುದು ಅತ್ಯವಶ್ಯ. ಆದರೂ ಸ್ಥಳೀಯ ಆಡಳಿತ ಹೀಗೆ ನಿರ್ಲಕ್ಷ್ಯ ವಹಿಸಿರುವ ಬಗ್ಗೆ ವಾಹನ ಸವಾರರು ಹಿಡಿಶಾಪ ಹಾಕುತ್ತಿದ್ದಾರೆ.

ಇಂದು ಜಿಲ್ಲಾ ಹಾಪ್‌ಕಾಮ್ಸ್ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ

ತಮ್ಮ ತಂಡ ಬೆಂಬಲಿಸಲು ಅಭ್ಯರ್ಥಿ ಹುಯಿಲಾಳು ರಾಮಸ್ವಾಮಿ ಮನವಿ

ಮೈಸೂರು,ಫೆ.4(ಪಿಎಂ)– ಮೈಸೂರು ಜಿಲ್ಲಾ ಹಾಪ್‌ಕಾಮ್ಸ್ (ಮೈಸೂರು ಜಿಲ್ಲಾ ತೋಟದ ಬೆಳಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ) ನಿರ್ದೇಶಕ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ತಮ್ಮ ತಂಡವನ್ನು ಬೆಂಬಲಿಸಬೇಕೆಂದು ಅಭ್ಯರ್ಥಿ ಹುಯಿಲಾಳು ರಾಮಸ್ವಾಮಿ (ಬಿ.ಎಸ್.ರಾಮಸ್ವಾಮಿ) ವಿನಂತಿಸಿದ್ದಾರೆ.



ಹುಯಿಲಾಳು ರಾಮಸ್ವಾಮಿ

ಮೈಸೂರಿನ ಕರ್ಜನ್ ಪಾರ್ಕ್ ಆವರಣದಲ್ಲಿರುವ ಸಂಘದ ಎಂ.ಹೆಚ್.ಮರೀಗೌಡ ಸಭಾಂಗಣದಲ್ಲಿ ಫೆ.5ರ ಗುರುವಾರ ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಚುನಾವಣೆ ನಡೆಯಲಿದೆ. ನಮ್ಮ ತಂಡದ ಪ್ರಣಾಳಿಕೆಯಂತೆ ರೈತರು ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗಲು ನಮ್ಮ ಶ್ರಮ ಇದೆ. ಅಲ್ಲದೆ, ಸದಸ್ಯರು ಮರಣ ಹೊಂದಿದ ನಂತರ ಅವರ ಕುಟುಂಬ ವರ್ಗಕ್ಕೆ ಪರಿಹಾರ ದೊರೆಯಬೇಕಿದೆ. ಆದರೆ ಈಗ ಪರಿಹಾರ ಯಾರಿಗೂ ಸಿಗುತ್ತಿಲ್ಲ. ಈ ಪರಿಹಾರ ಕೊಡಿಸಲು ಶ್ರಮಿಸುತ್ತೇವೆ.

ಇದರ ಜೊತೆಯಲ್ಲಿ ರೈತರು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ಉಚಿತ ಪ್ಲಾಸ್ಟಿಕ್ ಕ್ರೇಟ್‌ಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ ಹಾಗಾಗಿ ನಮ್ಮ ತಂಡದ ಕೃಷ್ಣ (ಮೈಸೂರು ತಾಲೂಕು ಸಾಮಾನ್ಯ ವಿಭಾಗ, ಕ್ರಮ ಸಂಖ್ಯೆ 3), ನೇತ್ರಾವತಿ (ಮೈಸೂರು ತಾಲೂಕು ಮಹಿಳಾ ಮೀಸಲು ವಿಭಾಗ), ರವಿ (ಕನಕ, ಮೈಸೂರು ತಾಲೂಕು ಹಿಂದುಳಿದ ವರ್ಗ ಪ್ರವರ್ಗ ಎ ವಿಭಾಗ), ಬಿ.ಎಸ್.ರಾಮಸ್ವಾಮಿ (ಮೈಸೂರು ತಾಲೂಕು ಪರಿಶಿಷ್ಟ ಜಾತಿ ಮೀಸಲು ವಿಭಾಗ), ಎಸ್.ಆರ್.ಶ್ರೀನಿವಾಸ (ಪಿರಿಯಾಪಟ್ಟಣ ತಾಲೂಕು ಸಾಮಾನ್ಯ ವಿಭಾಗ) ಹಾಗೂ ಎಂ.ವಿ. ಸಂಜಯ್ (ಕೆ.ಆರ್.ನಗರ ತಾಲೂಕು ಸಾಮಾನ್ಯ ವಿಭಾಗ) ಅವರನ್ನು ಬೆಂಬಲಿಸುವಂತೆ ಪ್ರಕಟಣೆಯಲ್ಲಿ ಕೋರಿದ್ದಾರೆ.

ಪಾಕಿಸ್ತಾನಕ್ಕೆ ನಿಷೇಧದ ಭೀತಿ ಬೆನ್ನಲ್ಲೆ ಐಸಿಸಿಗೆ ಬಾಂಬ್ ಬೆದರಿಕೆ

ಇಸ್ಲಾಮಾಬಾದ್: ಐಸಿಸಿ 2026 ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ತಾನು ಬಯಸಿದ ಗುರಿಯನ್ನು ಸಾಧಿಸುವಲ್ಲಿ ವಿಫಲವಾಗುವ ಸಾಧ್ಯತೆ ಇದೆ. ಇದರ ನಡುವೆ ಪಾಕಿಸ್ತಾನದ ನಿಜವಾದ ಬಣ್ಣ ಬಯಲಾಗುತ್ತಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ಪಾಕಿಸ್ತಾನ ಕ್ರಿಕೆಟ್ ಮಂಡಳಿಗೆ ತಲೆಬಾಗಲು ನಿರಾಕರಿಸಿದ್ದರಿಂದ ಆಕ್ರೋಶ ವ್ಯಕ್ತವಾಗಿತ್ತು.

ಇದರ ನಡುವೆ ಕೋಪಗೊಂಡ ಪಾಕಿಸ್ತಾನದ ಯೂಟ್ಯೂಬರ್ ಐಸಿಸಿ ಕಚೇರಿಗೆ ಬಾಂಬ್ ಹಾಕುವುದಾಗಿ ಬೆದರಿಕೆ ಹಾಕಿದ್ದಾನೆ. ಇದೀಗ ಹೊಸ ವಿವಾದವೊಂದು ಭುಗಿಲೆದ್ದಿದೆ. ಫೆ.15 ರಂದು ಭಾರತ ವಿರುದ್ಧದ ಪಂದ್ಯವನ್ನು ಪಾಕಿಸ್ತಾನ ಕ್ರಿಕೆಟ್ ತಂಡ ಬಹಿಷ್ಕರಿಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಐಸಿಸಿ ಎಚ್ಚರಿಸಿದ ನಂತರ ಈ ಬೆದರಿಕೆ ಬಂದಿದೆ.

ಸಚಿವ ತಿಮ್ಮಾಪುರ್ ರಾಜೀನಾಮೆಗೆ ಸಿಎಂ ಸಿದ್ದರಾಮಯ್ಯ ಮೀನಾಮೇಷ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ

ಬೆಂಗಳೂರು, ಫೆ.4(ಕೆಎಂಶಿ)– ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ರಾಜೀನಾಮೆ ಪಡೆದರೆ ದೊಡ್ಡ ದೊಡ್ಡ ತಲೆಗಳು ಉರುಳಲಿವೆ ಎಂಬ ಭಯದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಿಂದ ವಜಾ ಮಾಡುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಆರೋಪಿಸಿದ್ದಾರೆ.



ಬಿ.ವೈ.ವಿಜಯೇಂದ್ರ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೈಕಮಾಂಡ್‌ನ ಎಟಿಎಂ ಆಗಿ ಕರ್ನಾಟಕ ಕಾಂಗ್ರೆಸ್ ಪರಿವರ್ತನೆಯಾಗಿದೆ. ಸಚಿವರು ರಾಜೀನಾಮೆ ಕೊಡದಂತೆ ವರಿಷ್ಠರ ಒತ್ತಡವೂ ಇದೆ ಎಂದು ದೂರಿದರು.

ದೊಡ್ಡ ತಲೆಗಳನ್ನು ಉಳಿಸಿಕೊಳ್ಳಲು ತಿಮ್ಮಾಪುರ್ ಅವರನ್ನು ರಕ್ಷಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ, ಅಬಕಾರಿ ವಿಚಾರದಲ್ಲಿ ಮುಖ್ಯಮಂತ್ರಿಗಳು ಗಟ್ಟಿ ನಿರ್ಧಾರ ಕೈಗೊಳ್ಳಬೇಕೆಂಬುದು ಬಿಜೆಪಿ ಮತ್ತು ಜೆಡಿಎಸ್ ನಿಲುವಾಗಿದೆ.

ಅಬಕಾರಿ ಸಚಿವರ ರಾಜೀನಾಮೆ ಪಡೆದು ನಂತರ ಭ್ರಷ್ಟಾಚಾರ ಕುರಿತು ತನಿಖೆ ನಡೆಸಲಿ. ಸರ್ಕಾರ ಒಂದೆಡೆ ಗ್ಯಾರಂಟಿಗಳಿಗೆ ಹಣ ಕ್ರೋಢೀಕರಿಸಲು ಸಾಧ್ಯವಾಗದೇ ಅಬಕಾರಿ ಇಲಾಖೆ ಆದಾಯ ಟಾರ್ಗೆಟ್ ಹೆಚ್ಚಿಸಿ ಕರ್ನಾಟಕವನ್ನು ಕುಡುಕರ ರಾಜ್ಯವನ್ನಾಗಿ ಮಾಡುತ್ತಿದೆ. ಮನಸ್ಸೋ ಇಚ್ಛೆ ಲಿಕ್ಕರ್ ಲೈಸೆನ್ಸ್‌ಗಳನ್ನು ನೀಡುತ್ತಿದೆ.

ಸರ್ಕಾರದ ನೀತಿಯಿಂದಾಗಿ ರಾಜ್ಯದಲ್ಲಿ 500 ಮೀಟರ್‌ಗೆ ಒಂದು ಮದ್ಯದಂಗಡಿ ಇದೆ. ಎಲ್ಲಾ ಇಲಾಖೆಯಲ್ಲೂ ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದೆ. ಅಬಕಾರಿ ಇಲಾಖೆಯಲ್ಲಿ 6 ಸಾವಿರ ಕೋಟಿ ರೂ. ಹಗರಣ ಆಗಿದೆ ಎಂಬ ಆರೋಪ ಕೇಳಿಬರುತ್ತಿವೆ.

ಆಡಿಯೊ ಸಿಡಿಯಲ್ಲಿ ಅಬಕಾರಿ ಸಚಿವ ತಿಮ್ಮಾಪುರ, ಅವರ ಪುತ್ರ ಹಾಗೂ ಮುಖ್ಯಮಂತ್ರಿಗಳ ಕುರಿತು ಉಲ್ಲೇಖವಿದೆ. ಈ ಮೊದಲು ಯಾರ್ಯಾರು ರಾಜೀನಾಮೆ ನೀಡಿದ್ದಾರೆಂಬ ಕುರಿತು ಅಬಕಾರಿ ಸಚಿವರು ಉದ್ದುದ್ದ ಭಾಷಣ ಮಾಡಿದರು. ಸಚಿವರ ಭಂಡತನವನ್ನು ಸದನದಲ್ಲಿ ನೋಡಿದೆವು.

ಮಡಿಕೇರಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆ ಕೊಡಬೇಕಿತ್ತು. ಕಾಂಗ್ರೆಸ್ ಆಡಳಿತದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ನಡೆಯಿತು. ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು. ಅನಿವಾರ್ಯವಾಗಿ ಸಚಿವ ಬಿ.ನಾಗೇಂದ್ರ ರಾಜೀನಾಮೆ ಕೊಡುವ ಪರಿಸ್ಥಿತಿ ನಿರ್ಮಾಣವಾಯಿತು.

ಸದನದಲ್ಲಿ ಬಿಜೆಪಿ, ಜೆಡಿಎಸ್ ಅಹೋರಾತ್ರಿ ಧರಣಿ ಮಾಡಿದೆ, ಇಂದೂ ಹೋರಾಟ ಮುಂದುವರೆಯಲಿದೆ ಎಂದರು.

ಅಂತರರಾಜ್ಯ ಹೆದ್ದಾರಿಗಳಲ್ಲಿ ಚಿನ್ನ, ನಗದು ದರೋಡೆ, ಇನ್ನಿತರೆ ಅಪರಾಧ ಪ್ರಕರಣಗಳ ಹೆಚ್ಚಳ ಹಿನ್ನೆಲೆ

ಕೇರಳ, ತಮಿಳುನಾಡು ಗಡಿಯಲ್ಲಿ ರಾಜ್ಯ ಪೊಲೀಸರ ಕಟ್ಟೆಚ್ಚರ

● ವಾಹನಗಳ ತಪಾಸಣೆ ಮೂಲಕ ಕಣ್ಗಾವಲು ● ಚಾಮರಾಜನಗರ ಎಸ್‌ಪಿ ಮುತ್ತುರಾಜ್ ಮೇಲುಸ್ತುವಾರಿ

ಮೈಸೂರು, ಫೆ.4(ಎಂಟಿವೈ)–ರಾಜ್ಯದ ಗಡಿಭಾಗದಲ್ಲಿ ದರೋಡೆ ಸೇರಿದಂತೆ ಅಪರಾಧ ಪ್ರಕರಣಗಳ ತಡೆಗೆ ಚಾಮರಾಜನಗರ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಕೇರಳ, ತಮಿಳುನಾಡು ಗಡಿ ಚೆಕ್‌ಪೋಸ್ಟ್‌ನಲ್ಲಿ ರಾಜ್ಯ ಪ್ರವೇಶಿಸುವ ವಾಹನಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.

ಗುಂಡ್ಲುಪೇಟೆ ತಾಲೂಕು ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766(212)ಯಲ್ಲಿ ಎರಡು ತಿಂಗಳ ಹಿಂದೆ ಚಿನ್ನದ ವ್ಯಾಪಾರಿಯೊಬ್ಬರನ್ನು ಅಡ್ಡಗಟ್ಟಿ ಲೂಟಿ ಮಾಡಿದ ಪ್ರಕರಣದ ಹಿನ್ನೆಲೆಯಲ್ಲಿ ಇದೀಗ ಗಡಿ ಭಾಗದಲ್ಲಿ ತೀವ್ರ ತಪಾಸಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಚಾಮರಾಜನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್ ಅಧಿಕಾರ ವಹಿಸಿಕೊಂಡ ಬಳಿಕ ಅಂತರರಾಜ್ಯ ಗಡಿಭಾಗದ ಚೆಕ್‌ಪೋಸ್ಟ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ತಮ್ಮ ಸಿಬ್ಬಂದಿಯಿಂದ ವಾಹನ ತಪಾಸಣೆಯನ್ನು ಪರಿಶೀಲಿಸಿದ್ದಾರೆ. ಅಲ್ಲದೆ, ಕರ್ನಾಟಕದ ಗಡಿ ಪ್ರವೇಶಿಸುವ ಎಲ್ಲಾ ವಾಹನಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ಮಾಡುವಂತೆ ಸೂಚನೆ ನೀಡಿದ್ದಾರೆ.

ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 67 (ಊಟಿ)ರ ತಮಿಳುನಾಡು ಗಡಿಭಾಗದಲ್ಲಿರುವ ಕೆಕ್ಕನಹಳ್ಳ ಚೆಕ್‌ಪೋಸ್ಟ್‌ಗೆ ಎಸ್ಪಿ ಎಂ. ಮುತ್ತುರಾಜ್ ಅವರು ಮಂಗಳವಾರ(ಫೆ.3) ಸಂಜೆ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಚೆಕ್‌ಪೋಸ್ಟ್ ಸಿಬ್ಬಂದಿ, ಅರಣ್ಯ ಸಿಬ್ಬಂದಿಗೆ ರಾಜ್ಯ ಪ್ರವೇಶಿಸುವ ವಾಹನಗಳ ತಪಾಸಣೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಕಳೆದ ವಾರವಷ್ಟೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 766(ವೈಯನಾಡು)ರ ಮೂಲೆಹೊಳೆ ಚೆಕ್‌ಪೋಸ್ಟ್‌ಗೂ ಭೇಟಿ ನೀಡಿ ಪರಿಶೀಲಿಸಿದ್ದರು. ಅಲ್ಲದೆ, ಚಾಮರಾಜನಗರದಿಂದ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಪುಣಜನೂರು ಚೆಕ್‌ಪೋಸ್ಟ್, ಗರಿಕೆಹುಂಡಿ ಚೆಕ್‌ಪೋಸ್ಟ್‌ಗೂ ಭೇಟಿ ನೀಡಿ ಪರಿಶೀಲನೆ ನಡೆಸಿ, ಕಟ್ಟುನಿಟ್ಟಿನ ತಪಾಸಣೆ ಕೈಗೊಂಡು ಅಕ್ರಮ ಸಾಗಾಣಿಕೆ, ಇನ್ನಿತರೆ ಅಪರಾಧ ತಡೆಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದರು.

ಹೆಚ್ಚುವರಿ ಚೆಕ್‌ಪೋಸ್ಟ್: ಮೈಸೂರು, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ಕೇರಳಕ್ಕೆ ಸಂಚರಿಸುವ ಬಹುತೇಕ ವಾಹನಗಳು ರಾಷ್ಟ್ರೀಯ ಹೆದ್ದಾರಿ 766 ಮೂಲಕವೇ ಸಾಗಲಿದ್ದು, ಈ ಹೆದ್ದಾರಿಯಲ್ಲಿ ರಾಬರಿ, ದರೋಡೆ, ಅಪಹರಣ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳು ವರದಿಯಾಗಿವೆ. ಈ ಹಿನ್ನೆಲೆಯಲ್ಲಿ ಕೇರಳ, ತಮಿಳುನಾಡು(ಊಟಿ) ಕಡೆಯಿಂದ ಬರುವ ವಾಹನಗಳ ಮೇಲೆ ಹದ್ದಿನ ಕಣ್ಣಿಟ್ಟು ತಪಾಸಣೆ ಮಾಡಲು ಗಡಿ ಭಾಗದಲ್ಲಿಯೇ ಚೆಕ್‌ಪೋಸ್ಟ್ ಈ ಹಿಂದಿನಿಂದಲೂ ಕಾರ್ಯನಿರ್ವಹಿಸುತ್ತಿವೆ. ಕಣ್ತಪ್ಪಿನಿಂದ ಯಾವುದಾದರೂ ವಾಹನ ತಪಾಸಣೆಯಿಂದ ತಪ್ಪಿಸಿಕೊಂಡು ರಾಜ್ಯ ಪ್ರವೇಶಿಸಿದರೆ, ಅಂತಹ ವಾಹನಗಳ ತಪಾಸಣೆಗಾಗಿ ಇದೀಗ ಗುಂಡ್ಲುಪೇಟೆ–ಬೇಗೂರು ನಡುವೆ ಕನ್ನೇಗಾಲದ ಬಳಿ ಹೊಸದಾಗಿ ಚೆಕ್‌ಪೋಸ್ಟ್‌ವೊಂದನ್ನು ಸ್ಥಾಪಿಸಲಾಗಿದ್ದು, ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ಮಾಡುವ ಕಾರ್ಯ ಆರಂಭಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ 67 ಹಾಗೂ 766 ಮೂಲಕ ಬರುವ ವಾಹನಗಳು ಕನ್ನೇಗಾಲ ಚೆಕ್‌ಪೋಸ್ಟ್ ಮೂಲಕವೇ ಹಾದು ಹೋಗಬೇಕಾಗಿರುವುದರಿಂದ ಹೊಸ ಚೆಕ್‌ಪೋಸ್ಟ್ ಮಹತ್ವ ಪಡೆದುಕೊಂಡಿದೆ.




ಬಂಡೀಪುರ ಅಭಯಾರಣ್ಯದ ತಮಿಳುನಾಡು ಗಡಿಯ ಕೆಕ್ಕನಹಳ್ಳ(ಊಟಿ ರಸ್ತೆ) ಚೆಕ್‌ಪೋಸ್ಟ್‌ಗೆ ಚಾಮರಾಜನಗರ ಎಸ್ಪಿ ಎಂ.ಮುತ್ತುರಾಜ್ ಭೇಟಿ ನೀಡಿ ಪರಿಶೀಲಿಸಿದರು.

ಗಡಿಭಾಗದಲ್ಲಿ ಹೆಚ್ಚಿನ ನಿಗಾ

ಕೇರಳ, ತಮಿಳುನಾಡಿನಿಂದ ರಾಜ್ಯಕ್ಕೆ ಬರುವ ವಾಹನಗಳನ್ನು ಕಟ್ಟುನಿಟ್ಟಾಗಿ ತಪಾಸಣೆ ನಡೆಸುವ ನಿಟ್ಟಿನಲ್ಲಿ ಈಗಾಗಲೇ ಬಂಡೀಪುರದ ಕೆಕ್ಕನಹಳ್ಳ, ಮೂಲೆಹೊಳೆ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಅಲ್ಲದೆ, ಚಾಮರಾಜನಗರ ಜಿಲ್ಲೆ ಪುಣಜನೂರು, ಗರಿಕೆಹುಂಡಿ ಚೆಕ್‌ಪೋಸ್ಟ್‌ಗೂ ಈಗಾಗಲೇ ಭೇಟಿ ನೀಡಿ ಪರಿಶೀಲನೆ ಮಾಡಲಾಗಿದೆ. ಅನಿರೀಕ್ಷಿತವಾಗಿ ಭೇಟಿ ನೀಡಿ, ಚೆಕ್‌ಪೋಸ್ಟ್ ಸಿಬ್ಬಂದಿಯ ಕಾರ್ಯವೈಖರಿಯನ್ನು ಗಮನಿಸಲಾಗುತ್ತಿದೆ. ಗಡಿಯಲ್ಲಿ ಯಾವುದೇ ಅಕ್ರಮ, ಅಪರಾಧ ನಡೆಯದಂತೆ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ. ಗುಂಡ್ಲುಪೇಟೆ ರಸ್ತೆಯ ಕನ್ನೇಗಾಲದ ಬಳಿ ಹೊಸದಾಗಿ ಚೆಕ್‌ಪೋಸ್ಟ್‌ವೊಂದನ್ನು ಸ್ಥಾಪಿಸಿ ತಪಾಸಣಾ ಕಾರ್ಯ ಆರಂಭಿಸಲಾಗಿದೆ. ಈ ಹಿಂದೆ ಹೆದ್ದಾರಿಯಲ್ಲಿ ದರೋಡೆ ಪ್ರಕರಣಗಳು ವರದಿಯಾಗಿದ್ದರಿಂದ ಕಟ್ಟುನಿಟ್ಟಾಗಿ ತಪಾಸಣೆ ಮಾಡಿ, ಅನುಮಾನಾಸ್ಪದ ವಾಹನಗಳನ್ನು ಕೂಲಂಕುಶವಾಗಿ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗಿದೆ.

– ಎಂ.ಮುತ್ತುರಾಜ್, ಎಸ್ಪಿ, ಚಾಮರಾಜನಗರ ಜಿಲ್ಲೆ

ನಾಳೆಯಿಂದ ರಾಜ್ಯಮಟ್ಟದ ಹೊನಲು ಬೆಳಕಿನ ಪುರುಷರ, ಮಹಿಳೆಯರ ಕುಸ್ತಿ ಪಂದ್ಯಾವಳಿ



ಮೈಸೂರು,ಫೆ.4(ಜಿಎ)–ಕರ್ನಾಟಕ ಕುಸ್ತಿ ಸಂಘ ಹಾಗೂ ಜಿಲ್ಲಾ ಸಂಘಗಳ ವತಿಯಿಂದ ಫೆ.6ರಿಂದ 8ರವರೆಗೆ ನಂಜನಗೂಡಿನ ಊಟಿ ರಸ್ತೆಯ ಜೂನಿಯರ್ ಕಾಲೇಜು ಮೈದಾನದಲ್ಲಿ ರಾಜ್ಯ ಮಟ್ಟದ ಹೊನಲು ಬೆಳಕಿನ ಪುರುಷರ ಮತ್ತು ಮಹಿಳೆಯರ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಘಟನಾ ಅಧ್ಯಕ್ಷ ವೈ.ಪ್ರಸನ್ನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಸುನೀಲ್ ಬೋಸ್ ಹಾಗೂ ಶಾಸಕ ದರ್ಶನ್ ಧ್ರುವನಾರಾಯಣ್ ಪಂದ್ಯಾವಳಿಯ ಸಾರಥ್ಯ ವಹಿಸಲಿದ್ದಾರೆ. ಅಧಿಕೃತ ವಾಗಿ ಫೆ.7ರಂದು ಬೆಳಗ್ಗೆ 11 ಗಂಟೆಗೆ ಜ್ಞಾನ ಪ್ರಕಾಶ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್‌ಬೋಸ್, ಶಾಸಕ ದರ್ಶನ್ ಧ್ರುವನಾರಾಯಣ್, ಎಂಎಲ್‌ಸಿ ಡಾ. ಯತೀಂದ್ರ ಚಾಲನೆ ನೀಡಲಿದ್ದಾರೆ ಎಂದರು.

ಸಮಾರೋಪ ಸಮಾರಂಭ ಫೆ.8ರಂದು ಸಂಜೆ 4 ಗಂಟೆಗೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಂಸದ ಸುನೀಲ್ ಬೋಸ್, ದರ್ಶನ್ ಧ್ರುವನಾರಾಯಣ್ ಇನ್ನಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಪಂದ್ಯಾವಳಿಯಲ್ಲಿ ರಾಜ್ಯದ ಎಲ್ಲೆಡೆಯಿಂದ ಸಾವಿರಾರೂ ಕುಸ್ತಿಪಟುಗಳು ಆಗಮಿಸಲಿದ್ದಾರೆ. ಇಲ್ಲಿ ವಿಜೇತರಾದವರು ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಗೆ ನೇರವಾಗಿ ಆಯ್ಕೆಯಾಗಲಿದ್ದಾರೆ. ವಿಜೇತರೆಲ್ಲರಿಗೂ ಗದೆ ಹಾಗೂ ನಗದು ಬಹುಮಾನ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಮಹದೇವ ಮೂರ್ತಿ, ಗಿರೀಶ್ ತೊರೆಮಾವು, ಡಾ.ಕೆ.ವಿನೋದ್‌ಕುಮಾರ್, ರ‍್ಯಾಂಬೋ ಕಿರಣ್, ಶ್ರೀಕಂಠಪ್ರಸಾದ್ ಉಪಸ್ಥಿತರಿದ್ದರು.

ಪೂರ್ವ ತಯಾರಿ ಇಲ್ಲದೆ ಪರಿಚಯಿಸುವ ಹೊಸ ಶಿಕ್ಷಣ ನೀತಿಯಿಂದ ಅಪಾಯ ಸಾಧ್ಯತೆ

ರಾಜ್ಯ ಶಿಕ್ಷಣ ನೀತಿ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಎಚ್ಚರಿಕೆ

ಮೈಸೂರು, ಫೆ.4(ಬಿಎಲ್‌ಯು)– ಪರಿವರ್ತನೆಯ ಮಾರ್ಗಸೂಚಿ ಹಾಗೂ ಪೂರ್ವ ತಯಾರಿ ಇಲ್ಲದೆ ಪರಿಚಯಿಸುವ ಹೊಸ ಶಿಕ್ಷಣ ನೀತಿಯು ಪರಿವರ್ತಕವಾಗುವ ಬದಲು ಅಪಾಯವನ್ನು ತಂದೊಡ್ಡುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಎಚ್ಚರಿಸಿದರು.

ಮೈಸೂರಿನ ಕುವೆಂಪುನಗರದ ಬಾಸುದೇವ ಸೋಮಾನಿ ಕಾಲೇಜು ಸಭಾಂಗಣದಲ್ಲಿ ಇಂದು ಕಾಲೇಜಿನ ಅರ್ಥಶಾಸ್ತ್ರ ವಿಭಾಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಶಿಕ್ಷಕರ ಸಂಘ ಜಂಟಿಯಾಗಿ ಆಯೋಜಿಸಿದ್ದ ರಾಜ್ಯ ಶಿಕ್ಷಣ ನೀತಿ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ತಯಾರಿ ಮಾಡಿಕೊಳ್ಳದೆ ರೂಪಿಸುವ ರಚನಾತ್ಮಕ ಬದಲಾವಣೆಯು ಶಾಲೆಗಳನ್ನು ಸಬಲೀಕರಣಗೊಳಿಸುವ ಬದಲು ಮುಳುಗಿಸಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಎನ್‌ಇಪಿಗೆ ಬದಲಾಗಿ, ಎಸ್‌ಇಪಿ ಪರಿಚಯಿಸುವುದರಿಂದ ಒಕ್ಕೂಟ ವ್ಯವಸ್ಥೆಯ ಬಹುತ್ವವನ್ನು ಬಲಪಡಿಸುತ್ತದೆ, ಜೊತೆಗೆ ಕರ್ನಾಟಕದ ವ್ಯವಸ್ಥೆಯನ್ನು ಪ್ರತ್ಯೇಕಿಸುವ ಅಪಾಯ ಕೂಡ ಎದುರಾಗಲಿದೆ. ಈ ಮೂಲಕ ಬಹಳ ಎಚ್ಚರಿಕೆಯಿಂದ ಸಮನ್ವಯ ಕಾರ್ಯವಿಧಾನದಿಂದ ಇದನ್ನು ಪರಿಚಯಿಸಬೇಕು ಎಂದು ಕುಲಪತಿ ಪ್ರೊ.ಲೋಕನಾಥ್ ಸಲಹೆ ನೀಡಿದರು.

ಹೊಸ ಶಿಕ್ಷಣ ನೀತಿ ಪರಿಚಯಿಸಿದ ಸಂದರ್ಭದಲ್ಲಿ ಪಠ್ಯಕ್ರಮದ ಪುನರ್ವಿನ್ಯಾಸ, ಶಿಕ್ಷಕರ ಮರು ನಿಯೋಜನೆ, ಮೌಲ್ಯಮಾಪನ ಮರು ಜೋಡಣೆ ಹಾಗೂ ರಚನಾತ್ಮಕವಾಗಿ ಪುನರ್ ರಚನೆ ಮಾಡಲು ಸಮಯ ತೆಗೆದುಕೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.


ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯು ಈಗಾಗಲೇ ಶಿಕ್ಷಕರ ಕೊರತೆ, ಮೂಲಭೂತ ಸೌಕರ್ಯ ಇಲ್ಲದ ವಾತಾವರಣ ಸೇರಿದಂತೆ ಹಲವು ಸಮಸ್ಯೆಯಿಂದ ಬಳಲುತ್ತಿದೆ. ಇಂತಹ ಸಮಯದಲ್ಲಿ ಹೊಸ ಶಿಕ್ಷಣ ನೀತಿ ಪರಿಚಯಿಸಿದಾಗ ಪರಿವರ್ತನೆ ಬದಲು ಅಪಾಯ ತಂದಿಡಬಹುದು ಎಂದು ಅವರು ಪುನರುಚ್ಚರಿಸಿದರು.

ಈ ಮಧ್ಯೆ ಶಿಕ್ಷಣದ ಹಕ್ಕನ್ನು (ಆರ್‌ಟಿಇ) 4 ವರ್ಷದಿಂದ 18 ವರ್ಷಕ್ಕೆ ವಿಸ್ತರಣೆ ಮಾಡುವ ಸರ್ಕಾರದ ನೀತಿಯ ಪ್ರಸ್ತಾವ ಅತ್ಯಂತ ಪ್ರಗತಿಪರವಾಗಿದ್ದು, ಇದು ಶೈಕ್ಷಣಿಕ ಬೆಳವಣಿಗೆಗೆ ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು. ಬಾಸುದೇವ ಸೋಮಾನಿ ಕಾಲೇಜು ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿ ಜಂಟಿ ನಿರ್ದೇಶಕಿ ಡಾ.ಡಿ.ಎಸ್. ಪ್ರತಿಭಾ, ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಪ್ರಾಧ್ಯಾಪಕರಾದ ಲಲಿತಾ ತಿಮ್ಮಯ್ಯ, ಡಾ.ರಮೇಶ್ ಹಾಗೂ ಡಾ.ಮಹೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ಬಾಸುದೇವ ಸೋಮಾನಿ ಕಾಲೇಜು ಸಭಾಂಗಣದಲ್ಲಿ ಕಾಲೇಜಿನ ಅರ್ಥಶಾಸ್ತ್ರ ವಿಭಾಗ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಶಿಕ್ಷಕರ ಸಂಘ ಜಂಟಿಯಾಗಿ ಆಯೋಜಿಸಿದ್ದ ರಾಜ್ಯ ಶಿಕ್ಷಣ ನೀತಿ ಕುರಿತ ಕಾರ್ಯಾಗಾರವನ್ನು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಫೆ.4– ಡಿ.ಎಂ.ಜಿ ಹಳ್ಳಿ ವಿದ್ಯುತ್ ವಿತರಣಾ ವ್ಯಾಪ್ತಿಯಲ್ಲಿ ಲಿಂಕ್ ಲೈನ್ ಕಾಮಗಾರಿ ನಿಮಿತ್ತ ಫೆ.5 ಮತ್ತು 6ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಡಿ.ಎಂ.ಜಿ ಹಳ್ಳಿ, ಮರಿಯಯ್ಯನಹುಂಡಿ, ಕೋಟೆಹುಂಡಿ, ಮಾಣಿಕ್ಯಪುರ, ಕಮರಹಳ್ಳಿ, ಸಿಗ್ಗಳ್ಳಿ, ನಾಗವಾಲ, ಬೊಮ್ಮೇನಹಳ್ಳಿ, ಹುಯಿಲಾಳು, ಶೆಟ್ಟಿನಾಯಕನಹಳ್ಳಿ, ನುಗ್ಗಳ್ಳಿ, ಮಾದಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಫೆ4–ಮೈಸೂರಿನ ಎನ್‌ಜಿಎಸ್ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಫೆ. 10 ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಏರ್ಪಡಿಸಲಾಗಿದೆ. ಶಿಬಿರಕ್ಕೆ ಬರುವವರು ತಮ್ಮ ಆಧಾರ್ ಕಾರ್ಡ್, ರೇಷನ್ ಕಾರ್ಡ್ ತರುವಂತೆ ಶಿಬಿರದ ಆಯೋಜಕರಾದ ಬಸವರಾಜ್, ಜೈಪ್ರಕಾಶ್ ಕೋರಿದ್ದಾರೆ.

ಮೈಸೂರು ಪತ್ರಿಕಾ ಛಾಯಾಗ್ರಾಹಕರ ಸಂಘದಿಂದ ಅಭಿನಂದನೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರೂ ಆದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಹಾಗೂ ಮೈಸೂರು ವಾಣಿಜ್ಯ ಮಂಡಳಿ ಅಧ್ಯಕ್ಷ ಕೆ.ಬಿ.ಲಿಂಗರಾಜು ಅವರನ್ನು ಮೈಸೂರು ಪತ್ರಿಕಾ ಛಾಯಾಗ್ರಹಕ ಸಂಘದಿಂದ ಅಭಿನಂದಿಸಲಾಯಿತು. ಸಂಘದ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಉಪಾಧ್ಯಕ್ಷ ಕೆ.ಎಚ್.ಚಂದ್ರು, ಪ್ರಧಾನ ಕಾರ್ಯದರ್ಶಿ ಲಕ್ಷ್ಮೀನಾರಾಯಣ ಯಾದವ್, ಖಜಾಂಚಿ ಉದಯ್‌ಶಂಕರ್, ಛಾಯಾಗ್ರಹಕರಾದ ಅನುರಾಗ ಬಸವರಾಜ್, ಮಧುಸೂದನ್, ಹಂಪಾ ನಾಗರಾಜ್, ನಂದನ್, ಯೋಗ ನರಸಿಂಹಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

ಫೆ.7, ರಂಗಾಂತರಂಗ ಮಕ್ಕಳ ನಾಟಕೋತ್ಸವ

ಮೈಸೂರು,ಫೆ.4(ಜಿಎ)–ರಂಗಾಂತರಂಗ ತಂಡದಿಂದ ಫೆ.7ರಂದು ಸಂಜೆ 5.30ಕ್ಕೆ ರಂಗಾಯಣದ ಕಿರುರಂಗ ಮಂದಿರದಲ್ಲಿ ರಂಗಾಂತರಂಗ ಮಕ್ಕಳ ನಾಟಕೋತ್ಸವ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ವಿಷಯ ತಿಳಿಸಿ, ಹಿರಿಯ ರಂಗಕರ್ಮಿ ಮೈಮ್ ರಮೇಶ್ ನಾಟಕೋತ್ಸವ ಉದ್ಘಾಟಿಸುವರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಎಂ.ಆರ್. ಸತ್ಯನಾರಾಯಣ, ಡಾ.ಎಂ.ಎಸ್.ಅನಿತಾ, ಡಾ.ಸಿ.ಇ.ಸುಬ್ರಹ್ಮಣ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಸಂಸ್ಥಾಪಕ ಕೆ.ಎಂ.ಕೀರ್ತಿರಾಜ್ ಮಾತನಾಡಿ, ತಮ್ಮ ಸಂಸ್ಥೆಯೇ ತರಬೇತಿ ನೀಡಿದ ಮಕ್ಕಳು ಪ್ರದರ್ಶನ ನೀಡಲಿದ್ದಾರೆ. ಫೆ.7ರಂದು ಸಂಜೆ 6 ಗಂಟೆಗೆ 'ಹುಲಿ ಬೇಟೆಯ ಹಿಂದೆ ಮುಂದೆ', ಫೆ.8ರಂದು ಮಧ್ಯಾಹ್ನ 2.30ಕ್ಕೆ 'ತಿಕ್ಕಲು ರಾಜ ತಿರುಬೋಕಿ ರಾಜ್ಯ', ಫೆ.8ರಂದು ಸಂಜೆ 5.30ಕ್ಕೆ 'ಮುಟ್ಟಿಸಿಕೊಂಡವರು' ನಾಟಕ ಪ್ರದರ್ಶನವಿದೆ. ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೆಂಕಟೇಶ್, ಭವ್ಯ ಉಪಸ್ಥಿತರಿದ್ದರು.

ಬೀಳ್ಕೊಡುಗೆ...



ನಿವೃತ್ತರಾದ ಕೃಷ್ಣರಾಜೇಂದ್ರ ಕೋ–ಆಪರೇಟಿವ್ ಬ್ಯಾಂಕಿನ ಮ್ಯಾನೇಜರ್ ಅನಂತು ಅವರಿಗೆ ಬೀಳ್ಕೊಡುಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾಬೀದಿ ರವಿ, ಗೋಪಿ, ಸಾಯಿ ಚಾಮರಾಜು, ಮಾದಪ್ಪ ಚೆಲುವರಾಯಸ್ವಾಮಿ, ಕೆ.ಆರ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

ಪಿ.ಎಚ್.ಡಿ ಪದವಿ



ಮೈಸೂರು,ಫೆ.4–ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಧ್ಯಾಪಕರಾದ ಡಾ.ಪ್ರಶಾಂತ್ ಎಂ ವಿಶ್ವನಾಥ್ ಹಾಗೂ ಡಾ.ಪಡುಕುದ್ರು ಆನಂದ್ ಮಹೇಶ್ ಮಾರ್ಗದರ್ಶನದಲ್ಲಿ ಮೊಹಮ್ಮದ್ ಕಲೀಮ್ ಉಲ್ಲಾ ಅವರು ಜೀವವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ.ಸಿ.ಎನ್.ಅಶ್ವಥ್ ನಾರಾಯಣ್‌ರಿಗೆ ಹುಟ್ಟುಹಬ್ಬದ ಶುಭಾಶಯ...



ಮಾಜಿ ಉಪಮುಖ್ಯಮಂತ್ರಿ, ಮಲ್ಲೇಶ್ವರಂ ಕ್ಷೇತ್ರದ ಶಾಸಕರೂ ಆದ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರನ್ನು ಬೆಂಗಳೂರಿನ ಅವರ ಕಚೇರಿಯಲ್ಲಿ ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಅವರ ಹಿರಿಯ ಸಹೋದರ ಸಿಎನ್.ಸತೀಶ್, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಎ.ರವಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಯೋಗಾನಂದ, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ, ವಕೀಲ ಹೇಮಂತ್ ಅಪ್ಪಾಜಿಗೌಡ, ಮುಖಂಡರಾದ ಬೆಳವಾಡಿ ಶ್ರೀನಿವಾಸ್, ಉದ್ಯಮಿ ವೇದರಾಜ್, ಜಡಿ ಮನು ಶಿವರಾಂ, ನಿಶಾಂತ್, ವಸಂತ್ ಚೌಹಾನ್, ದರ್ಶನ್, ನಿಖಿಲ್ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ನಿವೇಶನಕ್ಕೆ ಅರ್ಜಿ ಆಹ್ವಾನ

ಮೈಸೂರು, ಫೆ.4–ಕರ್ನಾಟಕ ರಾಜ್ಯ ಸರ್ಕಾರವು ಮಾಜಿ ಸೈನಿಕರು ಮತ್ತು ಅಧಿಕಾರಿಗಳಿಗೆ ನೀಡುವ ಉಚಿತ ನಿವೇಶನಕ್ಕೆ ಮೈಸೂರು ಜಿಲ್ಲಾ ಕಾಂಗ್ರೆಸ್ ಎಕ್ಸ್ ಸರ್ವೀಸ್ ಮ್ಯಾನ್ ವಿಭಾಗ ಅರ್ಜಿ ಆಹ್ವಾನಿಸಿದೆ. ಉಚಿತ ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಮೈಸೂರಿನ ಮಾಜಿ ಸೈನಿಕರು, ತಮ್ಮ ಆಧಾರ್ ಕಾರ್ಡ್, ಮಾಜಿ ಸೈನಿಕರ ಗುರುತಿನ ಚೀಟಿ, ವೋಟರ್ ಐಡಿ, ಪಾಸ್ ಪೋರ್ಟ್ ಅಳತೆಯ ಪೋಟೋಗಳ ನಾಲ್ಕು ಪ್ರತಿಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಫೆ.10 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊ. ಸಂಖ್ಯೆ : 7406670097 ಅನ್ನು ಸಂಪರ್ಕಿಸಬಹುದು.

ಇಂಟರ್ ನ್ಯಾಷನಲ್ ಸ್ಪೋರ್ಟ್ ಡ್ಯಾನ್ಸ್ ಚಾಂಪಿಯನ್‌ಶಿಪ್‌ಗೆ ಯುಎಸ್‌ಎ ಡ್ಯಾನ್ಸ್ ತಂಡ ಆಯ್ಕೆ



ಇಂಟರ್‌ನ್ಯಾಷನಲ್ ಸ್ಪೋರ್ಟ್ ಡ್ಯಾನ್ಸ್ ಚಾಂಪಿಯನ್‌ಶಿಪ್‌ಗೆ ಯುಎಸ್‌ಎ ತಂಡ ಆಯ್ಕೆ.

ಮೈಸೂರು, ಫೆ.4–ಮಲೇಶಿಯಾದಲ್ಲಿ ನಡೆಯಲಿರುವ ಇಂಟರ್ ನ್ಯಾಷನಲ್ ಸ್ಪೋರ್ಟ್ ಡ್ಯಾನ್ಸ್ ಚಾಂಪಿಯನ್ ಶಿಪ್ 2026ಕ್ಕೆ ಮೈಸೂರಿನ ಹೆಬ್ಬಾಳಿನ ಯುಎಸ್‌ಎ ಡ್ಯಾನ್ಸ್ ಮತ್ತು ಈವೆಂಟ್ಸ್ ಸ್ಟುಡಿಯೋ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಇಂಟರ್ ನ್ಯಾಷನಲ್ ಸ್ಪೋರ್ಟ್ ಡ್ಯಾನ್ಸ್ ಚಾಂಪಿಯನ್‌ಶಿಪ್ 2026ರಲ್ಲಿ ಯುಎಸ್‌ಎ ಡ್ಯಾನ್ಸ್ ಸ್ಟುಡಿಯೊ ಮಾಸ್ಟರ್‌ನ ಆದರ್ಶ, ಸಿಮ್ರನ್ ನೇತೃತ್ವದ 23 ಸ್ಪರ್ಧಿಗಳಾದ ಸಾರಾ, ವೇದ, ನಿಹಾ, ಲಾಸ್ಯ, ಮನ್ವಿತ್, ಧನ್ವೀರ್, ದೀಹಿತಾ, ದಿಯಾ, ರಚಿತಾ, ಬಿಂದಿಯಾ, ಅನ್ವಿಕಾ, ತೃಪ್ತಿ ವಿಹಾ, ಇಂಪಾ, ತನ್ವಿಕ್, ಅನ್ವಿತಾ, ವಿಹಾನ್, ಜಾನಕಿ, ಸಂತೋಷ್, ಮಧು ಸೂದನ್, ರಾಜೇಶ್ವರಿ, ರಕ್ಷಿತಾ, ದಿವ್ಯಾ ಭಾಗವಹಿಸಲಿದ್ದಾರೆ.

ಫೆ.7ರಿಂದ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ



ಮೈಸೂರು,ಫೆ4–ಮೈಸೂರಿನ ಡಾ.ಬಿ.ಆರ್. ಅಂಬೇಡ್ಕರ್ ಫುಟ್‌ಬಾಲ್ ಕ್ಲಬ್ (ಎಎಫ್‌ಸಿ) ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತಿ ಹಾಗೂ ಮಾಜಿ ಸಂಸದ ದಿ. ಧ್ರುವ ನಾರಾಯಣ್ ಅವರ ಸ್ಮರಣಾರ್ಥ ಫೆ. 7 ಹಾಗೂ 8ರಂದು ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ಮೊದಲ ತಂಡಕ್ಕೆ, ಮೊದಲ ಬಹುಮಾನವಾಗಿ 60 ಸಾವಿರ ನಗದು ಮತ್ತು ಟ್ರೋಫಿ ಹಾಗೂ 2ನೇ ಬಹುಮಾನ ಪಡೆದ ತಂಡಕ್ಕೆ 30 ಸಾವಿರ ನಗದು ಮತ್ತು ಟ್ರೋಫಿ ನೀಡಲಾಗುತ್ತದೆ. ಪಂದ್ಯಾವಳಿಯು ಮೈಸೂರಿನ ಗಾಂಧಿನಗರದ ಸಿದ್ದಾರ್ಥ ಪ್ರೌಢಶಾಲೆ ಮೈದಾನದಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 906664409 ಮೂಲಕ ಸಂಪರ್ಕಿಸಬಹುದು.

ಕ್ಯಾನ್ಸರ್‌ಪೀಡಿತರಿಗೆ ಒಡಿಪಿ ಸಂಸ್ಥೆಯಿಂದ ಸಹಾಯಧನ ವಿತರಣೆ



ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಓಡಿಪಿ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಓಡಿಪಿ ಸಂಸ್ಥೆ ನಿರ್ದೇಶಕ ಫಾದರ್ ಟೆನ್ನಿ ಕುರಿಯನ್ ಉದ್ಘಾಟಿಸಿದರು.

ಮೈಸೂರು,ಫೆ.4(ಜಿಎ)–ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಮತ್ತು ಸಂಘಮಿತ್ರ ಸಂಸ್ಥೆಯ ಸಹಯೋಗದೊಂದಿಗೆ ಮೈಸೂರಿನ ಓಡಿಪಿ ಸಂಸ್ಥೆಯಿಂದ 80 ಜನ ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಸಂಸ್ಥೆಯ ನಿರ್ದೇಶಕರಾದ ಫಾದರ್ ಟೆನ್ನಿ ಕುರಿಯನ್ ಸಹಾಯ ಧನ ವಿತರಿಸಿದರು.

ಓಡಿಪಿ ಸಂಸ್ಥೆ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಮಡಿಕೇರಿ ಜಿಲ್ಲೆಗಳಿಂದ ಆಯ್ಕೆ ಮಾಡಿದ್ದ 80 ಮಂದಿ ಬಡ ಕ್ಯಾನ್ಸರ್ ರೋಗಿಗಳಿಗೆ 7.17 ಲಕ್ಷ ಸಹಾಯ ಧನದ ಚೆಕ್ ವಿತರಣೆ ಮಾಡಲಾಯಿತು.

ನಾರಾಯಣ ಆಸ್ಪತ್ರೆಯ ವೈದ್ಯ ಡಾ.ಪಿ.ಪ್ರದೀಪ್ ಮಾತನಾಡಿ, ಕ್ಯಾನ್ಸರ್ ರೋಗ ಬಂದವರು ಭಯ ಪಡಬಾರದು, ನಿರ್ಲಕ್ಷ್ಯ ಕೂಡ ಮಾಡಬಾರದು. ಪ್ರಪಂಚದಲ್ಲಿ ಪ್ರತಿ ವರ್ಷ 3 ಕೋಟಿ ಮಂದಿ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ಈ ವೇಗ ನೋಡಿದರೆ ಮುಂದೊಂದು ದಿನ ಕ್ಯಾನ್ಸರ್ ಎನ್ನುವುದು ಸಾಮಾನ್ಯ ಕಾಯಿಲೆ ಆಗಬಹುದು ಎಂದು ಆತಂಕ ವ್ಯಕ್ತಪಡಿಸಿದರು. ಇಂದಿನ ಆಧುನಿಕ ಚಿಕಿತ್ಸಾ ಪದ್ದತಿಯಲ್ಲಿ ಕ್ಯಾನ್ಸರ್ ರೋಗವನ್ನು ಆರಂಭದಲ್ಲೇ ಪತ್ತೆ ಹಚ್ಚಿದರೆ ಗುಣಪಡಿಸಲು ಸಾಧ್ಯ. ಇದಕ್ಕಾಗಿ ನಿಯಮಿತವಾಗಿ ಸ್ಕ್ರೀನಿಂಗ್ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಒಗ್ಗಟ್ಟಿನಲ್ಲಿ ಏಕತೆ, ಅಗತ್ಯಗಳಲ್ಲಿ ವಿಶಿಷ್ಟತೆ ಈ ಸಾಲಿನ ವಿಶ್ವ ಕ್ಯಾನ್ಸರ್ ದಿನಾಚರಣೆಯ ಥೀಮ್ ಆಗಿದೆ. ಜಾಗತಿಕ ಸಮುದಾಯವನ್ನು ಒಗ್ಗೂಡಿಸಿ, ತಡೆಯಬಹುದಾದ ಕ್ಯಾನ್ಸರ್‌ಗಳ ವಿರುದ್ಧ ಹೋರಾಡುವುದು ನಮ್ಮ ಕರ್ತವ್ಯ. ತಂಬಾಕು ಸೇವನೆ, ಮದ್ಯಪಾನ, ಪಾನ್ ಗುಟ್ಕಾ ಮುಂತಾದವುಗಳನ್ನು ನಿಷೇಧಿಸಿದರೆ ಶೇ.30ರಷ್ಟು ಕ್ಯಾನ್ಸರ್ ತಡೆಗಟ್ಟಬಹುದು ಎಂದರು.

ಓಡಿಪಿ ಸಂಸ್ಥೆ ನಿರ್ದೇಶಕ ಫಾದರ್ ಟೆನ್ನಿ ಕುರಿಯನ್ ಮಾತನಾಡಿ, ವಿವಿಧ ದಾನಿಗಳು ಮತ್ತು ಸಂಘಮಿತ್ರ ಸಂಸ್ಥೆಯ ಸಹಯೋಗದೊಂದಿಗೆ 80 ಜನ ಕ್ಯಾನ್ಸರ್ ರೋಗಪೀಡಿತರಿಗೆ 7.17 ಲಕ್ಷ ರೂ ಸಹಾಯ ಧನವನ್ನು ವಿತರಿಸಲಾಗಿದೆ. ಈ ಮೂಲಕ ಸಂಘ ಮಿತ್ರ ಸಂಸ್ಥೆ ಮತ್ತು ದಾನಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮುಂದೆಯೂ ದಾನಿಗಳಿಂದ ಇದೇ ರೀತಿ ಸಹಾಯವನ್ನು ನಿರೀಕ್ಷಿಸುತ್ತೇವೆ. ರೋಗಿಗಳು ಯಾವುದೇ ರೀತಿಯ ಭಯ ಪಡುವುದು ಬೇಡ, ನಿಮ್ಮ ಆರೋಗ್ಯದ ಬಗ್ಗೆ ಗಮನಹರಿಸಿ ಸಮುದಾಯ ನಿಮ್ಮೊಂದಿಗಿದೆ ಎಂದು ಭರವಸೆ ಮೂಡಿಸಿದರು.

ಈ ಸಂದರ್ಭದಲ್ಲಿ ಓಡಿಪಿ ಸಂಸ್ಥೆಯ ಸಹಾಯಕ ನಿರ್ದೇಶಕ ಫಾದರ್ ಜಾನ್ ಫರ್ನಾಂಡೀಸ್, ಸಂಘ ಮಿತ್ರ ಮೈಸೂರು ವಿಭಾಗದ ರೀಜನಲ್ ಮ್ಯಾನೇಜರ್ ಮಹದೇವಸ್ವಾಮಿ, ದಾನಿಗಳಾದ ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್ ಉಪಾಧ್ಯಕ್ಷ ಸ್ಟ್ಯಾನಿ ಲೋಬೋ, ಸಂಯೋಜಕಿ ರತ್ನ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಮಹಿಳೆ ಕಾಲು ಕತ್ತರಿಸಿ 6.5 ಲಕ್ಷ ಮೌಲ್ಯದ ಆಭರಣ ದೋಚಿದ ಕಳ್ಳರು

ಜೈಪುರ: ಮಹಿಳೆಯನ್ನು ಕ್ರೂರವಾಗಿ ಕೊಲೆ ಮಾಡಿ, ಆಕೆಯ ಬಳಿ ಇದ್ದ 6.5 ಲಕ್ಷ ರೂ. ಮೌಲ್ಯದ ಆಭರಣಗಳನ್ನು ದುಷ್ಕರ್ಮಿಗಳು ದೋಚಿರುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ಮಹಿಳೆ



ಗಂಟಲು ಸೀಳಿ, ಕಾಲುಗಳನ್ನು ಕತ್ತರಿಸಿ ಆಭರಣಗಳನ್ನು ದೋಚಲಾಗಿದೆ. ಕೊಲೆ ನಡೆದ ಸಮಯದಲ್ಲಿ ಆಕೆ ಮೇಕೆ ಮೇಯಿಸಲು ಕಾಡಿಗೆ ಹೋಗಿದ್ದರು. ವಾಪಸ್ ಬಾರದ ಹಿನ್ನಲೆಯಲ್ಲಿ ಮಗ ಆಕೆಯನ್ನು ಹುಡುಕಿಕೊಂಡು ಬಂದಾಗ ಈ ಕೃತ್ಯ ಬೆಳಕಿಗೆ ಬಂದಿದೆ. ಈ ಘಟನೆ ಕೊಡ್ಯೆ ಗ್ರಾಮದಲ್ಲಿ ನಡೆದಿದ್ದು, ಆಕೆಯನ್ನು ಕಮಲಾ ದೇವಿ ಎಂದು ಗುರುತಿಸಲಾಗಿದೆ. ಕುಟುಂಬಸ್ಥರು ಆಕೆಯನ್ನು ಹುಡುಕಲು ಕಾಡಿಗೆ ಹೋದಾಗ ಕತ್ತರಿಸಿದ ಕಾಲುಗಳು ಗ್ರಾಮದಿಂದ ಸುಮಾರು 3 ಕಿಲೋಮೀಟರ್ ದೂರದಲ್ಲಿ ತಾಯಿಯ ಶವ ಬಿದ್ದಿರುವುದು ಮಗನ ಕಣ್ಣಿಗೆ ಬಿದ್ದಿತ್ತು. ಸಂತ್ರಸ್ತೆಯ ದೇಹದಿಂದ ಚಿನ್ನದ ಪೆಂಡೆಂಟ್, ಕಿವಿಯೋಲೆಗಳು ಮತ್ತು ಮೂಗುತಿ ಸಹ ಕಳವು ಮಾಡಲಾಗಿದೆ ಎಂದು ಸಂತ್ರಸ್ತೆಯ ಕುಟುಂಬ ಆರೋಪಿಸಿದೆ. ದಾಳಿಕೋರರು ಮಹಿಳೆಯನ್ನು ಕೊಂದು, ಆಕೆಯ ದೇಹದಲ್ಲಿದ್ದ ಆಭರಣಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾರೆ. ಎಎಸ್‌ಪಿ ನೀಲ್‌ಕಮಲ್ ಮೀನಾ, ಅಧಿಕಾರಿಗಳು ಸ್ಥಳ ಪರಿಶೀಲಿಸಿದರು. ದಾಳಿಕೋರರನ್ನು ಬಂಧಿಸಿಲ್ಲ. ಅವರ ಬಂಧನಕ್ಕೆ ಶೋಧ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಿಬಿಯಾದ ಮಾಜಿ ಸರ್ವಾಧಿಕಾರಿ ಗಡಾಫಿ ಪುತ್ರ ಗುಂಡೇಟಿಗೆ ಬಲಿ!

ತ್ರಿಪೋಲಿ: ಲಿಬಿಯಾದ ಸರ್ವಾಧಿಕಾರಿ ಮುಅಮ್ಮರ್



ಗಡಾಫಿಯ ಮಗ ಸೈಫ್ ಅಲ್–ಇಸ್ಲಾಂ ಗಡಾಫಿ ಮನೆಯಲ್ಲಿಯೇ ಗುಂಡೇಟಿಗೆ ಬಲಿಯಾಗಿದ್ದಾರೆ. ಗಢಾಫಿ ಅವರ ಮುಂದಿನ ಉತ್ತರಾಧಿಕಾರಿ ಎನ್ನಲಾಗುತ್ತಿದ್ದ ಸೈಫ್ ಅಲ್–ಇಸ್ಲಾಂ ಗಡಾಫಿ ಮನೆಗೆ ನುಗ್ಗಿದ್ದ ನಾಲ್ವರು ಬಂದೂಕುಧಾರಿಗಳು ಗುಂಡಿಕ್ಕಿ ಹತ್ಯೆ ಮಾಡಿರುವುದಾಗಿ ಅವರ ಕಚೇರಿ ದೃಢಪಡಿಸಿದೆ. 53 ವರ್ಷದ ಗಡಾಫಿ ಪುತ್ರನ ಸಾವನ್ನು ಅವರ ರಾಜಕೀಯ ಕಚೇರಿಯ ಮುಖ್ಯಸ್ಥರು ಖಚಿತಪಡಿಸಿ ದ್ದಾರೆ. ಪಶ್ಚಿಮ ಲಿಬಿಯಾದ ನಗರವಾದ ಜಿಂಟಾನ್‌ನಲ್ಲಿರುವ ಅವರ ನಿವಾಸದಲ್ಲಿ ನಾಲ್ಕು ವ್ಯಕ್ತಿಗಳ ಕಮಾಂಡೋ ಘಟಕ ಹತ್ಯೆ ನಡೆಸಿದೆ ಎಂದು ಅವರ ವಕೀಲರು ತಿಳಿಸಿದರು. ಆದಾಗ್ಯೂ, ಹತ್ಯೆಯನ್ನು ಮಾಡಿಸಿದವರು ಯಾರು ಅಥವಾ ಶಸ್ತ್ರಸಜ್ಜಿತ ವ್ಯಕ್ತಿಗಳು ಅವರ ಮನೆಗೆ ನುಗ್ಗಲು ಏನು ಕಾರಣ ಎಂಬುದಕ್ಕೆ ಯಾವುದೇ ವಿವರಗಳು ತಿಳಿದುಬಂದಿಲ್ಲ. ಅಲ್ಜೀರಿಯಾ ದೇಶದ ಗಡಿಯ ಸಮೀಪದಲ್ಲಿ ಸಾವನ್ನಪ್ಪಿದ್ದಾರೆ ಎಂದು ಸೈಫ್ ಅಲ್–ಇಸ್ಲಾಂನ ಸಹೋದರಿ ಲಿಬಿಯಾ ಟೆಲಿವಿಷನ್‌ಗೆ ಹೇಳುವ ಮೂಲಕ ಸಂಘರ್ಷದ ಹೊಗೆಯೂ ಕಾಣಿಸುತ್ತಿದೆ. ಸೈಫ್ ಅಲ್–ಇಸ್ಲಾಮ್ ಇತ್ತೀಚಿಗೆ ತನ್ನ ತಂದೆಯ ಉತ್ತರಾಧಿಕಾರಿ ಅಂದುಕೊಂಡಿದ್ದರು. ತೈಲ–ಸಮೃದ್ಧ ಉತ್ತರ ಆಫ್ರಿಕಾದ ರಾಜ್ಯದಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದರು.

ಎಂಜಿನ್‌ನಲ್ಲಿ ಬೆಂಕಿ; ಟರ್ಕಿಶ್ ಏರ್‌ಲೈನ್ಸ್ ತುರ್ತು ಭೂಸ್ಪರ್ಶ

ಕೋಲ್ಕತ್ತಾ: ಕಠ್ಮಂಡುವಿನಿಂದ ಇಸ್ತಾನ್‌ಬುಲ್‌ಗೆ



ತೆರಳುತ್ತಿದ್ದ ಟರ್ಕಿಶ್ ಏರ್‌ಲೈನ್ಸ್ ಪ್ರಯಾಣಿಕ ವಿಮಾನ ಬುಧವಾರ ಮಧ್ಯಾಹ್ನ ಟೇಕಾಫ್ ಆದ ಕೆಲವೇ ಸಮಯದಲ್ಲಿ ಅದರ ಬಲ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನೇಪಾಳಿ ರಾಜಧಾನಿ ತ್ರಿಭುವನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. THY 727 ವಿಮಾನವು ಸ್ಥಳೀಯ ಸಮಯ 13:28ಕ್ಕೆ ಟೇಕಾಫ್ ಆಯಿತು. ಹೊರಟ 4 ನಿಮಿಷಗಳಲ್ಲೇ ಸಮಸ್ಯೆ ಕಾಣಿಸಿಕೊಂಡಿತು. ಟೇಕಾಫ್ ಆದ ಕೂಡಲೇ ಬಲ ಇಂಜಿನ್‌ಗೆ ಬೆಂಕಿ ತಗುಲಿತು ಎಂದು ವಿಮಾನ ನಿಲ್ದಾಣದ ಜನರಲ್ ಮ್ಯಾನೇಜರ್ ತೆಕನಾಥ್ ಸಿತೌಲಾ ತಿಳಿಸಿದ್ದಾರೆ. ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಮುನ್ನೆಚ್ಚರಿಕೆ ಕ್ರಮವಾಗಿ ವಿಮಾನ ನಿಲ್ದಾಣವನ್ನು ಸುಮಾರು 15 ನಿಮಿಷಗಳ ಕಾಲ ತಾತ್ಕಾಲಿಕವಾಗಿ ಮುಚ್ಚಲಾಯಿತು. ವಿಮಾನವು ಕೋಲ್ಕತ್ತಾದ ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿತು. ಇಳಿಯುವ ಮೊದಲು ಬಲ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ಕ್ಯಾಪ್ಟನ್ ಕೋಲ್ಕತ್ತಾ ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಮಾಹಿತಿ ನೀಡಿದರು. ವಿಮಾನದಲ್ಲಿ 236 ಪ್ರಯಾಣಿಕರು, ಸಿಬ್ಬಂದಿಯಿದ್ದರು.

ಭಾರತ ಇನ್ನು ಮುಂದೆ ರಷ್ಯಾದಿಂದ ತೈಲ ಖರೀದಿಸಲ್ಲ: ಶ್ವೇತಭವನ

ವಾಷಿಂಗ್ಟನ್: ಭಾರತದೊಂದಿಗಿನ ಹೊಸ ವ್ಯಾಪಾರ



ಒಪ್ಪಂದವನ್ನು ಶ್ವೇತಭವನ ಶ್ಲಾಘಿಸಿದೆ. ಭಾರತ ಇನ್ನು ಮುಂದೆ ರಷ್ಯಾದ ತೈಲವನ್ನು ಖರೀದಿಸುವುದಿಲ್ಲ ಹಾಗೂ ಪ್ರಧಾನಿ ನರೇಂದ್ರ ಮೋದಿ ಕೂಡ ಅಮೆರಿಕದ ಪ್ರಮುಖ ವಲಯಗಳಲ್ಲಿ ಸುಮಾರು 4,521 ಕೋಟಿ ($500 ಬಿಲಿಯನ್) ಹೂಡಿಕೆಗೆ ಒಪ್ಪಿಗೆ ನೀಡಿದ್ದಾರೆ ಎಂದು ಶ್ವೇತಭವನ ಮಾಹಿತಿ ನೀಡಿದೆ.

ಈ ಕುರಿತು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ನಮ್ಮ ಅಧ್ಯಕ್ಷರು ಭಾರತದೊಂದಿಗೆ ಮತ್ತೊಂದು ಉತ್ತಮ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಅವರು ಮೋದಿಯವರೊಂದಿಗೆ ನೇರವಾಗಿ ಮಾತನಾಡಿದ್ದು, ಉಭಯ ದೇಶಗಳು ಉತ್ತಮ ವ್ಯಾಪಾರ ಸಂಬಂಧದ ಕುರಿತು ಹಂಚಿಕೊಂಡಿದ್ದಾರೆ. ಭಾರತವು ಇನ್ನು ಮುಂದೆ ರಷ್ಯಾ, ವೆನುಜುವೆಲಾದಿಂದ ತೈಲವನ್ನು ಖರೀದಿಸುವುದಿಲ್ಲ. ಬದಲಿಗೆ ಅಮೆರಿಕದಿಂದ ತೈಲವನ್ನು ಖರೀದಿಸಲು ಬದ್ಧವಾಗಿದೆ. ಇದರಿಂದ ಅಮೆರಿಕ ಜನರಿಗೆ ಪ್ರಯೋಜನವಾಗಲಿದೆ ಎಂದರು. ಇದಲ್ಲದೆ, ಮೋದಿಯವರು ಸಾರಿಗೆ, ಇಂಧನ ಮತ್ತು ಕೃಷಿ ಉತ್ಪನ್ನಗಳು ಸೇರಿದಂತೆ ಅಮೆರಿಕದ ಪ್ರಮುಖ ವಲಯಗಳಲ್ಲಿ ಸುಮಾರು 4,521 ಕೋಟಿ ಹೂಡಿಕೆಗೆ ಬದ್ಧರಾಗಿದ್ದಾರೆ. ಈ ಒಪ್ಪಂದಕ್ಕಾಗಿ ಅಧ್ಯಕ್ಷ ಟ್ರಂಪ್ ಅವರಿಗೆ ಧನ್ಯವಾದ ತಿಳಿಸುತ್ತೇವೆ ಎಂದಿದ್ದಾರೆ.

ಹುಸೇನ್ ಸಾಗರ್‌ಗೆ ಹಾರಿ ಮಹಿಳಾ ಟೆಕ್ಕಿ ಆತ್ಮಹತ್ಯೆ

ಹೈದರಾಬಾದ್: ಹುಡುಗರು ಒಪ್ಪಿಲ್ಲ.. ಮದುವೆ ಆಗ್ತಿಲ್ಲ ಎಂದು ಖಿನ್ನತೆಗೊಳಗಾಗಿದ್ದ ಮಹಿಳಾ ಟೆಕ್ಕಿಯೊಬ್ಬರು ನೀರಿಗೆ ಹಾರಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಹೈದರಾಬಾದ್‌ನಲ್ಲಿ ನಡೆದಿದೆ. ಹೈದರಾಬಾದ್‌ನ ಹುಸೇನ್ ಸಾಗರ್ ಕೆರೆಗೆ ಹಾರಿ ವಿಜಯಲಕ್ಷ್ಮಿ (26) ಎಂಬುವವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮದುವೆ ವಿಳಂಬ ಮತ್ತು ತಾಯಿ ಅನಾರೋಗ್ಯದಿಂದಾಗಿ ಬೇಸತ್ತು ಖಿನ್ನತೆಗೆ ಜಾರಿದ್ದ ವಿಜಯಲಕ್ಷ್ಮಿ ಕೆರೆಗೆ ಹಾರಿ ಪ್ರಾಣ ಬಿಟ್ಟಿದ್ದಾರೆ.

ನಿಜಾಮಾಬಾದ್ ಬೈನ್ಸಾ ಮೂಲದ ವಿಜಯಲಕ್ಷ್ಮಿ ಮತ್ತು ಅವರ ತಾಯಿ ಸರಸ್ವತಿ ಅವರು ಹೈದರಾಬಾದ್‌ನ ಕೂಕಟ್ಪಲ್ಲಿಯ ಮೈತ್ರಿ ನಗರದಲ್ಲಿ ವಾಸಿಸುತ್ತಿದ್ದರು. ವಿಜಯಲಕ್ಷ್ಮಿ ಐಟಿ ಸಂಸ್ಥೆಯಲ್ಲಿ ಸಾಫ್ಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಅವರ ತಂದೆ ಚಿಕ್ಕವಳಿದ್ದಾಗ ತಂದೆ ತೀರಿಕೊಂಡಿದ್ದರು.

ದಿಢೀರ್ ನಾಪತ್ತೆ: ಜನವರಿ 31ರ ಬೆಳಗ್ಗೆ ವಿಜಯಲಕ್ಷ್ಮಿ ರ‍್ಯಾಪಿಡೊ ಬೈಕ್ ಕಾಯ್ದಿರಿಸಿ ತನ್ನ ತಾಯಿಗೆ ಎರಡು ದಿನಗಳಲ್ಲಿ ಹಿಂತಿರುಗುತ್ತೇನೆ ಎಂದು ಹೇಳಿ ಹೊರಟಿದ್ದರು. ಆದರೆ ವಿಜಯಲಕ್ಷ್ಮಿ ವಾಪಸ್ ಬರದಿದ್ದಾಗ ತಾಯಿ ಸರಸ್ವತಿ ಭಾನುವಾರ ಪೊಲೀಸರಿಗೆ ದೂರು ನೀಡಿದ್ದರು.

ಈ ವೇಳೆ ಶೋಧ ನಡೆಸಿದ್ದ ಪೊಲೀಸರಿಗೆ ಹುಸೇನ್ ಸಾಗರ್ ಕೆರೆಯಲ್ಲಿ ವಿಜಯಲಕ್ಷ್ಮಿ ಮೃತದೇಹ ಪತ್ತೆಯಾಗಿತ್ತು. ಕೂಡಲೇ ಶವ ಹೊರತೆಗೆದ ಪೊಲೀಸರು ಗಾಂಧಿ ಆಸ್ಪತ್ರೆಗೆ ಸಾಗಿಸಿ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ. ಕುಕಟ್ಪಲ್ಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಿದ್ದಾರೆ.

ಮೈಸೂರು ಮಿತ್ರ ಗುರುವಾರ 5 ಫೆಬ್ರವರಿ 2026

ಸ್ವಸ್ಥ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಿ

ಮಡಿಕೇರಿ ಫೆ.4– ಇತ್ತೀಚಿನ ದಿನಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ತಿಳಿಸಿದ್ದಾರೆ.

ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮ ಕುರಿತಂತೆ ಬುಧವಾರ ನಡೆದ ಬೀದಿ ನಾಟಕ ಮೂಲಕ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನ್ಮ ಪಡೆದ ಮಕ್ಕಳೇ ತಂದೆ-ತಾಯಿ, ಸೋದರ-ಸೋದರಿಯನ್ನು ಹತ್ಯೆ ಮಾಡುವುದು ವರದಿಯಾಗಿದ್ದು, ಸಮಾಜ ಎತ್ತ ಸಾಗುತ್ತಿದೆ ಎಂಬ ಬಗ್ಗೆ ಅವಲೋಕನ ಮಾಡಬೇಕಿದೆ ಎಂದರು.



ಜಾಗೃತಿ ಅಭಿಯಾನಕ್ಕೆ ಎಸ್ಪಿ ಆರ್.ಎನ್.ಬಿಂದುಮಣಿ ಚಾಲನೆ ನೀಡಿದರು.

ಯುವಜನರು ಗಾಂಜಾ, ಹೆರಾಯಿನ್, ಅಫೀಮು ಮತ್ತಿತರ ಮಾದಕ ವಸ್ತುಗಳಿಗೆ ಒಳಗಾಗಿ, ಮಾನಸಿಕ ಒತ್ತಡಕ್ಕೆ ತುತ್ತಾಗಿ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದು, ಈ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ಯುವ ಜನರು ಮಾನಸಿಕ ಚಂಚಲತೆಗೆ ಒಳಗಾಗದೆ, ನೆಮ್ಮದಿಯಾಗಿ ಉತ್ತಮ ಬದುಕು ನಡೆಸಲು ಕುಟುಂಬದಲ್ಲಿ ನಿರ್ಮಲ ವಾತಾವರಣ ಇರಬೇಕು. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಯೋಚಿಸಬೇಕು ಎಂದು ಸಲಹೆ ನೀಡಿದರು.

ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ. ಎ.ಜೆ.ಲೋಕೇಶ್ ಮಾತನಾಡಿ, ಆರೋಗ್ಯಯುತ ಸಮಾಜ ನಿರ್ಮಾಣದಿಂದ ಉತ್ತಮ ಬದುಕು ನಡೆಸಲು ಸಾಧ್ಯ. ಆ ದಿಸೆಯಲ್ಲಿ ಒಳ್ಳೆಯ ಚಿಂತನೆ, ಭವಿಷ್ಯದ ಗುರಿ ಮತ್ತು ಉದ್ದೇಶ ಇರಬೇಕು ಎಂದರು.


ಕಲಾವಿದ ಈ.ರಾಜು ಮತ್ತು ತಂಡದವರು ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮ ಕುರಿತು ಅರ್ಧ ಗಂಟೆ ಕಾಲ ಬೀದಿ ನಾಟಕ ಪ್ರದರ್ಶಿಸಿ ಗಮನ ಸೆಳೆದರು.

ವಾರ್ತಾಧಿಕಾರಿ ಚಿನ್ನಸ್ವಾಮಿ ಸ್ವಾಗತಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ವಿಜಯ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್ಫೋರ್ಸ್ ಮೆಂಟ್ ಅಧಿಕಾರಿ ಡಾ. ಆನಂದ್, ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಶಶಿಕಲಾ, ಡಿವೈಎಸ್‌ಪಿ ಐ.ಪಿ. ಮೇದಪ್ಪ, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಚಂದ್ರಶೇಖರ್, ನಗರ ಇನ್ಸ್‌ಪೆಕ್ಟರ್ ಅನ್ನಪೂರ್ಣ, ಉಪನ್ಯಾಸಕರು, ಶಿಕ್ಷಕರು ಇತರರು ಇದ್ದರು.

ತಹಸೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿ ದಿಢೀರ್ ಭೇಟಿ

ಮಡಿಕೇರಿ ಫೆ.4– ನಗರದ ತಹಸೀಲ್ದಾರ್ ಕಚೇರಿಗೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ದಿಢೀರ್ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಿ ಅಧಿಕಾರಿ ಮತ್ತು ಸಿಬ್ಬಂದಿಗೆ ಚುರುಕು ಮುಟ್ಟಿಸಿದರು.

ಭೂ ಸುರಕ್ಷಾ ಯೋಜನೆ, ಇ-ಪೌತಿ ಖಾತೆ, ದುರಸ್ತಿ ಪ್ರಕರಣ ಇತ್ಯರ್ಥ, ಕೆರೆಗಳ ಸಂರಕ್ಷಣೆ ಮತ್ತಿತರ ಬಗ್ಗೆ ಮಾಹಿತಿ ಪಡೆದು, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಆಗಬೇಕಿರುವ ಕೆಲಸಗಳನ್ನು ಶೀಘ್ರವೇ ಪೂರ್ಣಗೊಳಿಸಬೇಕು. ಆ ನಿಟ್ಟಿನಲ್ಲಿ ನಿಯಮಾನುಸಾರ ತ್ವರಿತವಾಗಿ ಕಡತಗಳನ್ನು ವಿಲೇವಾರಿ ಮಾಡಬೇಕು ಎಂದು ತಾಕೀತು ಮಾಡಿದರು.



ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ತಹಸೀಲ್ದಾರ್ ಕಚೇರಿಗೆ ದಿಢೀರ್ ಭೇಟಿ ನೀಡಿ ಇ-ಪೌತಿ ಖಾತೆಯ ದಾಖಲೆಗಳನ್ನು ಪರಿಶೀಲಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ ಸಾರ್ವಜನಿಕರು ಕಂದಾಯ ಇಲಾಖೆಯಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಹೆಚ್ಚು ಗಮನಿಸುತ್ತಾರೆ. ಆದ್ದರಿಂದ ಸಾರ್ವಜನಿಕರಿಗೆ ಸ್ಪಂದಿಸುವಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದರು. ಎಸಿ ನಿತಿನ್ ಚಕ್ಕಿ, ತಹಸೀಲ್ದಾರ್ ಶ್ರೀಧರ ಇದ್ದರು.

ಜಾಗ ಒತ್ತುವರಿ: ತನಿಖೆಗೆ ಬಿಜೆಪಿ ಆಗ್ರಹ

ಮಡಿಕೇರಿ, ಫೆ.4–ನಾಪೋಕ್ಲುವಿನಲ್ಲಿ ಹಲವು ದಶಕಗಳ ಹಿಂದೆ ಶೈಕ್ಷಣಿಕ ಉದ್ದೇಶಗಳಿಗಾಗಿ ದಾನಿಗಳು ನೀಡಿದ್ದ ಜಾಗದ, ಒತ್ತುವರಿ ಪ್ರದೇಶದಲ್ಲಿ ಯಾವುದೇ ಕಾರಣಕ್ಕೂ ಶಾದಿ ಮಹಲ್ ನಿರ್ಮಿಸಬಾರದು ಎಂದು ಆಗ್ರಹಿಸಿರುವ ರಾಜ್ಯ ಬಿಜೆಪಿ ಕಾರ್ಯ ಕಾರಿಣಿ ಸಮಿತಿ ಸದಸ್ಯ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

ನಾಪೋಕ್ಲುವಿನ ಕರ್ನಾಟಕ ಪಬ್ಲಿಕ್ ಶಾಲೆಗೆ ದಾನವಾಗಿ ನೀಡಿದ್ದ ಜಾಗದ ಅತಿಕ್ರಮಣಕ್ಕೆ ಸಂಬಂಧಿಸಿದಂತೆ ಈ ಹಿಂದೆಯೇ ಸರ್ವೇ ಕಾರ್ಯಗಳು ನಡೆದಿದೆ. ಜಾಗ ಒತ್ತುವರಿಯಾಗಿರುವುದು ದೃಢಪಟ್ಟಿದ್ದು, ಮರು ಸರ್ವೇ ಕಾರ್ಯಗಳ ಅಗತ್ಯತೆ ಇಲ್ಲ. ಜಾಗಕ್ಕೆ ಸಂಬಂಧಿಸಿದಂತೆ ತಕ್ಷಣವೇ ತನಿಖೆ ನಡೆಸಿ ಕ್ರಮ ಕೈಗೊಳ್ಳದಿದ್ದಲ್ಲಿ ಕೊಡಗಿನ ಜನತೆಯನ್ನು ಒಗ್ಗೂಡಿಸಿ ಬೃಹತ್ ಪ್ರತಿಭಟನೆಗೆ ಇಳಿಯುವ ಎಚ್ಚರಿಕೆಯನ್ನು ನೀಡಿದರು.

ವಿದ್ಯಾ ಸಂಸ್ಥೆಯ ಜಾಗದ ವಿವಾದಗಳ ಹಿನ್ನೆಲೆ ಈ ಹಿಂದೆಯೆ ಸರ್ವೇ ಕಾರ್ಯ ನಡೆದು, ತಹಸೀಲ್ದಾರರು ಜಾಗ ಒತ್ತುವರಿಯಾಗಿರುವುದನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. ಈ ಹಿನ್ನೆಲೆ ಮರು ಸರ್ವೇ ಬೇಡ. ಬದಲಾಗಿ ಸಮಗ್ರ ತನಿಖೆ ನಡೆಸಿ, ಕಂದಾಯ ದಾಖಲೆಗಳಲ್ಲಿ ಆಗಿರುವ ಲೋಪಗಳಿಗೆ ಕಾರಣಗಳನ್ನು ಹುಡುಕಿ ಸಂಬಂಧಿಸಿದವರ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಬಿಜೆಪಿ ಪ್ರಮುಖರಾದ ತಳೂರು ಕಿಶೋರ್ ಕುಮಾರ್, ಮಹೇಶ್ ಜೈನಿ, ಬಿ.ಕೆ.ಅರುಣ್ ಕುಮಾರ್, ಸಜಿಲ್ ಕೃಷ್ಣನ್, ಕರವಂಡ ಲವ ಉಪಸ್ಥಿತರಿದ್ದರು.

ಕುಶಾಲನಗರ ತಹಸೀಲ್ದಾರ್ ಕಚೇರಿಗೆ ಡಿಸಿ ಭೇಟಿ



ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಕುಶಾಲನಗರ ತಹಸೀಲ್ದಾರ್ ಕಚೇರಿಗೆ ದಿಢೀರ್ ಭೇಟಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

25 ವರ್ಷಗಳಿಂದ ಆಗದ ಅಭಿವೃದ್ಧಿ ಮೂರು ವರ್ಷದಲ್ಲಾಗಿದೆ

ವಿರಾಜಪೇಟೆ, ಫೆ.4–ಅಲ್ಪಸಂಖ್ಯಾತರ ವರ್ಗದ ಅಭಿವೃದ್ಧಿಗಾಗಿ ಶಾಸಕ ಎ.ಎಸ್.ಪೊನ್ನಣ್ಣ ಅವರು ಮೂರು ವರ್ಷದಲ್ಲಿ ರೂ, 21 ಕೋಟಿ ಅನುದಾನ ನೀಡಿದ್ದು 25 ವರ್ಷಗಳಿಂದ ಆಗದಂತ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆದಿದೆ ಎಂದು ಅಲ್ಪಸಂಖ್ಯಾತರ ಘಟಕದ ಜಿಲ್ಲಾ ಅಧ್ಯಕ್ಷ ಪಿ.ಎ.ಹನೀಫ್ ಹೇಳಿದರು.



ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ವತಿಯಿಂದ ಶಾಸಕರ ಗೃಹ ಕಛೇರಿ ಸಭಾಂಗಣದಲ್ಲಿ ನಡೆದ 18 ಅಲ್ಪಸಂಖ್ಯಾತರ ವಲಯಗಳ ಸಮಿತಿ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಭಿವೃದ್ಧಿಯ ಪೂರಕವಾಗಿ ಸಭೆಗಳು ನಡೆಯುವುದು ಅನಿವಾರ್ಯ. ಗ್ರಾಮೀಣ ಭಾಗದಲ್ಲಿ ಜನರಿಗೆ ಮೂಲ ಸೌಲಭ್ಯಗಳು ದೊರಕಬೇಕು ಎಲ್ಲಿ ಕಾಮಗಾರಿಗಳು ನಡೆದಿಲ್ಲ ಎಂಬುದರ ಬಗ್ಗೆ ತಿಂಗಳೊಳಗಾಗಿ ಸ್ಥಳೀಯರು ತಿಳಿಸಬೇಕು. ಎಂದರು.

ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಜೋಕಿಂ ರೋಡ್ರಿಗಸ್ ಮಾತನಾಡಿ, ಶಾಸಕರ ಪ್ರಯತ್ನದ ಫಲವಾಗಿ ಅಲ್ಪಸಂಖ್ಯಾತ ವರ್ಗದ ಅಭಿವೃದ್ಧಿಗೆ ಅನುದಾನ ಕಲ್ಪಿಸಲಾಗಿದೆ. ಇದರಿಂದ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡು ಕೆಲವು ಪ್ರಗತಿಯಲ್ಲಿವೆ ಎಂದ ಅವರು, ಶಾದಿ ಭಾಗ್ಯ ಯೋಜನೆಯಲ್ಲಿ ಗುಂಪು ವಿವಾಹ ನಡೆಸಲು ಅನ್ವಯವಾಗುತ್ತದೆ. ಕ್ರೈಸ್ತ ಧರ್ಮಕ್ಕೆ ಅನ್ವಯ ಆಗುವುದಿಲ್ಲ ಆದರೆ ಈ ಹಿಂದೆ ಬಂದ ಯೋಜನೆಯಂತೆ ವೈಯಕ್ತಿಕ ಮದುವೆ ನಡೆಸುವವರಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಕೊಳಮಂಡ ರಫೀಕ್ ಮಾತನಾಡಿದರು.

ಫೆ.15, ಜಿಲ್ಲಾ ಮಟ್ಟದ ಕೇರಂ ಬೋರ್ಡ್ ಕ್ರೀಡಾಕೂಟ

ನಾಪೋಕ್ಲು, ಫೆ.4 (ದುಗ್ಗಳ)– ಚೇರಂಬಾಣೆ, ಕಾರುಗುಂದ ಗೌಡ ಸಮಾಜ, ಚೇರಂಬಾಣೆ ಗೌಡ ಯುವ ವೇದಿಕೆ ಸಂಯುಕ್ತವಾಗಿ ಮೊದಲ ವರ್ಷದ ಜಿಲ್ಲಾ ಮಟ್ಟದ ಗೌಡ ಜನಾಂಗದ ಕೇರಂ ಬೋರ್ಡ್ ಕ್ರೀಡಾಕೂಟ ಫೆ.15ರ ಭಾನುವಾರ ಗೌಡ ಸಮಾಜದಲ್ಲಿ ಜರುಗಲಿದೆ. ಸಮಾಜದ ಅಧ್ಯಕ್ಷ ಕೊಡಪಾಲು ಎಸ್ ಗಣಪತಿ ಅಧ್ಯಕ್ಷತೆಯಲ್ಲಿ ಜರುಗಲಿರುವ ಕಾರ್ಯಕ್ರಮದ ಉದ್ಘಾಟನೆಯನ್ನು ಬೆಂಗಳೂರಿನ ಲೀಡಿಂಗ್ ಎಡ್ಜ್ ಅಡ್ವಾಟಾಯ್ಸ್ ಇಂಡಿಯಾ ಪ್ರವೇಟ್ ಲಿಮಿಟೆಡ್‌ನ ಎಡಿಕೇರಿ ಪ್ರಸನ್ನ ಕುಶಾಲಪ್ಪ ನೆರವೇರಿಸುವರು.

60 ಲಕ್ಷ ರೂ. ಲಂಚಕ್ಕೆ ಬೇಡಿಕೆ

ಅಬಕಾರಿ ಉಪ ಆಯುಕ್ತ ನಾಗಶಯನ ಅಮಾನತು



ಮಂಡ್ಯ, ಫೆ.4– ಸಿಎಲ್–7 ಸನ್ನದು ಮಂಜೂರಾತಿಗಾಗಿ ಅರ್ಜಿದಾರರಿಗೆ 60 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪದ ಮೇಲೆ ಜಿಲ್ಲೆಯ ಅಬಕಾರಿ ಉಪ ಆಯುಕ್ತ ಆರ್.ನಾಗಶಯನ ಅವರನ್ನು ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ.

ಭ್ರಷ್ಟಾಚಾರ ಆರೋಪದ ಮೇರೆಗೆ ಅಬಕಾರಿ ಸಚಿವರ ರಾಜೀನಾಮೆಗೆ ವಿರೋಧ ಪಕ್ಷದ ಮುಖಂಡರು ಒತ್ತಾಯಿಸುತ್ತಿರುವ ಸಂದರ್ಭದಲ್ಲೇ ಅಬಕಾರಿ ಉಪ ಆಯು ಕ್ತರ ಅಮಾನತು ಆದೇಶ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

2025ರ ಆಗಸ್ಟ್ ತಿಂಗಳಲ್ಲಿ ಸುಂದರ್ ಎಂಬುವರಿಗೆ ಲಂಚಕ್ಕೆ ಬೇಡಿಕೆ ಇಟ್ಟಿದ್ದ ನಾಗಶಯನ ಅವರ ಧ್ವನಿಯೆಂದು ಹೇಳಲಾದ ಆಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಶಿಸ್ತು ಕ್ರಮ ಜರುಗಿಸುವ ಸಂಬಂಧ ಅಬಕಾರಿ ಆಯುಕ್ತರ ಕಚೇರಿಯಿಂದ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು. ಆರೋಪಿತ ಅಧಿಕಾರಿ ನೀಡಿದ ಸಮಜಾಯಿಷಿ ಪರಿಶೀಲಿಸಲಾಗಿ, ಲಂಚಕ್ಕೆ ಬೇಡಿಕೆ ಇಟ್ಟ ಆರೋಪ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅಮಾನತುಗೊಳಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ. ಅಮಾನತ್ತಿನ ಅವಧಿಯಲ್ಲಿ ನಾಗಶಯನ ಅವರನ್ನು ಬೆಳಗಾವಿ ದಕ್ಷಿಣ, ಬೆಳಗಾವಿ ಜಿಲ್ಲೆಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಆತ್ಮಹತ್ಯೆಗೆ ಯತ್ನಿಸಿದ ವೃದ್ಧೆ ರಕ್ಷಣೆ

ಶ್ರೀರಂಗಪಟ್ಟಣ, ಫೆ.4– ಕಾವೇರಿ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ವೃದ್ಧೆಯೊಬ್ಬರನ್ನು ಸ್ಥಳೀಯರು ರಕ್ಷಿಸಿರುವ ಘಟನೆ ಪಟ್ಟಣದ ಉತ್ತರ ಕಾವೇರಿಯ ವೆಲ್ಲೆಸ್ಲಿ ಸೇತುವೆ ಬಳಿ ಬುಧವಾರ ನಡೆದಿದೆ.



ಚಾಮರಾಜನಗರ ಜಿಲ್ಲೆ ಬೆಂಡರವಾಡಿ ಗ್ರಾಮದ ಗುಂಡಮ್ಮ (78) ಆತ್ಮಹತ್ಯೆಗೆ ಯತ್ನಿಸಿದವರು. ಈಕೆ ಕುಟುಂಬ ಕಲಹದಿಂದ ಬೇಸತ್ತು ಶ್ರೀರಂಗಪಟ್ಟಣಕ್ಕೆ ಆಗಮಿಸಿ ಕಾವೇರಿ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಆದರೆ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆ ಇದ್ದಿದ್ದರಿಂದ ಸಂಪೂರ್ಣವಾಗಿ ಮುಳುಗಲು ಸಾಧ್ಯವಾಗಿಲ್ಲ. ಈ ವೇಳೆ ಸೇತುವೆ ಮೇಲೆ ಹೋಗುತ್ತಿದ್ದ ಸ್ಥಳೀಯರಾದ ವಿ.ಸುರೇಶ್ ಹಾಗೂ ಕಿಸಾರ್ ಅಹಮ್ಮದ್ ನದಿಗೆ ಇಳಿದು ವೃದ್ಧೆಯನ್ನು ರಕ್ಷಿಸಿದ್ದಾರೆ.

ಬಳಿಕ ಅವರು ನದಿ ದಡದಲ್ಲಿ ಗುಂಡಮ್ಮ ಅವರನ್ನು ಉಪಚರಿಸಿ, ಅವರಿಂದ ಅವರ ಮನೆ ವಿಳಾಸ ಹಾಗೂ ಮೊಬೈಲ್ ನಂಬರ್ ಪಡೆದು ಕರೆ ಮಾಡಿ ವಿಷಯ ಮುಟ್ಟಿಸಿದ್ದಾರೆ. ಬಳಿಕ ಪಟ್ಟಣದ ಪೊಲೀಸ್ ಠಾಣೆಗೂ ಮಾಹಿತಿ ನೀಡಿದ್ದಾರೆ. ಬಳಿಕ ಪಟ್ಟಣದ ಪೊಲೀಸ್ ಠಾಣೆಗೆ ಆಗಮಿಸಿದ ಗುಂಡಮ್ಮ ಅವರ ಮೊಮ್ಮಗ ಬಂದು ತಮ್ಮ ಅಜ್ಜಿಯನ್ನು ಕರೆದೊಯ್ದಿದ್ದಾರೆ. ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ

ಮೈತ್ರಿ ಬೇಡ ಎಂಬುದು ಕಾರ್ಯಕರ್ತರ ಅಭಿಲಾಷೆ

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಂಗೌಡ ಸ್ಪಷ್ಟನೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಮಾತನಾಡಿದರು.

ಮಂಡ್ಯ, ಫೆ4– ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಬಿಜೆಪಿ ಶಕ್ತಿಯುತವಾಗಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮೈತ್ರಿ ಬೇಡ ಎಂಬುದು ಕಾರ್ಯಕರ್ತರ ಅಭಿಪ್ರಾಯ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಸ್ಪಷ್ಟಪಡಿಸಿದರು.

ನಗರದ ಬಿಜೆಪಿ ವಿಕಾಸ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯಲ್ಲೇ ಬಿಜೆಪಿ ಶಕ್ತಿಶಾಲಿಯಾಗಿದೆ ಎಂಬುದು ಜೆಡಿಎಸ್‌ಗೂ ತಿಳಿದಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರು ಸಹ ಅಭಿಪ್ರಾಯ ತಿಳಿಸಿದ್ದಾರೆ. ಮೈತ್ರಿಗೆ ಅವಕಾಶ ನೀಡಿದ್ದೆ ಆದಲ್ಲಿ ಬಿಜೆಪಿ ಕಾರ್ಯಕರ್ತರಿಗೆ ಶೇ.50ರಷ್ಟು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ವಿಚಾರವನ್ನು ಪಕ್ಷದ ರಾಜ್ಯಾಧ್ಯಕ್ಷರು ಮತ್ತು ಮುಖಂಡರಿಗೆ ತಿಳಿಸುವುದಾಗಿ ಹೇಳಿದರು.

ಮೈತ್ರಿ ಬಗ್ಗೆ ರಾಜ್ಯಾಧ್ಯಕ್ಷರು, ಕೋರ್ ಕಮಿಟಿ ಮುಂದೆ ಕಾರ್ಯಕರ್ತರ ಅಭಿಪ್ರಾಯ ಇಡಲಾಗುವುದು. ಅಲ್ಲಿನ ನಿರ್ಣಯವನ್ನು ದೆಹಲಿಗೆ ಕಳುಹಿಸಲಾಗುವುದು. ರಾಷ್ಟ್ರೀಯ ಅಧ್ಯಕ್ಷರು, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಅಂತಿಮವಾಗಿ ತೀರ್ಮಾನ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಮೈತ್ರಿ ಬಗ್ಗೆ ಯಾವುದೇ ಗೊಂದಲವಿಲ್ಲದಿದ್ದರೂ, ರಾಜ್ಯದಲ್ಲಿ ಎರಡೂ ಪಕ್ಷಗಳ ವಾತಾವರಣ ತಿಳಿಯಾಗಬೇಕು. ಮೈತ್ರಿಗೆ ತಕ್ಕಂತೆ ಅವಕಾಶಗಳನ್ನು ಕಲ್ಪಿಸಬೇಕು. ಅದು ಬಿಟ್ಟು ಇವರೇ ಮುಖ್ಯಮಂತ್ರಿಯಾಗುತ್ತಾರೆ ಎಂದು ಘೋಷಿಸುವಂತಿಲ್ಲ. ಆದರೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಹೆಚ್.ಡಿ. ಕುಮಾರಸ್ವಾಮಿಯವರೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಮಾಡುತ್ತಿರುವುದನ್ನು ವಿರೋಧಿಸಿದರು.

ನಮ್ಮಲ್ಲಿ ಯಾವುದೇ ಕಾರಣಕ್ಕೂ ಯಾರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸುವುದಿಲ್ಲ. ಅಂತಿಮವಾಗಿ ವರಿಷ್ಠರು ತೀರ್ಮಾನಿಸುತ್ತಾರೆ. ಅದಕ್ಕೆ ಬದ್ಧರಾಗಬೇಕು. ಅದು ಬಿಟ್ಟು ಮೊದಲೇ ಇವರೇ ಸಿಎಂ, ಅವರೇ ಸಿಎಂ ಎನ್ನುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಸಚಿವ ಕೆ.ಸಿ.ನಾರಾಣಗೌಡ ಮಾತನಾಡಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಬಾಯಿಗೆ ಬಂದಂತೆ ಮಾತನಾಡುತ್ತಿರುವುದನ್ನು ನೋಡಿದ್ದೇವೆ. ಅವರು ಮೊದಲು ದೊಡ್ಡ ನಾಯಕರ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಬಿಡಬೇಕು. ನಾವೂ ಸಹ ಮಾತನಾಡಬಹುದು. ಆದರೆ ಪಕ್ಷದ ಗೌರವಕ್ಕೆ ಚ್ಯುತಿ ಬರುತ್ತದೆ ಎಂಬ ಕಾರಣಕ್ಕೆ ಸುಮ್ಮನಿದ್ದೇವೆ ಎಂದು ಆರೋಪಿಸಿದರು.

ಕೆ.ಆರ್.ಪೇಟೆ ಶಾಸಕರು ನಮ್ಮ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ಕೇಂದ್ರದ ವರಿಷ್ಠರು ಸೂಚಿಸಿದ್ದರು. ಅದನ್ನು ನಾವು ಪಾಲಿಸಿದ್ದೇವೆ. ಆದರೆ ಅವರು ನಮ್ಮ ಕಾರ್ಯಕರ್ತರು ಹೋದರೆ ಹಾರ, ಶಾಲು ಹಾಕಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದಾರೆ. ಶಾಸಕರಿಗೆ ಇದು ಶೋಭೆ ತರುವುದಿಲ್ಲ ಎಂದು ಎಚ್ಚರಿಸಿದರು.

ಬಿಜೆಪಿ ಅಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಲಕ್ಷ್ಮಿ ಅಶ್ವಿನ್‌ಗೌಡ, ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ಎಸ್.ಪಿ.ಸ್ವಾಮಿ, ಅಶೋಕ್ ಕುಮಾರ್ ಸೇರಿದಂತೆ ಇತರರಿದ್ದರು.

ಗುತ್ತಿಗೆದಾರರಿಗೆ ಹಣ ಪಾವತಿಸದ ಅರಣ್ಯ ಇಲಾಖೆ ಕಚೇರಿ ಜಪ್ತಿ

ಮಂಡ್ಯ, ಫೆ.4– ನಿಗದಿತ ಅರಣ್ಯ ಪ್ರದೇಶಗಳಿಗೆ ತಂತಿ ಬೇಲಿ ಹಾಕಿದ ಗುತ್ತಿಗೆದಾರರ ಹಣ ಪಾವತಿಸದ ಹಿನ್ನೆಲೆಯಲ್ಲಿ ನ್ಯಾಯಾಲಯ ಅರಣ್ಯ ಇಲಾಖೆ ಕಚೇರಿ ಜಪ್ತಿಗೆ ಆದೇಶ ನೀಡಿದ್ದು, ಅದರಂತೆ ನ್ಯಾಯಾಲಯದ ಸಿಬ್ಬಂದಿಗಳ ನೇತೃತ್ವದಲ್ಲಿ ಜಪ್ತಿ ಮಾಡಲಾಯಿತು.

2022–23ನೇ ಸಾಲಿನಲ್ಲಿ ಗುತ್ತಿಗೆದಾರರಾದ ನಾಗಮಂಗಲ ತಾಲೂಕಿನ ಮಲ್ಲೇಗೌಡನಹಳ್ಳಿಯ ಎಂ.ವೈ.ಸುರೇಶ್ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಗೌಡಹಳ್ಳಿ ಗ್ರಾಮದ ಜಿ.ಎನ್.ರಾಜಣ್ಣ ಅವರಿಗೆ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ತಂತಿಬೇಲಿ(ಪೆನ್ಸಿಂಗ್) ಅಳವಡಿಸಲು ಟೆಂಡರ್ ನೀಡಲಾಗಿತ್ತು.

ಅದರಂತೆ ಗುತ್ತಿಗೆದಾರ ಎಂ.ವೈ. ಸುರೇಶ್, ಪಾಂಡವಪುರ, ಮಂಡ್ಯ, ನಾಗಮಂಗಲ ವ್ಯಾಪ್ತಿಯ 39 ಕಿಮೀ ಅರಣ್ಯ ಪ್ರದೇಶಕ್ಕೆ ತಂತಿಬೇಲಿ ಅಳವಡಿಸಿದ್ದರು. ಮತ್ತೊಬ್ಬ ಗುತ್ತಿಗೆದಾರ ಜಿ.ಎನ್.ರಾಜಣ್ಣ ಮೇಳಾಪುರ, ಕರಿಘಟ್ಟ, ದೊಡ್ಡಬೆಟ್ಟದ ಅರಣ್ಯ ಪ್ರದೇಶಗಳ 12 ಕಿಮೀ ವ್ಯಾಪ್ತಿಗೆ ತಂತಿಬೇಲಿ ಅಳವಡಿಸಿದ್ದರು. ಆದರೆ ಇದುವರೆಗೂ ಅರಣ್ಯ ಇಲಾಖೆ ಟೆಂಡರ್ ಹಣ ಎಂ.ವೈ.ಸುರೇಶ್‌ಗೆ 2.52 ಕೋಟಿ ರೂ. ಹಾಗೂ ಜಿ.ಎನ್.ರಾಜಣ್ಣಗೆ 64.52 ಲಕ್ಷ ರೂ. ಪಾವತಿಸಿರಲಿಲ್ಲ.

ಇದರಿಂದ ಇಬ್ಬರೂ ಗುತ್ತಿಗೆದಾರರು ಮಂಡ್ಯ ನಗರದ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ 3 ಪ್ರಕರಣ ದಾಖಲಿಸಿದ್ದರು. ಅದರಂತೆ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯ ಮಂಗಳವಾರ ಅರಣ್ಯ ಇಲಾಖೆ ಉಪ ವಲಯ ಅರಣ್ಯಾಧಿಕಾರಿ ಕಚೇರಿ ಜಪ್ತಿಗೆ ಆದೇಶ ನೀಡಿತ್ತು. ಅದರಂತೆ ಬುಧವಾರ ಗುತ್ತಿಗೆದಾರರೊಂದಿಗೆ ಆಗಮಿಸಿದ ನ್ಯಾಯಾಲಯದ ಸಿಬ್ಬಂದಿ ಹಾಗೂ ವಕೀಲರು ಆದೇಶ ಪ್ರತಿಯೊಂದಿಗೆ ಕಚೇರಿಗೆ ಆಗಮಿಸಿ ಪೀಠೋಪಕರಣ, ಕಂಪ್ಯೂಟರ್‌ಗಳನ್ನು ಜಪ್ತಿ ಮಾಡಿದರು.

ಕಳೆದ 3 ವರ್ಷಗಳಿಂದ ಇಬ್ಬರು ಗುತ್ತಿಗೆ ದಾರರು ಹಣಕ್ಕಾಗಿ ಅರಣ್ಯ ಇಲಾಖೆಯ ಕಚೇರಿ ಸುತ್ತಿದ್ದರೂ ಅಧಿಕಾರಿಗಳು ಸ್ಪಂದಿಸಿರಲಿಲ್ಲ. ಇದರಿಂದ ಬೇಸತ್ತು ಇಬ್ಬರೂ ನ್ಯಾಯಾಲಯ ಮೆಟ್ಟಿಲೇರಿದ್ದರು. ನ್ಯಾಯಾಲಯದ ಆದೇಶ ಇದ್ದರೂ ಅಧಿಕಾರಿಗಳು ಸ್ಪಂದಿಸದೆ ಉದ್ಧಟತನ ತೋರಿದ್ದರು. ಅದರಂತೆ ನ್ಯಾಯಾಲಯ ಕಚೇರಿ ಜಪ್ತಿಗೆ ಆದೇಶ ಹೊರಡಿಸಿತ್ತು.

ಪುರುಷೋತ್ತಮ್ ನಿಧನ



ಶ್ರೀರಂಗಪಟ್ಟಣ, ಫೆ.4– ಕೊ.ನಾ.ಪು ಎಂದೇ ಪ್ರಸಿದ್ಧರಾಗಿದ್ದ ಕವಿ, ಶಿಕ್ಷಕ ಕೋನಾ ಪುರುಷೋತ್ತಮ್ (57) ಬುಧವಾರ ನಿಧನರಾದರು. ಮೃತರು ಪತ್ನಿ ಪೂರ್ಣಿಮಾ.ಆರ್, ಮಕ್ಕಳಾದ ಕೆ.ಪಿ.ವಿಜಯಕುಮಾರ್ ಹಾಗೂ ಕೆ.ಪಿ.ಅನನ್ಯ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ತಾಲೂಕಿನ ಅರಕೆರೆ ಗ್ರಾಮದಲ್ಲಿ ಸಂಜೆ ಅಂತ್ಯ ಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಪ್ಪನ ಬೆಟ್ಟದಲ್ಲಿ ಮಹಾ ಶಿವರಾತ್ರಿ ಜಾತ್ರೆಗೆ ಸಿದ್ಧತೆ

ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿಯಿಂದ ಪರಿಶೀಲನೆ

ಜಾತ್ರೆಗೆ ಆಗಮಿಸುವ ಲಕ್ಷಾಂತರ ಭಕ್ತರಿಗೆ ಸೌಲಭ್ಯ ಕಲ್ಪಿಸಲು ಕ್ರಮ

ಹನೂರು, ಫೆ.4– ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಫೆ.14ರಿಂದ 18ರವರೆಗೆ ನಡೆಯುವ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ಪ್ರಯುಕ್ತ ಮಾಸ್ಟರ್ ಪ್ಲಾನ್ ಆವರಣದಲ್ಲಿ ನಡೆಯುತ್ತಿರುವ ಸಿದ್ಧತೆಗಳನ್ನು ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು, ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ 5 ದಿನಗಳ ಕಾಲ ನಡೆಯಲಿರುವ ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಪಾದಯಾತ್ರೆ ಹಾಗೂ ವಾಹನಗಳ ಮೂಲಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ನೆರೆಯ ತಮಿಳುನಾಡು ರಾಜ್ಯ ದಿಂದ 10 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇರುವುದರಿಂದ ಜಾತ್ರೆಗೂ ಹತ್ತು ದಿನಗಳ ಮುನ್ನ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.



ಮಹಾಶಿವರಾತ್ರಿ ಜಾತ್ರಾ ಸಿದ್ಧತೆಗಳನ್ನು ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ಪರಿಶೀಲಿಸಿದರು.

ಪ್ಲಾಸ್ಟಿಕ್ ನಿಷೇಧ: ಬೆಟ್ಟಕ್ಕೆ ಪಾದಯಾತ್ರೆ ಮೂಲಕ ಬರುವ ಭಕ್ತಾದಿಗಳಿಗೆ ದಾನಿಗಳು ಪ್ಲಾಸ್ಟಿಕ್ ಬಾಟಲ್ ನೀರು, ಹಣ್ಣು, ಜ್ಯೂಸ್ ವಿತರಿಸುತ್ತಿದ್ದಾರೆ. ಪ್ರಸ್ತುತ ಶಿವರಾತ್ರಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ತಾಳುಬೆಟ್ಟದಿಂದ ಬೆಟ್ಟದವರೆಗೆ ಪ್ಲಾಸ್ಟಿಕ್ ನೀರಿನ ಬಾಟಲ್ ವಿತರಿಸುವುದನ್ನು ನಿರ್ಬಂಧಿಸಲಾಗಿದೆ. ಈಗಾಗಲೇ ತಾಳುಬೆಟ್ಟದಲ್ಲಿ ತೆರೆದಿರುವ ಚೆಕ್‌ಪೋಸ್ಟ್‌ನಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲ್ ತರುವ ವಾಹನಗಳನ್ನು ತಡೆಯಲು ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ. ಭಕ್ತರು ಪ್ಲಾಸ್ಟಿಕ್ ಬಳಕೆ ಮಾಡದೆ ಪ್ಲಾಸ್ಟಿಕ್ ಮುಕ್ತ ಮಹದೇಶ್ವರ ಬೆಟ್ಟ ಮಾಡಲು ಸಹಕಾರ ನೀಡಬೇಕು ಎಂದು ಪ್ರಾಧಿಕಾರದ ಕಾರ್ಯದರ್ಶಿಗಳು ಮನವಿ ಮಾಡಿದ್ದಾರೆ.


ಪಾದಯಾತ್ರಿಕರಿಗೆ ಪ್ರತ್ಯೇಕ ಕ್ಯೂ: ಬೆಟ್ಟಕ್ಕೆ ಕನಕಪುರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ತಮಿಳು ನಾಡಿನಿಂದ ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ಆಗಮಿಸುವುದು ವಿಶೇಷ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಕಚೇರಿ ಸಮೀಪದ ಅರಳಿ ಮರದ ಮುಂಭಾಗದಿಂದ ಪ್ರತ್ಯೇಕ ಕ್ಯೂ ಲೈನ್ ನಿರ್ಮಾಣ ಮಾಡಿ ರಾಜಗೋಪುರ ಮುಖ್ಯದ್ವಾರ ಹಾಗೂ 250 ಟಿಕೆಟ್ ಕೌಂಟರ್ ಮೂಲಕ ಉಚಿತ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ: ಪಾದಯಾತ್ರೆ ಮೂಲಕ ಶ್ರೀಕ್ಷೇತ್ರಕ್ಕೆ ಬರುವ ಭಕ್ತಾದಿಗಳು ವಿಶ್ರಾಂತಿ ತೆಗೆದು ಕೊಳ್ಳಲು ರಾಜಗೋಪುರದ ಬಲ ಭಾಗದಲ್ಲಿ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ. ಈಗಾಗಲೇ ಸ್ವಚ್ಛತಾ ಕಾರ್ಯಗಳು ಪೂರ್ಣಗೊಂಡಿದ್ದು, ಶುದ್ಧ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ. ಅಲ್ಲದೆ ಮಲೆ ಮಹದೇಶ್ವರ ಸ್ವಾಮಿ ದರ್ಶನ ಪಡೆಯಲು ಬರುವ ಭಕ್ತಾದಿಗಳಿಗೂ ಪ್ರತಿ ಗೇಟ್‌ನಲ್ಲಿಯೂ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ.

> ಬೆಟ್ಟಕ್ಕೆ ಪಾದಯಾತ್ರೆ ಮೂಲಕ ತೆರಳುತ್ತಿದ್ದ ಭಕ್ತನ ಮೇಲೆ ಕಳೆದ ತಿಂಗಳು ಚಿರತೆ ದಾಳಿ ಮಾಡಿದ ಪರಿಣಾಮ ಸಾವನ್ನಪ್ಪಿದ್ದರು. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪಾದಯಾತ್ರೆ ಮೂಲಕ ಬರುವ ಭಕ್ತಾದಿಗಳ ಸುರಕ್ಷತೆ ದೃಷ್ಟಿಯಿಂದ ಪ್ರಾಧಿಕಾರದಿಂದ ತಾಳುಬೆಟ್ಟದಿಂದ ಬೆಟ್ಟದವರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಜೊತೆಗೆ 50 ಗೃಹ ರಕ್ಷಕದಳದ ಸಿಬ್ಬಂದಿ ನಿಯೋಜಿಸಲಾಗಿದೆ.
> – ಎ.ಈ.ರಘು, ಕಾರ್ಯದರ್ಶಿ, ಮಲೆ ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರ.

ತುರ್ತು ಚಿಕಿತ್ಸೆ ಕೇಂದ್ರ ಪ್ರಾರಂಭ: ತುರ್ತು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಿ ಚಿಕಿತ್ಸೆ ನೀಡಲು ಕ್ರಮ ವಹಿಸಲಾಗಿದೆ. ಅಲ್ಲದೆ ವಿಶೇಷವಾಗಿ ವಿಶ್ರಾಂತಿ ಪಡೆಯುವ ಭಕ್ತಾದಿಗಳಿಗೆ ಪ್ರಾಧಿಕಾರದಿಂದ ಬಿಸಿಬೇಳೆ ಬಾತ್ ಹಾಗೂ ಮೊಸರನ್ನ ವಿತರಿಸಲು ಕ್ರಮ ವಹಿಸಲಾಗಿದೆ. ತಾಳುಬೆಟ್ಟದಿಂದ ಬೆಟ್ಟದವರೆಗೆ 15 ಕಡೆ ಕುಡಿಯುವ ನೀರಿನ ಟ್ಯಾಂಕ್ ಇಟ್ಟು ನೀರು ಪೂರೈಕೆ ಮಾಡಲಾಗುತ್ತಿದೆ. ಮೊಬೈಲ್ ಶೌಚಾಲಯ ನಿರ್ಮಾಣ ಮಾಡಲು ಅರಣ್ಯ ಇಲಾಖೆ ಅನುಮತಿಗಾಗಿ ಪತ್ರ ಬರೆಯಲಾಗಿದೆ. ಅನುಮತಿ ಸಿಕ್ಕ ನಂತರ ಆನೆ ತಲೆದಿಂಬ, ರಂಗಸ್ವಾಮಿ ಒಡ್ಡು ಹಾಗೂ ತಾಳಬೆಟ್ಟ ತಿರುವಿನಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ 6 ಮೊಬೈಲ್ ಶೌಚಾಲಯ ಪ್ರಾರಂಭಿಸಲು ಕ್ರಮ ವಹಿಸಲಾಗಿದೆ.

ಎಂ.ಮಹದೇವಚಾರ್ ನಿಧನ



ಯಳಂದೂರು, ಫೆ.4– ಪಟ್ಟಣದ ನಿವೃತ್ತ ಶಿಕ್ಷಕ ಎಂ.ಮಹದೇವಚಾರ್ (97) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪತ್ರಕರ್ತ ವೈ.ಎಂ. ಭಾನುಪ್ರಕಾಶ್ ಸೇರಿದಂತೆ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಪಟ್ಟಣದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿವಿಧ ಆಸಕ್ತಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿ

ಡಿವೈಎಸ್ಪಿ ಸ್ನೇಹರಾಜ್ ಸಲಹೆ

ಚಾಮರಾಜನಗರ, ಫೆ.4– ಬಾಲ್ಯದಿಂದಲೂ ಉತ್ತಮ ಕಥೆ ಪುಸ್ತಕಗಳನ್ನು ಅಧ್ಯಯನ ಮಾಡಿ ಸಮಗ್ರ ವಿಕಾಸಕ್ಕೆ ಬುನಾದಿ ಹಾಕಿಕೊಳ್ಳಬೇಕು. ಶಿಕ್ಷಣ, ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ ಸೇರಿದಂತೆ ವಿವಿಧ ಆಸಕ್ತಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು ಎಂದು ಡಿವೈಎಸ್ಪಿ ಸ್ನೇಹರಾಜ್ ತಿಳಿಸಿದರು.



ಕಾರ್ಯಕ್ರಮವನ್ನು ಡಿವೈಎಸ್ಪಿ ಸ್ನೇಹರಾಜ್ ಉದ್ಘಾಟಿಸಿದರು.

ಯೂತ್ ಫಾರ್ ಸೇವಾ ಸಂಸ್ಥೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಚಿಗುರು 2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಾಧನೆ ಮಾಡಿರುವ ಎಲ್ಲರಿಗೂ ಬಾಲ್ಯದ ನೆನಪು ಸದಾ ಅಮರವಾಗಿರುತ್ತದೆ. ತಂದೆ-ತಾಯಿ, ಶಿಕ್ಷಕರು ಮತ್ತು ಸಂಘ ಸಂಸ್ಥೆಗಳು ಪ್ರೋತ್ಸಾಹ ನೀಡಿದಾಗ ಮಕ್ಕಳು ವಿಕಾಸವಾಗಿ ಬೆಳವಣಿಗೆಗೆ ಸಹಾಯಕವಾಗುತ್ತದೆ. ನೂರಾರು ಉತ್ತಮ ಕಥೆ ಪುಸ್ತಕಗಳಿದ್ದು ಅವುಗಳನ್ನು ಸಂಗ್ರಹಿಸಿ ಓದಬೇಕು. ಪೋಷಕರು ಪುಸ್ತಕಗಳನ್ನು ತಾವು ಓದಿ ಮಕ್ಕಳು ಓದುವಂತೆ ಮಾಡುವುದು ಬಹಳ ಒಳ್ಳೆಯದು. ಪುಸ್ತಕಗಳಿಂದ ಬಹಳಷ್ಟು ವಿದ್ಯಾರ್ಥಿಗಳು ಪ್ರೇರಕರಾಗಿ, ಸ್ವ ಅಧ್ಯಯನದಿಂದ ಉನ್ನತ ಸಾಧನೆ ಮಾಡಬಹುದು. ಕಲಿಕೆಗೆ ಆಸಕ್ತಿಯನ್ನು ಪುಸ್ತಕಗಳು ಹೆಚ್ಚಿಸುತ್ತದೆ. ಸರ್ಕಾರಿ ಶಾಲೆಯ ಸಾವಿರಾರು ವಿದ್ಯಾರ್ಥಿಗಳನ್ನು ವಿವಿಧ 15ಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಸ್ಫೂರ್ತಿ ತುಂಬಿರುವ ಯೂತ್ ಫಾರ್ ಸೇವಾ ಸಂಸ್ಥೆ ಉತ್ತಮ ಕಾರ್ಯ ಮಾಡಿದೆ ಎಂದರು.

ಉದ್ಯಮಿ ವೆಂಕಟ ನಾಗಪ್ಪಶೆಟ್ಟಿ, ರಾಷ್ಟ್ರೀಯ ಯುವ ಪ್ರಶಸ್ತಿ ಪುರಸ್ಕೃತ ಸುರೇಶ್ ಎನ್.ಋಗ್ವೇದಿ, ಸ್ತ್ರೀರೋಗ ತಜ್ಞ ಡಾ. ಶ್ವೇತಾ ಶಶಿಧರ್, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ 2016 ಸರ್ಕಾರದ ಮಾಜಿ ರಾಜ್ಯ ಆಯುಕ್ತ ಕೆ.ವಿ. ರಾಜಣ್ಣ ಮಾತನಾಡಿದರು. ರಾಘವೇಂದ್ರ, ಸೇವಾ ಸಂಸ್ಥೆ ಬೆಳೆದು ಬಂದ ಹಾದಿ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಚಟುವಟಿಕೆಗಳ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಗುರುಪ್ರಸಾದ್, ಯೂತ್ ಫಾರ್ ಸೇವಾ ಸಂಸ್ಥೆ ವಿಷ್ಣು, ತೇಜನಾಯಕ್, ಡಾ.ಕಾರ್ತಿಕ್ ಉಪಸ್ಥಿತರಿದ್ದರು.

ಸುಳ್ವಾಡಿ ಪ್ರಕರಣ: ಮೂವರ ಜಾಮೀನು ಅರ್ಜಿ ತಿರಸ್ಕೃತ

ಚಾಮರಾಜನಗರ, ಫೆ.4– ಜಿಲ್ಲೆಯ ಹನೂರು ತಾಲೂಕಿನ ಸುಳ್ವಾಡಿ ಗ್ರಾಮದ ಕಿಚ್ಚುಗುತ್ತಿ ಮಾರಮ್ಮನ ದೇವಸ್ಥಾನದಲ್ಲಿ ನಡೆದ ವಿಷಪ್ರಸಾದ ದುರಂತ ಪ್ರಕರಣದಲ್ಲಿ ಬಂಧಿತರಾಗಿರುವ ಮೂವರು ಆರೋಪಿಗಳ ಜಾಮೀನು ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿದೆ.







ವಿಷಪ್ರಸಾದ ದುರಂತದಲ್ಲಿ 17 ಮಂದಿ ಮೃತಪಟ್ಟ ಪ್ರಕರಣದಲ್ಲಿ ಕಳೆದ 7 ವರ್ಷಗಳಿಂದಲೂ ಜೈಲಿನಲ್ಲಿರುವ ಆರೋಪಿಗಳಾದ ಮಾದೇಶ, ಅಂಬಿಕಾ ಹಾಗೂ ದೊಡ್ಡಯ್ಯ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಜಾಮೀನು ಅರ್ಜಿ ಪರಿಶೀಲಿಸಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಆದೇಶ ಹೊರಡಿಸಿದ್ದಾರೆ.

2018ರ ಡಿ.14ರಂದು ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮನ ದೇವಸ್ಥಾನದಲ್ಲಿ ನಡೆದ ವಿಷಪ್ರಸಾದ ದುರಂತದಲ್ಲಿ 17 ಭಕ್ತರು ಮೃತಪಟ್ಟು, 117ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದರು. ದೇಗುಲದ ಆಡಳಿತ ಮಂಡಳಿ ಅಧಿಕಾರ ಹಿಡಿಯುವ ಸಲುವಾಗಿ ಒಂದು ಬಣದವರ ವಿಷಕಾರಿ ಸಂಚಿನಿಂದ ಘಟನೆ ನಡೆದಿತ್ತು.

ಸಾಲೂರು ಮಠದ ಅಂದಿನ ಕಿರಿಯ ಸ್ವಾಮೀಜಿ ಇಮ್ಮಡಿ ಮಹದೇವ ಸ್ವಾಮಿ, ಮಾದೇಶ, ಅಂಬಿಕಾ ಹಾಗೂ ದೊಡ್ಡಯ್ಯನನ್ನು ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿ ದೋಷಾರೋಪಪಟ್ಟಿ ಸಲ್ಲಿಸಲಾಗಿತ್ತು. ಗಂಭೀರ ಅನಾರೋಗ್ಯದ ಕಾರಣ ಪ್ರಮುಖ ಆರೋಪಿ ಇಮ್ಮಡಿ ಮಹದೇವಸ್ವಾಮಿಗೆ 2025ರ ನ.12ರಂದು. ಹೈಕೋರ್ಟ್ ಷರತ್ತು ಬದ್ಧ ಜಾಮೀನು ಮಂಜೂರು ಮಾಡಿತ್ತು. ಅದರ ಬೆನ್ನಲ್ಲೇ ಉಳಿದ ಆರೋಪಿಗಳು ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದರು. ಪ್ರಸ್ತುತ ಅರ್ಜಿಯನ್ನು ನ್ಯಾಯಾಲಯ ತಿರಸ್ಕೃತಗೊಳಿಸಿ ಆದೇಶ ಹೊರಡಿಸಿದೆ.

ಅಪಾರ್ಟ್‌ಮೆಂಟ್‌ನ 9ನೇ ಮಹಡಿಯಿಂದ ಹಾರಿ ಮೂವರು ಸೋದರಿಯರು ಆತ್ಮಹತ್ಯೆ



ಗಾಜಿಯಾಬಾದ್: ಇಂದು ಬುಧವಾರ ಮುಂಜಾನೆ ಗಾಜಿಯಾಬಾದ್‌ನಲ್ಲಿ ಒಂಬತ್ತನೇ ಮಹಡಿಯ ಫ್ಲಾಟ್‌ನ ಬಾಲ್ಕನಿಯಿಂದ ಹಾರಿ ಮೂವರು ಅಪ್ರಾಪ್ತ ಸಹೋದರಿಯರು ಮೃತಪಟ್ಟಿರುವ ದುರ್ಘಟನೆ ನಡೆದಿದೆ.

ಟೀಲಾ ಮೋರ್ ಪೊಲೀಸ್ ಠಾಣೆ ವ್ಯಾಪ್ತಿಯ ಭಾರತ್ ಸಿಟಿಯ ಟವರ್‌ನಲ್ಲಿರುವ ಒಂಬತ್ತನೇ ಮಹಡಿಯ ಅಪಾರ್ಟ್‌ಮೆಂಟ್‌ನ ಬಾಲ್ಕನಿಯಿಂದ ಮೂವರು ಸೋದರಿಯರು ಹಾರಿರುವ ಬಗ್ಗೆ ನಸುಕಿನ ಜಾವ 2.15 ರ ಸುಮಾರಿಗೆ ಪೊಲೀಸರಿಗೆ ಮಾಹಿತಿ ಸಿಕ್ಕಿದೆ ಎಂದು ಸಹಾಯಕ ಪೊಲೀಸ್ ಆಯುಕ್ತ (ಶಾಲಿಮಾರ್ ಗಾರ್ಡನ್) ಅತುಲ್ ಕುಮಾರ್ ಸಿಂಗ್ ಹೇಳಿದ್ದಾರೆ.

ಪೊಲೀಸರು ಸ್ಥಳಕ್ಕೆ ಆಗಮಿಸಿ ನೋಡಿದಾಗ ಚೇತನ್ ಕುಮಾರ್ ಎಂಬುವವರ ಪುತ್ರಿಯರಾದ ನಿಶಿಕಾ (16ವ), ಪ್ರಾಚಿ (14ವ) ಮತ್ತು ಪಖಿ (12ವ) ಎಂಬುವವರು ನೆಲ ಮಹಡಿಗೆ ಬಿದ್ದು ಮಾರಣಾಂತಿಕವಾಗಿ ಗಾಯಗೊಂಡಿದ್ದರು.

ಆಂಬುಲೆನ್ಸ್ ಮೂಲಕ ಲೋನಿಯ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟರಲ್ಲಾಗಲೇ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು.

ಪೊಲೀಸರು ಸ್ಥಳದಿಂದ ಡೆತ್ ನೋಟ್ ವಶಪಡಿಸಿಕೊಂಡಿದ್ದಾರೆ, ಅದರಲ್ಲಿ "ಮಮ್ಮಿ, ಅಪ್ಪಾ, ಕ್ಷಮಿಸಿ. ನಾವು ಚಟ ಬಿಡಬೇಕೆಂದು ನೀವು ಹೇಳುತ್ತಿದ್ದ ಆನ್ ಲೈನ್ ಗೇಮನ್ನು ನಾವು ಎಷ್ಟು ಪ್ರೀತಿಸುತ್ತಿದ್ದೆವು ಎಂದು ನಿಮಗೆ ಈಗ ಅರಿವಾಗುತ್ತದೆ" ಎಂದು ಬರೆಯಲಾಗಿದೆ.

'ಈಸ್ ಡೈರಿ ಮೇ ಜೋ ಕುಚ್ ಭಿ ಲಿಖಾ ಹೈ ವೋ ಸಬ್ ಪಧ್ ಲೋ ಕ್ಯೂಂಕಿ ಯೇ ಸಬ್ ಸಚ್ ಹೈ. (ಈ ಡೈರಿಯಲ್ಲಿ ಬರೆದಿರುವ ಎಲ್ಲವನ್ನೂ ಓದಿ ಏಕೆಂದರೆ ಇದು ಸತ್ಯ)' ಎಂದು ಬರೆದಿದ್ದಾರೆ.

ಆನ್‌ಲೈನ್ ಕೊರಿಯನ್ ಗೇಮ್ಸ್ ವ್ಯಸನಕ್ಕೆ ಸೋದರಿಯರು ಸಿಕ್ಕಿಹಾಕಿಕೊಂಡಿದ್ದರು ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ. ಕೊರಿಯನ್ ಆನ್‌ಲೈನ್ ಗೇಮ್ಸ್ ಆದ 'ಲವ್ ಗೇಮ್'ಗೆ ವ್ಯಸನಿಯಾಗಿದ್ದರು ಪೋಷಕರು ಅವರ ಅತಿಂಯಾದ ಆಟಕ್ಕೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ ಎಂದು ಸಹಾಯಕ ಪೊಲೀಸ್ ಆಯುಕ್ತ (ಶಾಲಿಮಾರ್ ಗಾರ್ಡನ್) ಅತುಲ್ ಕುಮಾರ್ ಸಿಂಗ್ ಹೇಳಿದ್ದಾರೆ.

ಮತಯಾಚನೆ....



ಮೈಸೂರು ಜಿಲ್ಲಾ ಹಾಪ್ ಕಾಮ್ಸ್ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಿರುವ ಕೆ.ಆರ್.ನಗರ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿ ಸಂಜಯ್ ಪರ ಮಿರ್ಲೆ ಅಣ್ಣೇಗೌಡರ ನೇತೃತ್ವದಲ್ಲಿ ಮತಯಾಚಿಸಲಾಯಿತು. ಈ ವೇಳೆ ಗಣೇಶ್, ದೀಪು ಇನ್ನಿತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಆಫ್‌ಸೆಟ್ ಮೆಷಿನ್ ಮತ್ತು ಆಟೋಮೆಟಿಕ್ ಕಟಿಂಗ್ ಮೆಷಿನ್‌ಗಳಲ್ಲಿ ಅನುಭವವುಳ್ಳ ಹಾಗೂ ಸಹಾಯಕ ಹುಡುಗರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570001
9902639593

HOUSE FOR SALE
4 BHK, 30'x40' W/F SITE with Car Parking & Yoga Hall Constructed on the 2nd Floor, Good Ventilation at 398, 'I' Block, Ramakrishna Nagar
Genuine Buyers may Contact: +91 63628 27035 / 88924 50077

BEFORE DRILLNG BOREWELL CONTACT
GROUND WATER CONSULTANT
ಸಿ.ಟಿ. ಚಂದ್ರಶೇಖರ್ ಭೂ ವಿಜ್ಞಾನಿ
9448389090

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.
Teju Electronics, ಅಗ್ರಹಾರ
Mob: 9342114069

MUDA SITE FOR SALE
ಜೆ.ಪಿ.ನಗರ ರಿಂಗ್ ರಸ್ತೆ ಹತ್ತಿರ "ನಂಜುಂಡೇಶ್ವರ ಲೇಔಟ್"ನಲ್ಲಿ 47x50 ಅಳತೆ ಕಾರ್ನರ್ ಸೈಟ್.
Mob: 9886048471

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

ಮನೆ ಭೋಗ್ಯಕ್ಕೆ ಬೇಕಾಗಿದೆ
30x40 ಇಂಡಿಪೆಂಡೆಂಟ್ ಮನೆ, ಹೆಬ್ಬಾಳ್, ವಿಜಯನಗರ 2ನೇ ಹಂತ, ಗೋಕುಲಂನಲ್ಲಿ ಬೇಕಾಗಿದೆ
6364795551

ಹೊಸ ಮನೆ ಮಾರಾಟಕ್ಕಿದೆ
20x28' - 3BHK - E/F ಲಲಿತಾದ್ರಿನಗರ (ಬಾಲಾಜಿ ಲೇಔಟ್) 68 ಲಕ್ಷಕ್ಕೆ (Neg) ಮಾರಾಟಕ್ಕಿದೆ.
9480222708
7760065890

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
PGಯಲ್ಲಿ ಅಡುಗೆ ಸಹಾಯಕಿ ಹಾಗು ವಾರ್ಡನ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PGಯಲ್ಲೇ ಉಳಿಯಬೇಕು. ಊಟ ವಸತಿ ಇರುತ್ತದೆ. ಸಂಪರ್ಕಿಸಿ
9900944982

30x50 Site for Sale
East Facing, MUDA Approved Site, Dattagalli, Mysuru
Near Kadamba Bakery
8660105902

New House For Sale
GF 2 BHK, FF 2 BHK, 25x40, E/F Corner, 40ft Road, MUDA App, Near Park Nithyanananda Sagara Layout, Mysuru, 1.15 Cr
Near St Joseph School Hunsur Road
8660105902

Wanted Legal Document Assistant
For a Reputed Real Estate Company for processing documents at respective Government or private offices
82178 93849

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
30x40 West facing site for sale in J Cube Palacia near Manipal Hospital, attached to Ring Road.
Price: 6500 / sq.ft.
Call: 88846 16461

ತಕ್ಷಣ ಬೇಕಾಗಿದ್ದಾರೆ
ಟ್ರಕ್ ಡ್ರೈವರ್‌ಗಳು ಬೇಕಾಗಿದ್ದಾರೆ (32 ಅಡಿ ಸಿಂಗಲ್ ಎಕ್ಸ್‌ಎಲ್ ಕಂಟೈನರ್). ಕ್ಯಾಂಟೀನ್, ಪಿಎಫ್ ಮತ್ತು ಇಎಸ್‌ಐ ದೊರೆಯುತ್ತದೆ. ಸಂಪರ್ಕಿಸಿ:
Mob: 93416 23350

MUDA Approved SITE FOR SALE
In Hebbal Infosys 7 acres J.V. land sites in 40x60, N/F & 30x40, 30x50, E/N facing sq.ft. 3300 per sq.ft. ready for registration & E-Khatha also ready, cab also arranged to see the sites.
Mob: 93801 42389

WANTED
Our food manufacturing company Earth Oven is looking for an **Accountant come Production Manager.** Experienced staffs with talent is preferable. Contact:
Mob: 96116 90101

Free Seminar in Mandya
Are you Pre-School Teacher / Centre Head / Owner. Then this is for you !
Date: 7th Feb, 2026
For details and registration. Contact:
Mob: 94482 63927

ತಕ್ಷಣ ಬೇಕಾಗಿದ್ದಾರೆ
PUC/ ಡಿಪ್ಲೋಮಾ / ಯಾವುದೇ ಪದವಿ ಹೊಂದಿರುವ, 20-25 ವರ್ಷ ವಯಸ್ಸಿನ ಹಾಗೂ ಉತ್ತಮ ಕೌಶಲ್ಯ ಇರುವ ಮಾರುಕಟ್ಟೆ ಕಾರ್ಯನಿರ್ವಾಹಕರು (2 ಹುದ್ದೆಗಳು) ಮತ್ತು PUC ಕಾಲೇಜಿಗೆ ಕಚೇರಿ ಸಹಾಯಕರು (2 ಹುದ್ದೆಗಳು), ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ
9108982242

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

HOUSE FOR SALE
30x40 S/F GF 1st & 2nd Total 5BHK Vidyaranyapuram (Agent-Excuse)
9731188861

WANTED
LUXURLY FLATS of 3/4 BHK for rent- in Jayalakshmi puram/Vontikoppal
9164567246

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, ಸಂಬಳ : 18000
ಊಟ, ತಿಂಡಿ ಸೌಲಭ್ಯವಿರುತ್ತದೆ.
9620667819 / 9880727819

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ ರೈಟಿಂಗ್ ಅಂಡ್ ಮೊಬೈಲ್ ಆಪರೇಟಿಂಗ್ ಬರಬೇಕು.
9632065077
9632062077

WANTED
60X100 East/North site for construction of apartments, near ring road, Mysore
FOR SALE
30X40 & 40X60 residential & 30X40 commercial site in, Srirampura, Mysore, For Buying and Selling properties, call MS PROPERTIES
91106 12459

REQUIRED
Established Coaching Centre at Sharada Devi Nagar, Mysuru. We are looking for Academic Partners to collaborate and grow together, Interested Teachers and Educators are welcome
9916777925

ಬೇಕಾಗಿದ್ದಾರೆ
ಮೈಸೂರಿನಲ್ಲಿ ಎತ್ತಿನ ಗಾಣ ಮತ್ತು ಕುರಿ ನೋಡಿಕೊಳ್ಳಲು ಕುಟುಂಬಸ್ಥರು ಬೇಕಾಗಿದ್ದಾರೆ. ವಾಸಕ್ಕೆ ಮನೆ ವ್ಯವಸ್ಥೆ ಇದೆ ಆಸಕ್ತರು ಸಂಪರ್ಕಿಸಿ.
Ph : 9164777336

20x30 SITE FOR SALE
Site No: 479, South Face, In Front of Park, Near Rashtrotthana Vidya Kendra, CBSE School SMK Layout, Hassan
Price 19 Lakhs (Negotiable)
9008902791

ಬೇಕಾಗಿದ್ದಾರೆ
ನಾನ್ ವೆಜ್ ನಾಟಿ ಸ್ಟೈಲ್ ಕುಕ್, ದೊನ್ನೆ ಬಿರಿಯಾನಿ ಮಾಸ್ಟರ್, ಆಕರ್ಷಕ ಸಂಬಳ, ಊಟ ವಸತಿ ಇರುತ್ತದೆ.
Mob : 9900171642

Nypunya School of Excellence MYSURU — DATTAGALLI and R.T.NAGAR
ಬೇಕಾಗಿದ್ದಾರೆ
ಶಾಲೆಯಲ್ಲಿ ಕೆಲಸ ಮಾಡಲು ಉತ್ತನಹಳ್ಳಿ, ಬಂಡಿಪಾಳ್ಯ, ಆರ್.ಎಂ.ಸಿ., ಹೊಸಹುಂಡಿ ವ್ಯಾಪ್ತಿಯಲ್ಲಿರುವ ಮಹಿಳಾ ಆಯಾ ಬೇಕಾಗಿದ್ದಾರೆ.
ಸಂಪರ್ಕ ಸಂಖ್ಯೆ 96069 59451

CHANGE OF NAME
Nandini Paramashivaiah, D/o K.P. Paramashivaiah aged about 38 years residing at No. 6, IMPANA, Block No.19, JSS Nagar, Mysore, Karnataka 570011 on oath that my name has been changed from Nandini Paramashivaiah to Nandini Prashanth vide affidavit sworn in before notary K.V. Vasu on 08th January, 2026
Sd/- Nandini Paramashiavaiah

FOR SALE
40X60 Vijayanagar 4th Stage, 4600/ Sq.feet. (B-Khata)
8553414709

ಬೇಕಾಗಿದ್ದಾರೆ
ಗೂಡ್ಸ್ ಗಾಡಿಗೆ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಬಳ: 15,000 ದಿಂದ 20,000. ಊಟ, ವಸತಿ ಉಚಿತ.
Mob: 8884179981

TITLE DEED LOST
Mahesha S. S/o Late. Sannappa Residing at # 5343/4, 3rd Cross, Thyagaraja Colony, Nanjangud Town, Mysore District, Has Lost Title Deed (Moola Kraya Pathra) of Survey No. 58, 4 acre 32 guntas and Survey No. 59/1, 0.12 guntas of Elachagere Village, Kasaba Hobli, Nanjangud Taluk, Mysore District, belongs to my Ancestral Property Land. finders Please Call 9591714716

SITE FOR SALE
East-facing 50×80 residential site for sale in RT Nagar, Mysore. Interested buyers please contact for more details.
96865 73059

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸಗುಡಿಸಲು, ಅಡುಗೆ ಮತ್ತು ತೋಟದ ಕೆಲಸಗಳಿಗೆ 40 ವಯಸ್ಸು ಒಳಪಟ್ಟ ಆರೋಗ್ಯವಂತ ಮಹಿಳೆಯರು, ಅಥವಾ ಪುರುಷರು ಕೆಲಸದ ಸಮಯ ಬೆಳಿಗ್ಗೆ 9 ರಿಂದ ಸಂಜೆ 5–30, ಸಂಬಳ ಪ್ರತಿ ದಿನಕ್ಕೆ 300/– (9000/–) ಜ್ಞಾನ ಗಂಗೋತ್ರಿ ಕಾನ್ವೆಂಟ್, ರಾಜೇಂದ್ರ ನಗರ, ಮೈಸೂರು
8762205021

ಪುರುಷರು ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ವಿದ್ಯಾರ್ಹತೆ ಬೇಕಿಲ್ಲ. ಸಂಬಳ 17,500 +ESI, PF, ವಯಸ್ಸು 18 ರಿಂದ 45ರ ಒಳಗಿರಬೇಕು. 8 hrs Duty, 3 Shifts, ಯಾವುದೇ Fees ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ ತಕ್ಕದ್ದು. ಸ್ಥಳ : CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ. SSLC, PUC ವಿದ್ಯಾರ್ಹತೆ ಇರಬೇಕು. ಕೂರ್ಗಳ್ಳಿ, ಮೇಟಗಳ್ಳಿ, ಗೋಕುಲಂ, ಒಂಟಿಕೊಪ್ಪಲ್, ಹೆಬ್ಬಾಳು, ವಿಜಯನಗರ, ಮಂಟಿ, ಸ್ಯಾದನಹಳ್ಳಿ ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ
7259598615

CHANGE OF NAME
Prashanth Prabhakara Rao S/o M.N. Prabhakara Rao, Aged about 38 years residing at LIG 1371, 3rd Main, 10th Cross, Vivekananda Nagar, Mysore, Karnataka -570023 On oath that my name has been changed from Prashanth Prabhakara Rao, Prashanth P to Prashanth Rao vide affidavite Sworn in before Notary KV Vasu on 08-01-2026
Sd/- Prashanth P.

ಅಡುಗೆ ಭಟ್ಟರು ಬೇಕಾಗಿದ್ದಾರೆ
ಮಿಲ್ಟ್ರಿ ಹೋಟೆಲ್‌ನಲ್ಲಿ ನಾನ್‌ವೆಜ್ ಅಡುಗೆ ಮಾಡುವ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 97402 79617

House for Sale
30x40 N/F duplex house for slae at No. 419, 6th Main, 3rd Stage, Dattagalli, Mysuru. Contact:
Mob: 95380 72720

ಬೇಕಾಗಿದ್ದಾರೆ
ಡಿಟಿಪಿ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು ಸಂಪರ್ಕಿಸಿ: hr@jirsm.com
9880863003, 9343299998
ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ.

ಬೇಕಾಗಿದ್ದಾರೆ
SALES GIRL / RECEPTIONIST ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 15000-20000/-
Ph.7406 369 369

FOR SALE
30x40|30x50 Sites, Near RT Ngr, Brahmins Lyt, HD Kote Rd.
20x30, 30x40 MUDA Approved Sites Near Rainbow School Bogadi
40x120 Site@ Dattgalli 80ft Rd
40x45 Duplex House @ Vijay Ngr
2-3 BHK Apartments @RK Ngr
Commercial Properties Also Available
PRAKRUTHI PROPERTIES
95386 90359, 90359 90359

ಸೈಟು ಮಾರಾಟಕ್ಕಿದೆ
EAST FACING 30X40 ಗುರುಕುಲ ಬಡಾವಣೆ, ಜೆ.ಪಿ.ನಗರ, ಮೈಸೂರು
9845035818

ಬೇಕಾಗಿದ್ದಾರೆ
Office Boys SALES- Person (12,000-15,000) Salary
Computech Saraswathipuram
7353181681

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ, EDUCATION SSLC, PUC, ITI, DIPLOMA, DEGREE SALARY (18k -38k),
Contact: 6366718368
9632659609, 7899627704

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್‌ಗಳು ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC
ಸಂಬಳ : S/Sup 21,000/-, S/Guard 20,000/-
ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819, 9620777819

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ವಧು ಬೇಕಾಗಿದ್ದಾರೆ
ಮೈಸೂರಿನ MNC ಕಂಪನಿಯಲ್ಲಿ ಕೆಲಸ ಮಾಡುತ್ತಿರುವ M.Sc ವಿದ್ಯಾರ್ಹತೆ ಹೊಂದಿರುವ ವಿಶ್ವಕರ್ಮ ಜಾತಿಗೆ ಸೇರಿದ 31 ವರ್ಷದ ಹುಡುಗನಿಗೆ ಮದುವೆಗೆ ಸುಮಾರು 23 ರಿಂದ 28 ವರ್ಷ ವಯಸ್ಸಿನ ಹುಡುಗಿ ಬೇಕು, ಆಸಕ್ತರು ಜಾತಕ ಸಹಿತ ಫೋಟೋಗಳನ್ನು WhatsApp 7411308101 ಸಂಖ್ಯೆಗೆ ಹಂಚಿಕೊಳ್ಳಬಹುದು.

SANTASA FERTILITY & IVF
New Kantharaj Urs Road, near Ballal Circle, Lakshmipuram, Mysore
JOB OPPORTUNITY URGENTLY REQUIRED
EXPERIENCED RECEPTIONIST (Female), TELE CALLERS (Female), Qualification: Any Degree with good computer knowledge & good communication skills & attractive salaries offered. For more details contact:
6366225134

ಅಡುಗೆ ಕೆಲಸಕ್ಕೆ ಸಹಾಯಕಿ ಬೇಕು
ಮೈಸೂರು GRS ಫ್ಯಾಂಟಸಿ ಪಾರ್ಕ್ ಹತ್ತಿರ ಇರುವ ಮನೆಗೆ ಅಡುಗೆ ಮಾಡಲು ಸಹಾಯಕಿ ಬೇಕು. ದಕ್ಷಿಣ ಭಾರತೀಯ ಅಡುಗೆ ತಿಳಿದಿರಬೇಕು. ಅನುಭವ ಇದ್ದರೆ ಉತ್ತಮ. ಸಂಬಳ ಮಾತುಕತೆ ಮೂಲಕ ನಿಗದಿಪಡಿಸಲಾಗುತ್ತದೆ.
Mob: 9500367116

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ.
ಸಂಬಳ : 15,000/–
7899754149

JOB OPPORTUNITY URGENTLY REQUIRED
Experienced Administrator, HR and Receptionist, Any Degree with good computer knowledge and good communication skills. For a reputed educational institution near Siddartha layout, Mysore, Attractive Salaries Offered. For more details please contact:
8147047575

TOUR- ಪ್ರವಾಸ
Kashi- Ayodhya -rameshwaram (north-south Spl Pkg) April-09-23-8days-49,500/-
Kashi-Mukthinath -Nepal-April
Kashi-Prayag,Ayodhya March 25, April-30- 4Days-32,000/-
Singapore, Malaysia, Thailand-10days March17, April-26 1,58,000/-
Singapore Malaysia-7Days March 1,12,000/-
Bali-April 6,12- 98,000/-
Call-9886697052

ಸೈಟ್ ಮಾರಾಟಕ್ಕೆ ಇದೆ
1) 30x40, 30x50, KHB ಪಕ್ಕ, ಕೆಂಚಲಗೂಡು, 2) 30x40, ಪರಮಾನಂದ ಸಾಗರ, ನಾಗವಾಲ ರಸ್ತೆ 3) 40x65, ಸಾಧನ ಬಡಾವಣೆ. ವಿಜಯನಗರ 4ನೇ ಹಂತ, 4) 30x40, ರಿಂಗ್‌ರಸ್ತೆ ಹತ್ತಿರ, ಶ್ರೀರಾಂಪುರ 5) 50x100, ಐಶ್ವರ್ಯ ಲೇಔಟ್, ಅರವಿಂದನಗರ
9663712345

PROPERTIES FOR SALE
@ KUVEMPUNAGARA VIJAYANAGARA GOKULUM & MYS-SURROUNDINGS
9342125252

40x60 South face site sale Residencial site Dattagalli 3rd stage Near Shanti hardware
Call: 9880273834

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಸಪ್ಲೈಯರ್ ಮತ್ತು ಅಡುಗೆ ಕೋಣೆ ನಿರ್ವಹಣೆ ಸಿಬ್ಬಂದಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
9986669892
6362610799

ಮನೆ ಬಾಡಿಗೆಗೆ ಇದೆ
(ಸಸ್ಯಾಹಾರಿಗಳಿಗೆ ಮಾತ್ರ) ಜೆಎಸ್‌ಎಸ್ ಮಹಾ ವಿದ್ಯಾಪೀಠದ ಎದುರು, ರಾಮಾನುಜ ರಸ್ತೆ, ಗ್ರೌಂಡ್ ಫ್ಲೋರ್, 1 BHK. ಪೂರ್ವ ದಿಕ್ಕು, ಆಫೀಸ್‌ಗೂ ಯೋಗ್ಯವಾಗಿದೆ. ಮೊಬೈಲ್ –
9449886322

COMMERCIAL SITE SALE
40x60 South MUDA alloted 100 feet Road, Srirampura H.D. Kote road
Call: 9880273834

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ವಾರದ ಸಂಬಳವಿರುತ್ತದೆ) (ವಯಸ್ಸು 25 ರಿಂದ 45) ಗೋಕಲಂ, ಮೇಟಗಳ್ಳಿ, ವಿಜಯನಗರ, ಹೆಬ್ಬಾಳ್, ಮೈಸೂರು ಸಿಟಿ ಹಾಗೂ ಸುತ್ತಮುತ್ತ, ಆಕರ್ಷಕ ಸಂಬಳವಿರುತ್ತದೆ, ಊಟವಿರುತ್ತದೆ.
90367 45292
99007 49104

ಖಾಸಗಿ ಶಾಲೆ ನಿರ್ವಹಿಸಲು ಪಾಲುದಾರರು ಬೇಕಾಗಿದ್ದಾರೆ
8147472526

ಜಮೀನು ಮಾರಾಟಕ್ಕಿದೆ
ಮೈಸೂರು–ಬಿಳಿಕೆರೆ–ಕೆ.ಆರ್.ನಗರ ಹೈವೇ ರಸ್ತೆಗೆ ಹೊಂದಿಕೊಂಡಿರುವ 1 ಎಕರೆ ಜಮೀನು.
ಡಾಂಬರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು, ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ.ಮೀ ಅಹಲ್ಯ ಗ್ರಾಮ
45'x50' N/F, MUDA SITE ಮೇಟಗಳ್ಳಿ ಪೊಲೀಸ್ ಠಾಣೆ ಮುಂಭಾಗ
7411848108

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

15 ಕೋಟಿ ರೂ. ವೆಚ್ಚದಲ್ಲಿ ಕೆ.ಆರ್.ನಗರದ ಕ್ರೀಡಾಂಗಣ ಆಧುನೀಕರಣಗೊಳಿಸಿ

ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿಗೆ ಮನವಿ ಸಲ್ಲಿಸಿದ ಸಾ.ರಾ.ಮಹೇಶ್



ಮಾಜಿ ಸಚಿವ ಸಾ.ರಾ.ಮಹೇಶ್ ಅವರು ದೆಹಲಿಯ ಸಂಸತ್ ಭವನದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಈ ವೇಳೆ ಉಪಸ್ಥಿತರಿದ್ದರು.

ಕೆ.ಆರ್.ನಗರ: ಪಟ್ಟಣದ ಕೃಷ್ಣರಾಜೇಂದ್ರ ಕ್ರೀಡಾಂಗಣವನ್ನು 15 ಕೋಟಿ ರೂ. ವೆಚ್ಚದಲ್ಲಿ ಆಧುನೀಕರಣಗೊಳಿಸುವಂತೆ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಲಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದ್ದಾರೆ.

ದೆಹಲಿಯ ಸಂಸತ್ ಭವನದಲ್ಲಿ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರ ಜೊತೆಗೂಡಿ ಭೇಟಿಯಾಗಿ ಮನವಿ ಸಲ್ಲಿಸಿ ಮಾತನಾಡಿದರು.

ಕೆ.ಆರ್.ನಗರ ಪಟ್ಟಣದ ಹೃದಯ ಭಾಗದಲ್ಲಿರುವ ಕೃಷ್ಣರಾಜೇಂದ್ರ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮನವಿ ಮಾಡಲಾಗಿದ್ದು ಇದರಲ್ಲಿ ಒಳ ಮತ್ತು ಹೊರಾಂಗಣ ಕ್ರೀಡಾಂಗಣ ಅಭಿವೃದ್ಧಿ, ಈಜುಕೊಳ ಮತ್ತು ಕ್ರೀಡಾಂಗಣದ ಸುತ್ತ ಕಾಂಪೌಂಡ್ ನಿರ್ಮಾಣ, ವ್ಯಾಯಾಮ ಶಾಲೆ, ಟೆನ್ನಿಸ್, ವಾಲಿಬಾಲ್ ಕೋರ್ಟ್‌ಗಳ ನಿರ್ಮಾಣ ಹಾಗೂ ಕ್ರಿಕೆಟ್ ಮೈದಾನ ಮಾಡುವುದರ ಜೊತೆಗೆ ವಾಯು ವಿಹಾರ ಮಾಡಲು ಕ್ರೀಡಾಂಗಣದಲ್ಲಿ ಸುಸಜ್ಜಿತ ಪಾರ್ಕ್ ವ್ಯವಸ್ಥೆ ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಅಭಿನಂದನೆಗಳು: ತಂಬಾಕು ಮೇಲೆ ಕೇಂದ್ರ ಸರ್ಕಾರ ಶೇ.18ರಷ್ಟು ಅಬಕಾರಿ ಸುಂಕವನ್ನು ವಿಧಿಸಿದ್ದರಿಂದ ಖರೀದಿದಾರರು ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದೆ ದೂರವೇ ಉಳಿದಿದ್ದರು. ಇದರಿಂದಾಗಿ ತಂಬಾಕು ಹರಾಜು ಮಾರುಕಟ್ಟೆ ಸ್ಥಗಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯ ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ತಂಬಾಕು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಇದನ್ನರಿತ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿರವರು. ಬೆಂಗಳೂರಿನ ತಂಬಾಕು ಮಂಡಳಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ವಿಶಾಖಪಟ್ಟಣ ವಿಭಾಗದ ಕೇಂದ್ರೀಯ ಅಬಕಾರಿ ಮತ್ತು ಜಿಎಸ್ಟಿ ಮುಖ್ಯ ಆಯುಕ್ತರ ಜತೆ ಮಾತನಾಡಿ, ಬಳಿಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಗಮನಕ್ಕೆ ತಂದು, ತಂಬಾಕು ಮೇಲಿನ ಅಬಕಾರಿ ಸುಂಕವನ್ನು ರದ್ದು ಮಾಡಬೇಕು ಎಂದು ವಿನಂತಿಸಿದ್ದರಿಂದ ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿ ಫೆ.5ರಿಂದಲೇ ಇದನ್ನು ರದ್ದುಗೊಳಿಸಿ ಹರಾಜು ಪ್ರಕ್ರಿಯೆ ಆರಂಭ ಮಾಡುವಂತೆ ನಿರ್ದೇಶನ ನೀಡಿದೆ. ಹಾಗಾಗಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮೈಸೂರು ಜಿಲ್ಲೆಯ ತಂಬಾಕು ಬೆಳೆಗಾರರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇದ್ದರು.

ದೊಡ್ಡಪುರ ಗ್ರಾಪಂ ಸದಸ್ಯರಿಗೆ ಬೀಳ್ಕೊಡುಗೆ



ದೊಡ್ಡಪುರ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಸನ್ಮಾನಿಸಿ ಬೀಳ್ಕೊಟ್ಟರು.


ತಿ.ನರಸೀಪುರ, ಫೆ4– ನಮ್ಮ ದೊಡ್ಡಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಸದಸ್ಯರು ಮತ್ತು ಅಧಿಕಾರಿಗಳ ಸಹಕಾರದಿಂದ ಯಾವುದೇ ರೀತಿ ತೊಂದರೆ ಆಗದಂತೆ ಕೆಲಸ ನಿರ್ವಹಿಸಿದ ತೃಪ್ತಿ ನಮಗೆ ಇದೆ ಎಂದು ದೊಡ್ಡಪುರ ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ ಹೇಳಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ದೊಡ್ಡಪುರ ಗ್ರಾಮ ಪಂಚಾಯತಿಯಲ್ಲಿ ಐದು ವರ್ಷ ಅವಧಿ ಮುಗಿದ ನಂತರ ಪಂಚಾಯಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಬಿಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿ ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ಈ ಎಲ್ಲ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲು ಅಧಿಕಾರಿಗಳು ಹಾಗೂ ಎಲ್ಲ ಸದಸ್ಯರ ಸಹಕಾರದಿಂದ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇವೆ. ನಮ್ಮ ಈ ಅವಧಿಯಲ್ಲಿ ಪಂಚಾಯಿತಿ ವ್ಯಾಪ್ತಿಯ ಎಲ್ಲ ಗ್ರಾಮಗಳಲ್ಲೂ ಅಭಿವೃದ್ಧಿ ಕೆಲಸ ಮಾಡಿರುವುದು ತೃಪ್ತಿ ತಂದಿದೆ.

ಸದಸ್ಯ ಮಾವಿನಹಳ್ಳಿ ಎಂ.ರಾಜೇಶ್ ಮಾತನಾಡಿ ಮತದಾರರು ನಮ್ಮನ್ನು ನಂಬಿ ಕಳೆದ ಐದು ವರ್ಷದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರು. ಆದರೆ ನಾವುಗಳು ಮತದಾರರಿಗೆ ಚ್ಯುತಿ ಬಾರದಂತೆ ಕುಡಿಯುವ ನೀರು, ಸ್ವಚ್ಛತೆ, ಬೀದಿ ದೀಪ ಹಾಗೂ ಮೂಲ ಸೌಕರ್ಯಗಳು ಒದಗಿಸಲು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇವೆ ಮುಂದೆಯೂ ಸಹ ಸಹಕಾರ ನೀಡಿದರೆ, ಇನ್ನು ಹೆಚ್ಚಿನ ಅಭಿವೃದ್ಧಿಪಡಿಸುತ್ತೇವೆ ಎಂದರು. ಮತ್ತು ನಮಗೆ ಸಹಕರಿಸಿ ಇಲ್ಲಿಯವರೆಗೂ ಅಭಿವೃದ್ಧಿ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲದೆ ಅಣ್ಣ ತಮ್ಮಂದಿರಂತೆ ನಿರ್ವಹಿಸಿದ ಸದಸ್ಯರಿಗೂ ಹಾಗೂ ಮತದಾರರಿಗೂ ಅಭಿನಂದನೆ ಸಲ್ಲಿಸುತ್ತೇವೆ ಎಂದರು

ತಾಲೂಕಿನ ದೊಡ್ಡಪುರ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಉಪಾಧ್ಯಕ್ಷೆ ಮಂಜುಳಾ, ಸದಸ್ಯರಾದ ಎಂ ರಾಜೇಶ್, ಮಾದೇಶ್, ನಿಜಗುಣ, ಜೈ ಬಸವಣ್ಣ ಪ್ರತಾಪ್, ರಾಜೇಶ್, ಎಸ್‌ಬಿಟಿ ಮಹೇಶ್, ಸುಕನ್ಯ, ಚಿನ್ನತಾಯಮ್ಮ, ರಾಜಮ್ಮ, ಮಹಾದೇವಮ್ಮ, ಬಸಮ್ಮಣ್ಣಿ, ಭಾರತಿ, ಪಿಡಿಒ ದಯಾ ನಂದ್, ಕಾರ್ಯದರ್ಶಿ ಪುರುಷೋತ್ತಮ್ ಇದ್ದರು.

ಮೇವು ಅರಸಿ ಬಂದ ಆನೆ ಕಾಡಿಗೆ ಹಿಂತಿರುಗಲಾಗದೆ ಪೊದೆಯಲ್ಲಿ ಆಶ್ರಯ



ಸರಗೂರು: ಮೇವು ಅರಸಿ ಕಾಡಿನಿಂದ ಹೊರಬಂದ ಆನೆ ಮತ್ತೆ ಕಾಡಿಗೆ ಹೋಗಲಾಗದೇ ಹಂಚೀಪುರ ಗ್ರಾಮದ ಕೆರೆಯ ಪೊದೆ ಬಳಿ ತಂಗಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೊಳೆಯೂರು ಅರಣ್ಯ ವಲಯದಿಂದ ಮಂಗಳವಾರ ರಾತ್ರಿ ಕಾಡಿನಿಂದ ಬಂದ ಒಂಟಿ ಸಲಗ ಕಾಡಿಗೆ ಹೋಗುವಷ್ಟರಲ್ಲಿ ಬೆಳಕು ಅಗಿದ್ದರಿಂದ ಕಾಡಿನತ್ತ ಹೋಗದೆ ದಡದಹಳ್ಳಿ ಹಾಡಿ, ದಡದಹಳ್ಳಿ ಗ್ರಾಮದ ಮೂಲಕ ಹಂಚೀಪುರ ಗ್ರಾಮದ ಕೆರೆಯ ಬಳಿಯ ಪೊದೆಯಲ್ಲಿ ಬೀಡುಬಿಟ್ಟಿದೆ. ಆದರೆ, ಯಾವುದೇ ರೀತಿಯ ಅನಾಹುತ, ಬೆಳೆ ಹಾನಿಯಾಗಿಲ್ಲ ಎಂದು ಸರಗೂರು ವಲಯ ಅರಣ್ಯಾಧಿಕಾರಿ ಡಾ.ಲೋಕೇಶ್.ಎಸ್.ಎಲ್. ತಿಳಿಸಿದ್ದಾರೆ.

ಆನೆಯನ್ನು ಕಾಡಿಗೆ ಓಡಿಸಲು ಬುಧವಾರ ಬೆಳಗ್ಗೆಯಾಗಿದ್ದರಿಂದ ರೈತರ ಕೃಷಿ ಚಟುವಟಿಕೆ, ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಅಡಚಣೆಯಾಗಲಿದೆ ಎಂದು ಅರಣ್ಯಾಧಿಕಾರಿಗಳು ಸ್ಥಳದಲ್ಲೆ ಮೊಕ್ಕಾಂ ಹೂಡಿದ್ದು, ಸಂಜೆ ಮತ್ತೆ ಕಾಡಿಗೆ ಓಡಿಸಲಾಗುವುದು ಎಂದು ಹೇಳಿದ್ದಾರೆ. ಸ್ಥಳದಲ್ಲಿ ಸರಗೂರು ವಲಯ ಅರಣ್ಯಾಧಿಕಾರಿ ಡಾ.ಲೋಕೇಶ್ ಎಸ್.ಎಲ್. ಉಪವಲಯಅರಣ್ಯಾದಿಕಾರಿ ಅರ್ಪಿತ ಕೆ.ಕೆ.ಗಸ್ತು ಅರಣ್ಯ

ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರಿಗೆ ಬೀಳ್ಕೊಡುಗೆ

ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ ತೃಪ್ತಿ ಇದೆ: ಅಧ್ಯಕ್ಷ ಶಂಕರ್



ಮಲ್ಕುಂಡಿ: ಐದು ವರ್ಷ ಪೂರೈಸಿದ ಸಮೀಪದ ದುಗ್ಗಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಈಗಿನ ಆಡಳಿತ ಮಂಡಳಿಯ 5 ವರ್ಷಗಳ ಅವಧಿ ಮುಗಿದ ಹಿನ್ನೆಲೆಯಲ್ಲಿ ಸದಸ್ಯರಿಗೆ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷ ಬಿ.ಶಂಕರ್ ಮಾತನಾಡಿ ದುಗ್ಗಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ನಮ್ಮ ಕೈಲಾದಷ್ಟು ಕೆಲಸ ಮಾಡಿದ್ದೇವೆ. ಈ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಲು ಅಧಿಕಾರಿಗಳು ಹಾಗೂ ಎಲ್ಲಾ ಸದಸ್ಯರುಗಳ ಸಹಕಾರ ಸಿಕ್ಕಿದೆ. ಇದರಿಂದ ಗ್ರಾಮಗಳ ಅಭಿವೃದ್ಧಿಗೆ ನಮ್ಮ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದು, ತಮಗೆ ತೃಪ್ತಿ ತಂದಿದೆ ಎಂದರು.

ಮುಂದಿನ ದಿನಗಳಲ್ಲಿ ಬರುವ ಸದಸ್ಯರು ಎಲ್ಲರ ಸಹಕಾರದಿಂದ ಪಂಚಾಯತಿ ಅಭಿವೃದ್ಧಿಗೆ ಶ್ರಮಿಸಿ ಎಂದು ತಿಳಿಸಿದ ಅವರು ಅಧಿಕಾರ ಇರಲಿ ಬಿಡಲಿ ಗ್ರಾಮದ ಗ್ರಾಮಸ್ಥರ ಜೊತೆ ನಾವು ಇರುವುದಾಗಿ ಅವರು ತಿಳಿಸಿದರು.

ಸುಧಾಮಣಿ, ಗುರುಪ್ರಸಾದ್, ಶಿವನಾಗಪ್ಪ, ಚಿನ್ನಸ್ವಾಮಿನಾಯಕ, ಸುಮಲಾಂಭಿಕೆ, ನಂಜುಂಡನಾಯಕ, ಜಯಮ್ಮ, ಲಕ್ಷ್ಮಿ, ಕಮಲಮ್ಮ, ಸುಧಾ, ಕಾರ್ಯದರ್ಶಿ ಬಸವಣ್ಣ, ಬಿಲ್ ಕಲೆಕ್ಟರ್ ಮಾದಪ್ಪ ಸೇರಿದಂತೆ ಪ್ರಮುಖರು ಹಾಜರಿದ್ದರು.

ಇಂದು ಜಿಪಂ ಮಾಜಿ ಅಧ್ಯಕ್ಷ ಸಾ.ರಾ.ನಂದೀಶ್ ಹುಟ್ಟುಹಬ್ಬ ಆಚರಣೆ



ಭೇರ್ಯ: ಜಿ.ಪಂ. ಮಾಜಿ ಅಧ್ಯಕ್ಷ ಸಾ.ರಾ. ನಂದೀಶ್ ಅವರ 56ನೇ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿ ಬಳಗದಿಂದ ಗುರುವಾರ (ಫೆ.5) ಸಾಲಿ ಗ್ರಾಮ ಪಟ್ಟಣದಲ್ಲಿ ವಿವಿಧ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸಾಲಿಗ್ರಾಮ ಪಟ್ಟಣದಲ್ಲಿ ಬೆಳಗ್ಗೆ 9ಕ್ಕೆ ಶ್ರೀ ಯೋಗಾನರಸಿಂಹ ದೇವಸ್ಥಾನದಲ್ಲಿ ಜಿಪಂ ಮಾಜಿ ಅಧ್ಯಕ್ಷ ಸಾ.ರಾ. ನಂದೀಶ್ ಅವರ ಹೆಸರಿನಲ್ಲಿ ಅಭಿಮಾನಿ ಬಳಗದಿಂದ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದೆ.

ಬೆಳಗ್ಗೆ 9.30 ಗಂಟೆಗೆ ಸಾರ್ವಜನಿಕ ಸ್ಮಶಾನ(ರುದ್ರಭೂಮಿ)ದಲ್ಲಿ ಶವ ಸಂಸ್ಕಾರ ಮಾಡಲು ಬರುವ ಜನರಿಗೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಉತ್ತಮ ಪರಿಸರಕ್ಕಾಗಿ ಅರಣ್ಯ ಗಿಡಗಳನ್ನು ಪಟ್ಟಣದ ಭಾಸ್ಕರ ಸ್ವಾಮಿ ದೇವಸ್ಥಾನದ ಆಚಾರ್ಯರು ನಡಸಲಿದ್ದಾರೆ. ಬೆಳಗ್ಗೆ 10ಕ್ಕೆ ಸಾಲಿಗ್ರಾಮ ಪಟ್ಟಣದ ಗಾಂಧಿ ಚೌಕ ವೃತ್ತದಲ್ಲಿರುವ ಗಾಂಧಿ ಪ್ರತಿಮೆಗೆ ಅಭಿಮಾನಿ ಬಳಗದಿಂದ ಮಾಲಾರ್ಪಣೆ ನೆರವೇರಿಸಿ ಬಳಿಕ ಬೃಹತ್ ಗಾತ್ರದ ಕೇಕ್ ಅನ್ನು ಕತ್ತರಿಸಲಿದ್ದಾರೆ.

ಬೆಳಗ್ಗೆ 10.30 ಗಂಟೆಗೆ ಪಟ್ಟಣದ ಎಲ್ಲಾ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ ಸಿಹಿ ವಿತರಣೆ ಹಾಗೂ ಸಾಲಿಗ್ರಾಮ ಬಸ್ ನಿಲ್ದಾಣ ಬಳಿ ಅನ್ನ ಸಂತರ್ಪಣೆ ನಡೆಯಲಿದೆ.

ಕಂದಾಯ ಇಲಾಖೆಯಿಂದಲೇ 5 ಗುಂಟೆ ಜಾಗ ಬೇರೆಯವರಿಗೆ ಖಾತೆ

ತಿ.ನರಸೀಪುರ, ಫೆ.4– ಕೇತಹಳ್ಳಿ ಗ್ರಾಮದಲ್ಲಿ 0.16.08.00 ಗುಂಟೆ ವಿಸ್ತೀರ್ಣದ ಜಮೀನಿನ ಪೈಕಿ 0.05 ಗುಂಟೆಯನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಲಂಚ ಪಡೆದು ಮತ್ತೊಬ್ಬರ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು ಕೂಡಲೇ ತನಿಖೆ ನಡೆಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಜಮೀನು ಮಾಲೀಕರ ಪುತ್ರ ಕರೋಹಟ್ಟಿ ಮಹದೇವಸ್ವಾಮಿ ಆಗ್ರಹಿಸಿದ್ದಾರೆ.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಂದಾಯ ಇಲಾಖೆಯ ಮೇಲೆ ಗಂಭೀರ ಆರೋಪ ಮಾಡಿದ ಅವರು ನಮ್ಮ ಹಾಗೂ ತಹಸೀಲ್ದಾರ್ ಅವರ ಗಮನಕ್ಕೆ ಬಾರದೇ ಮೂಗೂರು ವೃತ್ತದ ರೆವಿನ್ಯೂ ಇನ್ಸ್‌ಪೆಕ್ಟರ್ ಬಸವರಾಜು ಹಾಗೂ ಕೇತಹಳ್ಳಿ ಗ್ರಾಮದ ಗ್ರಾಮ ಲೆಕ್ಕಾಧಿಕಾರಿ ಹಾಗೂ ಭೂಮಿ ಕೇಂದ್ರದ ಅಧಿಕಾರಿಗಳು ಸೇರಿ ಆರ್ಟಿಸಿದಾರರಾದ ರಾಜಮ್ಮರವರ ಗಮನಕ್ಕೆ ತಾರದೇ ಏಕಾಏಕಿ 5 ಗುಂಟೆ ಜಮೀನನ್ನು ಅಕ್ರಮವಾಗಿ ಬಾಗಳಿ ಮಾದಪ್ಪ ಎಂಬುವರಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಿದರು.

ಬೋನಿಗೆ ಬಿದ್ದ 4 ವರ್ಷದ ಗಂಡು ಚಿರತೆ

37 ಹಸುಗಳನ್ನು ಕೊಂದು ಹಾಕಿದ್ದ ಚಿರತೆ

ಹೆಚ್.ಡಿ ಕೋಟೆ: ಜಾನುವಾರುಗಳ ಮೇಲೆ ದಾಳಿ ನಡೆಸಿ ಕೊಂದು ಭಕ್ಷಿಸುತ್ತಿದ್ದ 4 ವರ್ಷದ ಗಂಡು ಚಿರತೆಯೊಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.

ತಾಲೂಕಿನ ಎನ್. ಬೆಳ್ತೂರು ಹಳೆ ಗೇಟ್ ಬಳಿ ರೈತ ಯೋಗೇಶ್ ಎಂಬುವರ ಜಮೀನಿನ ಬಳಿ ಕಳೆದ 20 ದಿನಗಳ ಹಿಂದೆ ಅರಣ್ಯ ಇಲಾಖೆಯವರು ಚಿರತೆ ಸೆರೆ ಹಿಡಿಯಲು ಬೋನನ್ನು ಇರಿಸಿದ್ದರು. ಮಂಗಳವಾರ ತಡರಾತ್ರಿ ಉಪಟಳ ನೀಡುತ್ತಿದ್ದ ಈ ಚಿರತೆ ಬೋನಿಗೆ ಬಿದ್ದಿದೆ.

ಎನ್.ಬೆಳ್ತೂರು ಹಳೆ ಗೇಟ್ ಸಮೀಪ ಇರುವ ಜಮೀನುಗಳಲ್ಲಿ ಹಲವಾರು ತಿಂಗಳಿಂದ ಈ ಚಿರತೆ ಹಸುಗಳ ಮೇಲೆ ದಾಳಿ ಮಾಡಿ ಕೊಂದು ಹಾಕಿ ಭಕ್ಷಿಸುತ್ತಿತ್ತು. ಈ ಚಿರತೆ ಇದುವರೆಗೂ 37 ಹಸುಗಳ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದು ಗ್ರಾಮದ ಸುತ್ತ–ಮುತ್ತ ಓಡಾಡಿಕೊಂಡಿತ್ತು. ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದರು. ಈ ಸಂಬಂಧ ಈ ಭಾಗದ ರೈತರು ಚಿರತೆ ಸೆರೆ ಹಿಡಿಯುವಂತೆ ಸಾಕಷ್ಟು ಬಾರಿ ಮನವಿಯನ್ನು ಮಾಡಿದ್ದರು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯವರು ಕಳೆದ 20 ದಿನಗಳ ಹಿಂದೆ ವಾಕ್ ತ್ರ ಕೇಜ್ ಎಂಬ ಬೋನನ್ನು ಇರಿಸಿದ್ದರು. ಮಂಗಳವಾರ ರಾತ್ರಿ ಚಿರತೆ ಬೋನಿನಲ್ಲಿ ಸೆರೆಯಾಗಿದೆ.

ಸೆರೆಯಾಗಿದ್ದ ಚಿರತೆಯನ್ನು ಡಾ. ರಮೇಶ್ ಅವರು ಅರವಳಿಕೆ ನೀಡಿ, ಚಿರತೆಗೆ ರೇಡಿಯೊ ಕಾಲರ್ ಅಳವಡಿಸಿದ ನಂತರ ಅರಣ್ಯಕ್ಕೆ ಬಿಡಲಾಗಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ಎಸಿಎಫ್ ಮಧು, ಆರ್‌ಎಫ್‌ಓ ಸಿದ್ದರಾಜು, ಡಾ.ರಮೇಶ್, ಚಿರತೆ ಕಾರ್ಯಪಡೆ ಸಿಬ್ಬಂದಿಗಳು, ಅರಣ್ಯ ಸಿಬ್ಬಂದಿಗಳು ಹಾಜರಿದ್ದರು.



ಮೂರನೇ ಪುಟದಿಂದ

ಮರುಸ್ಥಾಪನೆ ನಿರ್ಣಯ ವಿಧಾನಸಭೆಯಲ್ಲಿ ಅಂಗೀಕಾರ

ಕೇಂದ್ರ ಸರ್ಕಾರ ರೂಪಿಸಿರುವ ವಿಬಿ ಜಿ ರಾಮ್ ಜಿ ಯೋಜನೆಯಲ್ಲಿನ ಲೋಪದೋಷಗಳ ಬಗ್ಗೆ ಎಳೆಎಳೆಯಾಗಿ ಬಿಡಿಸಿಟ್ಟರು. ಕೇಂದ್ರದ ನೂತನ ಕಾಯಿದೆ ಗ್ರಾಮೀಣ ಪ್ರದೇಶದ ಜನರಿಗೆ ಮಾರಕವಾಗಿ ಪರಿಣಮಿಸಿದೆ. ಈ ಮೊದಲು ಮನರೇಗಾ ಯೋಜನೆ ಮೂಲಕ ಪಂಚಾಯಿತಿಗಳು ಆದಿವಾಸಿಗಳು, ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ವರ್ಗದವರಿಗೆ ಸ್ವಾವಲಂಬನೆ ಸಿಕ್ಕಿತ್ತು ಆದರೆ ನೂತನ ಕಾಯ್ದೆ ಈ ಸ್ವಾವಲಂಬನೆಗೆ ಧಕ್ಕೆ ತಂದಿದೆ ಎಂದು ಆಪಾದಿಸಿದರು.

ನೂತನ ಕಾಯಿದೆ ಒಕ್ಕೂಟ ವ್ಯವಸ್ಥೆಗೆ ಮಾರಕ ಮಾತ್ರವಲ್ಲ ಸಂವಿಧಾನ ವಿರೋಧಿಯಾಗಿದೆ. ರಾಜ್ಯಗಳ ಅಧಿಕಾರಕ್ಕೆ ಕೊಡಲಿ ಪೆಟ್ಟು ನೀಡಿದೆ ಈ ಕಾಯ್ದೆ ಅನುಷ್ಠಾನಕ್ಕೆ ಬರಬೇಕಾದರೆ ರಾಜ್ಯ ಸರ್ಕಾರಗಳು ಶೇಕಡಾ 40 ರಷ್ಟು ಆರ್ಥಿಕ ನೆರವು ನೀಡಲೇಬೇಕು. ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ನೀಡುತ್ತಿರುವ ತೆರಿಗೆ ಪಾಲು ಮತ್ತು ಸಂಪನ್ಮೂಲ ಹಂಚಿಕೆಯಲ್ಲಿ ಭಾರೀ ತಾರತಮ್ಯ ಮಾಡಿದೆ. ಹೀಗಿರುವಲ್ಲಿ ಹೊಸ ಕಾಯ್ದೆ ಪ್ರಕಾರ ಕಾಮಗಾರಿಗಳಿಗಾಗಿ ಶೇಕಡ 40ರಷ್ಟು ಹಣವನ್ನು ಎಲ್ಲಿಂದ ತರಬೇಕು ಹೀಗಾಗಿ ಕರ್ನಾಟಕದಲ್ಲಿ ಈ ಯೋಜನೆ ಜಾರಿಗೆ ಬರುವುದು ಅನುಮಾನವಾಗಿದೆ ಈ ಮೂಲಕ ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರು ಮತ್ತು ಜನಸಾಮಾನ್ಯರ ಉದ್ಯೋಗದ ಹಕ್ಕನ್ನು ಕಳೆದುಕೊಂಡಂತಾಗಿದೆ ಎಂದು ಆಪಾದಿಸಿದರು.

ಗುತ್ತಿಗೆದಾರರಿಗೆ ನೆರವು ನೀಡುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಈ ಯೋಜನೆಯನ್ನು ರೂಪಿಸಿದೆ ತಮ್ಮ ಊರಿನಲ್ಲಿ ಯಾವ ಕೆಲಸ ಆಗಬೇಕು ಎನ್ನುವುದನ್ನು ಈ ಮೊದಲು ಗ್ರಾಮ ಪಂಚಾಯಿತಿಗಳು ತೀರ್ಮಾನ ಮಾಡುತ್ತಿದ್ದವು. ಅದನ್ನು ಬದಲಾಯಿಸಿ ಈಗ ಕೇಂದ್ರ ಸರ್ಕಾರ ಯೋಜನೆಯ ರೂಪಿಸಲಿದೆ. ಅದನ್ನು ಗ್ರಾಮ ಪಂಚಾಯಿತಿಗಳು ಜಾರಿಗೊಳಿಸಬೇಕು. ಈ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತೆ ಕೇಂದ್ರೀಕರಣಗೊಳಿಸುವ ಮೂಲಕ ಮಹಾತ್ಮ ಗಾಂಧಿ ಅವರ ಆಶಯವನ್ನು ಗಾಳಿಗೆ ತೂರಿದೆ ಎಂದು ದೂರಿದರು. ಮಹಾತ್ಮ ಗಾಂಧಿ ಅವರ ಹೆಸರು ಬಿಜೆಪಿ ಮತ್ತು ಸಂಘ ಪರಿವಾರದ ನಾಯಕರಿಗೆ ಅಪಥ್ಯ ಹೀಗಾಗಿಯೇ ಅವರ ತತ್ವಗಳನ್ನು ವಿರೋಧಿಸುವ ಈ ನಾಯಕರು ಅವರ ಹೆಸರು ಹೊಂದಿರುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೂಡ ರದ್ದು ಪಡಿಸಿದ್ದಾರೆ ಎಂದು ಆಪಾದಿಸಿದರು.

ಜನಸಾಮಾನ್ಯರಿಗೆ ಮಾರಕವಾಗಿರುವ ಕೇಂದ್ರದ ಕಾಯ್ದೆ ರದ್ದುಪಡಿಸಿ ಈ ಹಿಂದೆ ಜಾರಿಯ ಲ್ಲಿದ್ದ ಮನರೇಗಾ ಮರುಸ್ಥಾಪನೆ ಮಾಡಬೇಕೆಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ನಿರ್ಣಯ ಸರ್ವ ಸಮ್ಮತವಾಗಿದೆ ಎಂದು ಹೇಳಿದ ಅವರು ಇಲಾಖೆಯ ಮಂತ್ರಿಯಾಗಿ ಇದನ್ನು ತಾವು ಬೆಂಬಲಿಸುತ್ತೇನೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ವಿಬಿ ಜಿ ರಾಮ್ ಜಿ ಯೋಜನೆ ಗ್ರಾಮ ಪಂಚಾಯಿತಿಗಳ ಅಧಿಕಾರವನ್ನು ಮೊಟಕುಗೊಳಿಸುತ್ತದೆ. ಮಹಿಳೆಯರು ಮತ್ತು ದಲಿತರ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ. ರಾಜ್ಯಗಳ ಮೇಲೆ ಆರ್ಥಿಕ ಮತ್ತು ತೆರಿಗೆ ಭಯೋತ್ಪಾದನೆ ಹೇರುವ ರೀತಿಯಲ್ಲಿ ರೂಪಿಸಿರುವ ಕಾಯಿದೆ ರದ್ದಾಗಲೇಬೇಕು. ಅಲ್ಲಿಯವರೆಗೆ ನಮ್ಮ ಸರ್ಕಾರ ಹೋರಾಟ ನಡೆಸಲಿದೆ. ವಿಧಾನಸಭೆಯಲ್ಲಿ ಆರಂಭವಾಗಿರುವ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ. ಜನರ ಮಧ್ಯೆಯೂ ಈ ಹೋರಾಟವನ್ನು ಮುಂದುವರಿಸುತ್ತೇವೆ ಈ ಹಿಂದೆ ಕೇಂದ್ರ ಸರ್ಕಾರ ಪ್ರತಿಭಟನೆಗೆ ಮಣಿದು ಕೃಷಿ ಕಾಯಿದೆಗಳನ್ನು ರದ್ದು ಪಡಿಸಿದ ರೀತಿಯಲ್ಲಿ ವಿಬಿ ಜಿ ರಾಮ ಜಿ ಕಾಯಿದೆ ಕೂಡ ರದ್ದಾಗಬೇಕು ಅಲ್ಲಿಯವರೆಗೆ ನಮ್ಮ ಹೋರಾಟ ನಿಲ್ಲುವುದಿಲ್ಲ ಎಂದು ಘೋಷಿಸಿದರು.

ಈ ವೇಳೆ ಧರಣಿಯ ನಡುವೆ ಮಧ್ಯ ಪ್ರವೇಶಿಸಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್ ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ತಂದಿರುವ ನಿರ್ಣಯವನ್ನು ತಮ್ಮ ಪಕ್ಷ ವಿರೋಧಿಸುತ್ತದೆ ಹಾಗೂ ಕೇಂದ್ರ ಸರ್ಕಾರದ ಮಸೂದೆಯನ್ನು ಬೆಂಬಲಿಸುತ್ತದೆ ಎಂದು ಹೇಳಿ ಸಭಾತ್ಯಾಗ ಮಾಡಿದರು.

ನಂತರ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಹಿಂದೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದ ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಗ್ರಾಮೀಣ ಪ್ರದೇಶದ ಜನರನ್ನು ದೃಷ್ಟಿಯಾಗಿಟ್ಟುಕೊಂಡು ರೂಪಿಸಿದ್ದ ಉದ್ಯೋಗದ ಹಕ್ಕಿನ ಕಾಯ್ದೆಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ ಇದರ ಬಗ್ಗೆ ಬಹಿರಂಗ ಚರ್ಚೆಗೆ ಬರುವಂತೆ ಪ್ರತಿಪಕ್ಷಗಳಿಗೆ ಅವಕಾಶ ನೀಡಲಾಗಿತ್ತು ಸದನದಲ್ಲಿ ಈ ಅವಕಾಶವನ್ನು ಬಳಸಿಕೊಳ್ಳಲು ಪ್ರತಿಪಕ್ಷಗಳು ವಿಫಲವಾಗಿವೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಅವರಿಗೆ ಸದನದ ಹೊರಗಡೆ ಬಹಿರಂಗ ಚರ್ಚೆಗೆ ಬರುವಂತೆ ಮತ್ತೊಮ್ಮೆ ಆಹ್ವಾನ ನೀಡುತ್ತೇನೆ ತಮ್ಮ ಪಕ್ಷ ಮನರೇಗಾ ಮರುಸ್ಥಾಪನೆ ಮಾಡುವವರೆಗೆ ಹೋರಾಟ ಮುಂದುವರಿಸಲಿದೆ ಎಂದು ಘೋಷಿಸಿದರು. ಸಿಎಂ ಸಿದ್ದರಾಮಯ್ಯ ತಾವು ಮಂಡಿಸಿರುವ ನಿರ್ಣಯವನ್ನು ಅನುಮೋದಿಸುವಂತೆ ಕೋರಿ ದರು ಬಳಿಕ ಸದನದಲ್ಲಿ ಧ್ವನಿ ಮತದ ಮೂಲಕ ನಿರ್ಣಯವನ್ನು ಅಂಗೀಕರಿಸಿ ಕಲಾಪವನ್ನು ಅನಿರ್ದಿಷ್ಟಅವಧಿಗೆ ಮುಂದೂಡಲಾಯಿತು.

ನವನಗರ ಬ್ಯಾಂಕಿಗೆ 13 ಮಂದಿ ನಿರ್ದೇಶಕರ ಆಯ್ಕೆ



ಕೆ.ಆರ್.ನಗರ: ಪಟ್ಟಣದ ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ 2026–31ನೇ ಸಾಲಿಗೆ ಆಡಳಿತ ಮಂಡಳಿಯ ನೂತನ ನಿರ್ದೇಶಕರಾಗಿ 13 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

13 ಸ್ಥಾನಗಳಿಗೆ 13 ಮಂದಿ ಮಾತ್ರ ನಾಮ ಪತ್ರ ಸಲ್ಲಿಸಿದ್ದರಿಂದ 13 ಮಂದಿಯೂ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಮೈಸೂರಿನ ಸಹಕಾರ ಸಂಘಗಳ ಜಂಟಿ ನಿಬಂಧಕರ ಕಚೇರಿಯ ಎಂ.ಎನ್.ಸೋಮಶೇಖರ್ ಪ್ರಕಟಿಸಿದರು.

ಸಾಮಾನ್ಯ ವರ್ಗದಿಂದ ಎಚ್.ಎಸ್.ಲೋಕೇಶ್, ಕೆ.ಎನ್.ಬಸಂತ್, ಸಿ.ಪಿ.ಎಸ್.ಲೋಕೇಶ್, ಕೆ.ಎನ್. ರಮೇಶರಾವ್ ಕದಂ, ಅಶೋಕ ಕುಮಾರ್, ಹೆಚ್.ಟಿ.ಗೋಪಾಲೇಗೌಡ, ಜೆ.ವೆಂಕಟೇಶ್, ಮಹಿಳಾ ಮೀಸಲಾತಿಯಿಂದ ಡಾ.ಎಂ.ಪಿ.ಸುಮತಿ, ವೀಣಾ ಕುಮಾರ್, ಹಿಂದುಳಿದ ಪ್ರವರ್ಗ ಎ–ಯಿಂದ ಮರಿಲಿಂಗಾಚಾರ್, ಹಿಂದುಳಿದ ಪ್ರವರ್ಗ ಬಿ ಯಿಂದ ಚೇತನ, ಪರಿಶಿಷ್ಟ ಜಾತಿಯಿಂದ ಎಸ್.ಮಹದೇವಯ್ಯ, ಪರಿಶಿಷ್ಟ ಪಂಗಡದಿಂದ ಎಲ್.ರಂಗನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಸಿ.ಸುರೇಶ್ ಹಾಗೂ ಬ್ಯಾಂಕ್ ವ್ಯವಸ್ಥಾಪಕ ಎಂ.ಪಿ.ಸುಹಾಸ್ ಗೌಡ ನೂತನ ಆಡಳಿತ ಮಂಡಳಿಯ ನಿರ್ದೇಶಕರನ್ನು ಹಾರಹಾಕಿ ಶಾಲು ಹೊದಿಸಿ ಅಭಿನಂದಿಸಿದರು.

ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಕೆ.ಎನ್.ಬಸಂತ್ ಅವರು ಆರು ಬಾರಿ ಆಡಳಿತ ಮಂಡಳಿಯ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಲ್ಲದೆ ಮೂರು ಬಾರಿ ಬ್ಯಾಂಕ್ ನ ಅಧ್ಯಕ್ಷರಾಗಿ ಆಯ್ಕೆಯಾಗಿ ಗ್ರಾಹಕರಿಗೆ ಉತ್ತಮ ಆಡಳಿತ ವ್ಯವಸ್ಥೆ ನೀಡಿದ್ದಾರೆ.

ಇಂದು ಮಾಸ್ತಮ್ಮ ದೇವಿ ದೇವಾಲಯ ಉದ್ಘಾಟನೆ



ಹುಣಸೂರು: ತಾಲೂಕಿನ ಹನಗೋಡು ಹೋಬಳಿಯ ಅಬ್ಬೂರು ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ಮಾಸ್ತಮ್ಮ ದೇವಿ ವಿಗ್ರಹ ಪ್ರತಿಷ್ಠಾಪನೆ ಹಾಗೂ ದೇವಾಲಯದ ಉದ್ಘಾಟನಾ ಕಾರ್ಯಕ್ರಮ ಫೆ.5 ಮತ್ತು 6ರಂದು ನಡೆಯಲಿದೆ. ಎಂದು ದೇವಸ್ಥಾನ ಸಮಿತಿಯರು ತಿಳಿಸಿದ್ದಾರೆ

ಫೆ.5ರ ಗುರುವಾರ ಸಂಜೆ ಗೋಧೂಳಿ ಸಮಯದಲ್ಲಿ ಮಂಗಳವಾದ್ಯದೊಂದಿಗೆ ಆಲಯ ಪ್ರವೇಶ, ಲಲಿತಸಹಸ್ರಾಮ ಪಾರಾಯಣ, ವೇದಪಾರಾಯಣ, ಆರಾಧನೆ, ರುದ್ರಹೋಮ, ದುರ್ಗಾಪೂಜೆ, ಗಾಯಿತ್ರಿ ಹೋಮ, ಲಕ್ಷ್ಮಿ ಹೋಮ. ಪಂಚಗವ್ಯ ಪ್ರತಿಷ್ಠಾಪನೆ, ಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ. ರಾತ್ರಿ 8 ಗಂಟೆಯಿಂದ ಅನ್ನಸಂತರ್ಪಣೆ ಕಾರ್ಯಕ್ರಮವಿದೆ.

ಫೆ.6ರ ಶುಕ್ರವಾರ ಬೆಳಿಗ್ಗೆ 5.30 ರಿಂದ ಬ್ರಾಹ್ಮ ಮುಹೂರ್ತದಲ್ಲಿ ಪೂಜೆ, ದೇವರ ಅಷ್ಟಬಂಧ ಪ್ರತಿಷ್ಠೆ, ಕಳಸಾರಾಧನೆ, ಸಪ್ತಮಾತೃಕೆ ಹೋಮ, ಶಾಂತಿ ಹೋಮ, ಕುಂಬಾಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಗೋದರ್ಶನ, ದರ್ಪಣ ದರ್ಶನ, ರಾಗ ತಾಳ ಸೇವೆ, ಸಂಗೀತ ಸೇವೆ, ಮಹಾ ನೈವೇದ್ಯ, ರಾಷ್ಟ್ರಾಶೀರ್ವಾದ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ. ಬೆಳಿಗ್ಗೆ 10.30 ಗಂಟೆಗೆ ಧಾರ್ಮಿಕ ಸಭಾ ಕಾರ್ಯಕ್ರಮಗಳು ನಡೆಯಲಿದೆ.

ರಾಮಚಂದ್ರೇಗೌಡ ನಿಧನ



ಹುಣಸೂರು, ಫೆ.4– ತಾಲೂಕಿನ ಹಿರಿ ಕ್ಯಾತನಹಳ್ಳಿ ಗ್ರಾಮದ ದಿ. ದೇವೇಗೌಡರ ಪುತ್ರ ಹಾಗೂ ಹುಣಸೂರಿನ ಕೇಂದ್ರಿಯ ತಂಬಾಕು ಸಂಶೋಧನಾ ಕೇಂದ್ರದ (ಸಿಟಿಆರ್‌ಐ) ನಿವೃತ್ತ ನೌಕರರಾದ ರಾಮಚಂದ್ರೇಗೌಡ(73) ಬುಧವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಸುಜಾತ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಹಿರಿಕ್ಯಾತನಹಳ್ಳಿ ಗ್ರಾಮದ ಮೃತರ ತೋಟದಲ್ಲಿ ನೆರವೇರಿತು.

ನಾಲೆಗಳ ಹೂಳು ತೆಗೆಯುವ ಕಾರ್ಯ ಆರಂಭ



ಸುತ್ತೂರು: ಹುಲ್ಲಳ್ಳಿ ಮತ್ತು ರಾಂಪುರ ನಾಲೆಗಳಲ್ಲಿ ಬೇಸಿಗೆ ಬೆಳೆಗಾಗಿ ನೀರು ಬಿಡಲು ನಾಲೆಗಳ ಹೂಳು ತೆಗೆದು ಸ್ವಚ್ಛತೆ ಮಾಡುವ ಕೆಲಸ ಆರಂಭವಾಗಿದೆ.

ಈ ಸಂದರ್ಭದಲ್ಲಿ ರೈತ ಮುಖಂಡ ಸಾಲುಂಡಿ ಜಯಪ್ಪ ಮಾತನಾಡಿ. ಹುಲ್ಲಳ್ಳಿ ಕಾಲುವೆಯ ಕೊನೆ ಭಾಗದವರೆಗೂ ನೀರು ಹರಿಸಬೇಕೆಂದು ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳಲಾಗಿದೆ. ಅಲ್ಲದೆ ಬೇಸಿಗೆ ಸಮಯದಲ್ಲಿ ಕಾಲುವೆಯ ಕೊನೆ ಭಾಗದವರು ನೀರು ಸರಿಯಾಗಿ ತಲುಪುತ್ತಿಲ್ಲ ಎಂದು ದೂರು ಹೇಳುತ್ತಿದ್ದರು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ನಾಲೆಯ ಕೊನೆಯ ಭಾಗದವರೆಗೂ ನೀರು ಹರಿಸಬೇಕೆಂದು ಮನವಿ ಮಾಡಿಕೊಂಡಿದ್ದ ಹಿನ್ನೆಲೆಯಲ್ಲಿ ಹೂಳೆತ್ತುವ ಕಾರ್ಯ ಆರಂಭವಾಗಿದೆ ಎಂದರು.

ಮರ್ಯಾದೆ ಇದ್ಯಾ..!!!

ನಿಮ್ಮ ತರ ಕೆಟ್ಟ ಜನರನ್ನ ನಾನು ಎಲ್ಲಿಯೂ ನೋಡಿಲ್ಲ. ಲೇ ಅರೆಸ್ಸೆಸ್ಸು.. ಆರೆಸ್ಸೆಸ್ಸು.. ಥೂ ನಿಮ್ ಯೋಗ್ಯತೆಗೆ ಬೆಂಕಿ ಹಾಕಾ.. ಎಂದು ಜಾಡಿಸಿದರು.

ನನ್ನನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಲಾಗಿದೆ ಎಂದು ಆಕ್ರೋಶಗೊಂಡ ಶಿವಲಿಂಗೇಗೌಡ ಬಿಜೆಪಿ ಸದಸ್ಯ ಶರಣು ಸಲಗಾರ್ ಸೇರಿದಂತೆ ಇತರರ ವಿರುದ್ಧ ರೊಚ್ಚಿಗೆದ್ದರು. ಇಂತಹ ಕೆಟ್ಟ ವಿಪಕ್ಷ ನಾನು ನೋಡಿಲ್ಲ. ಇವರನ್ನು ಕೂಡಲೇ ಹೊರಗೆ ಹಾಕಿ. ನನ್ನ ವಿರುದ್ಧ ವೈಯಕ್ತಿಕವಾಗಿ ಟಾರ್ಗೆಟ್ ಮಾಡುತ್ತಿದ್ದಾರೆ. ಇದು ಕೆಟ್ಟ ವರ್ತನೆ ಎಂದರು. ಕೊಬ್ಬರಿ ಬಗ್ಗೆ ಯಾರು ಹೋರಾಟ ಮಾಡಿದ್ದರು ಎಂದು ಅರಸೀಕೆರೆ ಹೋಗಿ ಕೇಳು ಎಂದು ಶರಣು ಸಲಗಾರ್ ಅವರನ್ನು ಏಕವಚನ ದಲ್ಲೇ ತರಾಟೆಗೆ ತೆಗೆದುಕೊಂಡರು. ನಿನಗೆ ಮಾನ ಮರ್ಯಾದೆ ಇದೆಯಾ ಕೋತಿ ಬಡ್ಕೊಂಡಂಗೆ ಬಡ್ಕೋತಿಯಾ. ನೀವು ಕೋತಿ ಆಟ ಆಡೋಕೆ ಹೋಗಬೇಕು. ನಿನ್ನ ಹೆಂಡತಿನ ತಹಶೀಲ್ದಾರ್ ಮಾಡಿ ದುಡ್ಡು ಹೊಡೆದಿದ್ದೀಯಾ. ನಿನಗೆ ಮಾನ ಮರ್ಯಾದೆ ಇದೆಯಾ ಎಂದು ಏಕವಚನದಲ್ಲೇ ಗುಡುಗಿದರು.

ರಾಜ್ಯಪಾಲರು ಕಾನೂನಿಗೆ ತಡೆ ಹಿಡಿದಿದ್ದಾರೆ. ಇಲ್ಲದಿದ್ದರೇ ನಿಮಗೆ ಒಂದ್ ಗತಿ ಕಾಣಿಸುತ್ತಿದ್ದೆ. ರಾಜ್ಯಪಾಲರು ಜಾರಿಗೆ ಕೊಡಬೇಕಿತ್ತು ಎಂದು ಹರಿಹಾಯ್ದರು. ಕ್ಷಮೆಗೆ ಬಿಜೆಪಿ ಆಗ್ರಹ: ಶಿವಲಿಂಗೇಗೌಡರು ಸದನದಲ್ಲಿ ಏಕವಚನದಲ್ಲಿ ಸದಸ್ಯರ ವಿರುದ್ಧ ಈ ರೀತಿ ಬೈದಿದ್ದು, ಅವರು ಕ್ಷಮೆ ಕೇಳಬೇಕು ಎಂದು ಬಿಜೆಪಿ ಪಕ್ಷದ ಸದಸ್ಯರು ಒತ್ತಾಯಿಸಿದರು.

ಕಂದಾಯ ಸಚಿವರ 'ಗೊಂದಲಕಾರಿ' ಉತ್ತರ

ಶಿಸ್ತುಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿತ್ತು. ಈ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಭೇಟಿ ನೀಡಿದ್ದ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ, ಅಲ್ಲಿಂದಲೇ ತಹಸೀಲ್ದಾರ್‌ಗೆ ಕರೆ ಮಾಡಿ ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು. ತಹಸೀಲ್ದಾರ್ ಕೂಡಲೇ ಸರ್ವೆ ಕಾರ್ಯ ಕೈಗೊಂಡು ಮುಂದಿನ ಕ್ರಮ ಕೈಗೊಳ್ಳುವುದಾಗಿಯೂ ತಿಳಿಸಿದ್ದರು. ಈ ಮಧ್ಯೆ ವಿಧಾನ ಮಂಡಲದ ವಿಶೇಷ ಅಧಿವೇಶನದ ವೇಳೆ ವಿಷಯವನ್ನು ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯುವುದಾಗಿ ಶಾಸಕ ಶ್ರೀವತ್ಸ ತಿಳಿಸಿದ್ದರು. ಅದರಂತೆ ಇಂದು ಗಮನ ಸೆಳೆಯುವ ಸೂಚನೆಯಡಿ ಸರ್ಕಾರದ ಗಮನಕ್ಕೆ ವಿಷಯವನ್ನು ತಂದಿದ್ದರು. ಇದಕ್ಕೆ ಉತ್ತರಿಸಿರುವ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಮೈಸೂರು ತಾಲೂಕು ಕಸಬಾ ಹೋಬಳಿ ಕುರುಬಾರಹಳ್ಳಿ ಗ್ರಾಮದ ಸರ್ವೆ ನಂ. 4ರ ಪೈಕಿ ಪ್ರಸ್ತಾಪಿತ ಕೆರೆಯ ಪ್ರದೇಶವು ಬರುತ್ತಿದ್ದು, ಸರ್ವೆ ನಂ. 4ರಲ್ಲಿ ಆಕಾರಬಂದಿಯಂತೆ 979.01 ಎಕರೆ ಇದ್ದು, ಬಿ–ಖರಾಬಿನಲ್ಲಿ ದಾಖಲಾಗಿರುತ್ತದೆ.

ಇದು ಸರ್ವೆ ದಾಖಲಾತಿಯಂತೆ ಅರಮನೆ ಕಾವಲ್ ಜಮೀನಾಗಿರುತ್ತದೆ. ಸದರಿ ಕಟ್ಟೆಯು ಗ್ರಾಮ ನಕಾಶೆಯಂತೆ ಸರ್ವೆ ನಂ. 4ರ ಪೈಕಿ ಇದ್ದು, ಹಳೇ ನಗರ ಭೂಮಾಪನ ದಾಖಲೆಯಂತೆ ಇದರ ವಿಸ್ತೀರ್ಣ 25255.50 ಚದರ ಮೀಟರ್ (6.10 ಎಕರೆ) ಆಗಿರುತ್ತದೆ. ಈ ಪೈಕಿ 2.33 ಎಕರೆ ಪ್ರದೇಶದಲ್ಲಿ ಜಮೀನು ಸ್ಥಿತಿಯಂತೆ ಕೆ.ಸಿ. ಬಡಾವಣೆ ನಿರ್ಮಾಣವಾಗಿ ನಿವೇಶನಗಳು, ಮನೆಗಳು, ರಸ್ತೆಗಳು ಅಭಿವೃದ್ಧಿ ಯಾಗಿರುತ್ತವೆ. ಇನ್ನು 3.17 ಎಕರೆ ಪ್ರದೇಶದಲ್ಲಿ ಜಮೀನು ಸ್ಥಿತಿಯಂತೆ ತೇಗದ ಮರಗಳು, ತೆಂಗಿನ ಮರಗಳು ಹಾಗೂ ಭಾಗಶಃ ಪ್ರದೇಶದಲ್ಲಿ ಕಟ್ಟೆಯ ಸ್ವರೂಪವಿರುತ್ತದೆ ಎಂದು ಉತ್ತರ ನೀಡಿದ್ದಾರೆ.

ಶಾಸಕರಿಗೆ, ಕಂದಾಯ ಸಚಿವರು ನೀಡಿರುವ ಉತ್ತರದಲ್ಲಿ ಈಗ ಕಾಂಪಾಂಡ್ ನಿರ್ಮಿಸಲಾಗಿರುವ ಕೆರೆಯ ಬಗ್ಗೆ ಒಂದು ಸ್ಪಷ್ಟತೆ ಇಲ್ಲ. ಇದು ಕೆರೆಯ ಜಾಗ ಎಂಬುದನ್ನು ಸ್ಪಷ್ಟೀಕರಿಸದೇ, ಇಲ್ಲಿ ಮರಗಳು ಬೆಳೆದಿವೆ, ಕೆಲ ಭಾಗ ಕಟ್ಟೆಯಂತೆ ಗೋಚರಿಸುತ್ತದೆ ಎಂದು ಉತ್ತರಿಸಿದ್ದಾರೆ.

ಪರಿಶೀಲನೆ ಬಳಿಕ ನಿರ್ಧಾರ: ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಶಾಸಕ ಶ್ರೀವತ್ಸ, ಸಚಿವರ ಉತ್ತರವೇ ಗೊಂದಲಕಾರಿಯಾಗಿದೆ. ತಾವು ಜಿಲ್ಲಾಧಿ ಕಾರಿ, ನಗರಾಭಿವೃದ್ಧಿ ಇಲಾಖೆ ಹಾಗೂ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ದ ಅಧಿಕಾರಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ನಡೆಸುತ್ತೇನೆ. ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿಯನ್ನು ಪಡೆದ ನಂತರ ಮುಂದಿನ ಹೋರಾಟದ ಬಗ್ಗೆ ನಿರ್ಧರಿಸುತ್ತೇನೆ ಎಂದು ತಿಳಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 5 ಫೆಬ್ರವರಿ 2026

ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸಿ; ಆ ಭೂಮಿಯನ್ನ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಿ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಸೂಚನೆ



ಡಿಸಿ ಕಚೇರಿ ಸಭಾಂಗಣದಲ್ಲಿ ನಡೆದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಎಡಿಸಿ ಡಾ.ಶಿವರಾಜು ಮಾತನಾಡಿದರು.

ಮೈಸೂರು, ಫೆ4(ಎಂಟಿವೈ)– ಗ್ರಾಮೀಣ ಪ್ರದೇಶಗಳಲ್ಲಿ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ವಶಕ್ಕೆ ಪಡೆದು ಸಾರ್ವಜನಿಕ ಉದ್ದೇಶಗಳಿಗೆ ಕಾಯ್ದಿರಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವನ್ನು ನಿಗದಿತ ಸಮಯದೊಳಗೆ ಮುಗಿಸಿ, ಆ ಭೂಮಿಯನ್ನು ಸಂರಕ್ಷಿಸಬೇಕು. ಸಂರಕ್ಷಿಸಲ್ಪಟ್ಟ ಸರ್ಕಾರಿ ಭೂಮಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಶಾಲಾ ಕೊಠಡಿ, ಅಂಗನವಾಡಿ ಕಟ್ಟಡ, ವಸತಿ ನಿಲಯ, ಆಶ್ರಯ ಬಡಾವಣೆಗಳು ಸೇರಿದಂತೆ ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಡಬೇಕು ಎಂದರು.

ಸರ್ಕಾರಿ ಭೂಮಿ, ಕೆರೆ, ಕಟ್ಟೆಗಳ ಒತ್ತುವರಿಗೆ ಸಂಬಂಧಿಸಿದಂತೆ ತಹಸೀಲ್ದಾರ್, ಎಡಿಎಲ್ಆರ್‌ಗಳಿಂದ ಮಾಹಿತಿ ಪಡೆದು, ಸಂಬಂಧಪಟ್ಟ ಅಧಿಕಾರಿಗಳು ತೆರವು ಕಾರ್ಯಾಚರಣೆಯ ಪಟ್ಟಿ ಮಾಡಿ, ದಿನಾಂಕ ನಿಗದಿಪಡಿಸಿಕೊಳ್ಳಬೇಕು. ನಂತರ, ಕಾರ್ಯಾಚರಣೆ ಮಾಡಿ ವಶಕ್ಕೆ ಪಡೆಯಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಗಮನಾರ್ಹ ಪ್ರಗತಿ ಸಾಧಿಸಲು ಕ್ರಮ ಕೈಗೊಳ್ಳಬೇಕು. ರೈತರು ಸೇರಿದಂತೆ ಪ್ರತಿಯೊಬ್ಬರಿಗೂ ಕಂದಾಯ ಇಲಾಖೆಯೇ ಮಾತೃ ಇಲಾಖೆಯಾಗಿದೆ. ಸಾರ್ವಜನಿಕರು ಸಣ್ಣಪುಟ್ಟ ವಿಚಾರಗಳಿಗೆ ಕಚೇರಿಗೆ ಅಲೆಯದಂತೆ ನೋಡಿಕೊಳ್ಳಬೇಕು. ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಇ–ಪೌತಿ ಖಾತೆ ಅಭಿಯಾನದಿಂದಾಗಿ ಜನರಿಗೆ ಅನುಕೂಲವಾಗಿದೆ. ಇದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಇನ್ನಷ್ಟು ವೇಗ ನೀಡಬೇಕು. ಉಪ ವಿಭಾಗಾಧಿಕಾರಿಗಳು, ತಹಸೀಲ್ದಾರ್, ರಾಜಸ್ವ ನಿರೀಕ್ಷಕರು ತಮ್ಮ ತಮ್ಮ ಹಂತದಲ್ಲಿ ಪರಿಶೀಲನೆ ನಡೆಸಿ ಇ–ಪೌತಿ ಖಾತೆ ಪ್ರಕ್ರಿಯೆ ಮುಗಿಸಬೇಕು. ಮುಂದಿನ ದಿನಗಳಲ್ಲಿ ನಾನೇ ಹಳ್ಳಿಗಳಿಗೆ ಭೇಟಿ ನೀಡಿ ಇ–ಪೌತಿ ಪ್ರಗತಿ ಕಾರ್ಯವನ್ನು ಪರಿಶೀಲನೆ ನಡೆಸುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಗ್ರಾಮಾಂತರ ಪ್ರದೇಶದಲ್ಲಿ ಕಂದಾಯ ಅಧಿಕಾರಿಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಬೇಕು. ನಿರ್ಲಕ್ಷ್ಯವಹಿಸುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಜನರಿಂದ ಜಿಲ್ಲಾ ಮಟ್ಟದ ಹಂತದವರೆಗೂ ದೂರುಗಳು ಬರದಂತೆ ಎಚ್ಚರ ವಹಿಸಬೇಕು. ಭೂ ಸುರಕ್ಷಾ ಯೋಜನೆಯಡಿ ತಹಸಿಲ್ದಾರ್, ಎಸಿ ಕಚೇರಿಗಳಲ್ಲಿರುವ ಎಲ್ಲಾ ಕಡತಗಳನ್ನು ಪ್ರತಿದಿನ ಸ್ಕ್ಯಾನಿಂಗ್ ಮಾಡಿ ಕಂಪ್ಯೂಟರ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಬಾಕಿ ಇರುವಂತಹ ದಾಖಲೆಗಳನ್ನು ಸ್ಕ್ಯಾನ್ ಮಾಡಬೇಕು. ಈ ಪ್ರಕ್ರಿಯೆ ಮುಗಿದರೆ ರೈತರಿಗೆ ತಾವು ಇರುವ ಜಾಗದಲ್ಲೇ ಆನ್‌ಲೈನ್ ಮೂಲಕ ದಾಖಲೆಗಳನ್ನು ಪಡೆಯಲು ನೆರವಾಗಲಿದೆ. ಪ್ರತಿದಿನ 200ರಿಂದ 300 ದಾಖಲೆಗಳನ್ನು ಸ್ಕ್ಯಾನ್ ಮಾಡಿದರೆ ಮಾರ್ಚ್ ತಿಂಗಳೊಳಗೆ ಮುಗಿಸಬಹುದು. ಪ್ರತಿದಿನ ತಹಸೀಲ್ದಾರ್ ಮಾನಿಟರ್ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಮೈಸೂರು, ಹುಣಸೂರು ಉಪ ವಿಭಾಗದ ಉಪ ವಿಭಾಗಾಧಿಕಾರಿಗಳು, ತಹಸಿಲ್ದಾರ್, ಡಿಡಿಎಲ್ಆರ್, ಎಡಿಎಲ್ಆರ್‌ಗಳು ಹಾಜರಿದ್ದರು.

ಶೇ.100ರಷ್ಟು ಆಧಾರ್ ಸೀಡಿಂಗ್

ರೈತರ ಆರ್‌ಟಿಸಿಗೆ ಆಧಾರ್ ಸೀಡಿಂಗ್ ಕಾರ್ಯವನ್ನು ಶೇ.100ರಷ್ಟು ಪೂರ್ಣಗೊಳಿಸಬೇಕು. ಇದರಿಂದ ಬೋಗಸ್ ಪ್ರಕರಣಗಳನ್ನು ತಡೆಗಟ್ಟಬಹುದಾಗಿದೆ. ರಾಜ್ಯದ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಆಧಾರ್ ಸೀಡಿಂಗ್ ಕಾರ್ಯ ಪ್ರಗತಿಯಲ್ಲಿದ್ದರೂ ಮೈಸೂರು ಮೊದಲನೇ ಜಿಲ್ಲೆಯಾಗುವಂತೆ ಗುರಿ ಇಟ್ಟುಕೊಂಡು ಕೆಲಸ ಮಾಡಬೇಕು. ಮುಖ್ಯಮಂತ್ರಿಗಳ ಜಿಲ್ಲೆಯಾಗಿರುವುದರಿಂದ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಜನರಿಂದ ದೂರುಗಳು ಬರಬಾರದು. ನಿಮ್ಮ ಹಂತದಲ್ಲೇ ಪರಿಹಾರ ಕಂಡರೆ ಜಿಲ್ಲಾಧಿಕಾರಿಗಳ ಕಚೇರಿಗೆ ಬರುವುದು ತಪ್ಪುತ್ತದೆ. ಹಾಗಾಗಿ, ಅರ್ಜಿ ಸ್ವೀಕರಿಸಿದ ಮೇಲೆ ಅದಕ್ಕೆ ಪರಿಹಾರ ಕಲ್ಪಿಸುವುದು ಅಗತ್ಯವಿದೆ. **–ಡಾ.ಶಿವರಾಜು.**

ತಾಂತ್ರಿಕ ದೋಷ: ಇ–ಖಾತಾ ವಿತರಣೆ ಸ್ಥಗಿತ

● ನಿತ್ಯ ಜನರ ಅಲೆದಾಟ; ವ್ಯವಸ್ಥೆಗೆ ಹಿಡಿಶಾಪ ● ಸರ್ಕಾರಕ್ಕೆ ಮಾತ್ರವಲ್ಲ ಜನರ ಆರ್ಥಿಕ ವಹಿವಾಟಿಗೂ ಭಾರೀ ಪೆಟ್ಟು ● ಆಸ್ತಿ ಮಾರಾಟ, ಖರೀದಿ, ವರ್ಗಾವಣೆಯೂ ಸೇರಿದಂತೆ ಸಾಲ ಸೌಲಭ್ಯಕ್ಕೂ ಪರದಾಟ

ಮೈಸೂರು, ಫೆ.4(ಎಂಕೆ)–ಸರ್ಕಾರಿ ಸೇವೆಗಳನ್ನು ಡಿಜಿಟಲೀಕರಣಗೊಳಿಸಿ, ಪಾರದರ್ಶಕತೆ ಹಾಗೂ ತಂತ್ರಜ್ಞಾನ ಚಾಲಿತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನ್ಯಾಷನಲ್ ಇನ್‌ಫಾರ್ಮೇಷನ್ ಸೆಂಟರ್(NIC) ಅಭಿವೃದ್ಧಿಪಡಿಸಿರುವ ಪರಿಷ್ಕೃತ ಇ–ಸ್ವತ್ತು(ಇ–ಆಸ್ತಿ) 2.0 ಡಿಜಿಟಲ್ ಪ್ಲಾಟ್‌ಫಾರ್ಮ್‌ನ ತಾಂತ್ರಿಕ ದೋಷಗಳಿಂದಾಗಿ ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಇ–ಖಾತಾ(ಎ–ಖಾತಾ ಮತ್ತು ಬಿ–ಖಾತಾ) ವಿತರಣೆ ಸ್ಥಗಿತಗೊಂಡಿದೆ.

2025ರ ಡಿ.1ರಂದು ಬಿಡುಗಡೆಯಾದ ಇ–ಸ್ವತು 2.0 ತಂತ್ರಾಂಶದಲ್ಲಿನ ದೋಷಗಳಿಂದಾಗಿ ಆಸ್ತಿಗಳ ಮಾರಾಟ, ಖರೀದಿ ಮತ್ತು ನೋಂದಣಿಗೆ ಇ–ಖಾತಾ(ಡಿಜಿಟಲ್ ಖಾತಾ) ಕಡ್ಡಾಯಗೊಳಿಸಿರುವುದು ಆಸ್ತಿ ಮಾಲೀಕರು ಪರದಾಡುವಂತೆ ಮಾಡಿದೆ. ನಿರಂತರ ಸರ್ವರ್ ಡೌನ್, ದಾಖಲೆಗಳ ಅಪ್‌ಲೋಡ್ ನಲ್ಲಿನ ವಿಳಂಬದಿಂದಾಗಿ ಕಂದಾಯ ವಸೂಲಿಯಲ್ಲಿ ಕುಂಠಿತವಾಗಿರುವ ಜೊತೆಗೆ ರಿಯಲ್ ಎಸ್ಟೇಟ್ ಉದ್ಯಮ ನೆಲಕಚ್ಚುವಂತೆ ಮಾಡಿದೆ.

ಕಳೆದ ಎರಡು ತಿಂಗಳಿಂದ ಇ–ಸ್ವತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ನಿಂದ ಆರಂಭದಲ್ಲಿ ಕೆಲವರು ಇ–ಖಾತಾ ವಿತರಣೆ ಮಾಡಲಾಗಿದ್ದು, ತದನಂತರ ಉಂಟಾದ ಸರ್ವರ್ ಡೌನ್ ಹಾಗೂ ಇನ್ನಿತರೆ ಸಮಸ್ಯೆಯಿಂದ ಇ–ಖಾತಾ ನೀಡಲು ಸಾಧ್ಯವಾಗುತ್ತಿಲ್ಲ. ಕಳೆದೊಂದು ತಿಂಗಳಿಂದ ಇ–ಖಾತಾ ವಿತರಣೆ ಸಂಪೂರ್ಣವಾಗಿ ಸ್ಥಗಿತವಾಗಿರುವುದು ಸಾರ್ವಜನಿಕರಿಗೆ ಮಾತ್ರವಲ್ಲದೆ ಉದ್ಯಮಿಗಳಿಗೆ ಆರ್ಥಿಕ ಸಂಕಷ್ಟವನ್ನು ತಂದೊಡ್ಡಿದೆ.

ರಾಜ್ಯ ಸರ್ಕಾರ ಇ–ಖಾತಾ ಕಡ್ಡಾಯಗೊಳಿಸಿರುವುದರಿಂದ ಆಸ್ತಿ ಆಧಾರದ ಮೇಲೆ ವಿದ್ಯಾರ್ಥಿಗಳು ಶಿಕ್ಷಣ ಸಾಲ ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಮದುವೆ ಹಾಗೂ ಇನ್ನಿತರೆ ಸಾಲ–ಸೌಲಭ್ಯಕ್ಕಾಗಿಯೂ ಪರದಾಡುವಂತಾಗಿದೆ. ಇ–ಖಾತಾ ಕಡ್ಡಾಯಗೊಳಿಸಿ ಆಸ್ತಿ ಮಾಲೀಕರನ್ನು ಸರ್ಕಾರ ಸಂಕಷ್ಟಕ್ಕೆ ದೂಡಿದೆ ಎಂಬ ಆಕ್ರೋಶ ವ್ಯಾಪಕವಾಗಿ ವ್ಯಕ್ತವಾಗುತ್ತಿದೆ.

ಇ–ಖಾತಾ ಇಲ್ಲದೆ ಯಾವ ನೋಂದಣಿಯೂ ಇಲ್ಲ: ಮ್ಯಾನುಯಲ್ ಖಾತೆಗಳ ಮೂಲ ಆಸ್ತಿಗಳ ನೋಂದಣಿ (ರಿಜಿಸ್ಟ್ರೇಷನ್) ಮಾಡುವುದನ್ನು ನಿಲ್ಲಿಸಲಾಗಿದ್ದು, ಇ–ಖಾತಾ ಕಡ್ಡಾಯಗೊಳಿಸಲಾಗಿದೆ. ಇ–ಖಾತಾ ಇಲ್ಲದೆ ಯಾವುದೇ ಆಸ್ತಿಯನ್ನು ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾಯಿಸಲು ಸಾಧ್ಯವಿಲ್ಲ. ಆನ್‌ಲೈನ್ ಮೂಲಕವೇ ರಿಜಿಸ್ಟ್ರೇಷನ್ ಪ್ರಕ್ರಿಯೆ ನಡೆಯುತ್ತಿದ್ದು, ಆಫ್‌ಲೈನ್ ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಎಂದು ಹಿರಿಯ ಉಪನೋಂದಣಾಧಿಕಾರಿ ಸಿ.ಪಿ.ನಂದಿನಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಳೆದೊಂದು ತಿಂಗಳಿಂದ ಇ–ಖಾತೆ ನೀಡಿಲ್ಲ: ಮೈಸೂರು ನಗರದಲ್ಲಿ ಕಳೆದ ಒಂದು ತಿಂಗಳಿಂದ ಇ–ಖಾತೆ ನೀಡಿಲ್ಲ. ಸರ್ವರ್ ಸಮಸ್ಯೆ ಇತ್ತು. ಸಿಟಿಜನ್ ಲಾಗಿನ್‌ಗೂ ಅವಕಾಶ ನೀಡಬೇಕು ಎನ್ನುವ ದೃಷ್ಟಿಯಿಂದ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಲಾಗುತ್ತಿದೆ. ಈಗಾಗಲೇ ಇ–ಆಸ್ತಿ ಕಣಜದಲ್ಲಿ ಶೇ.95 ಆಸ್ತಿಗಳ ದತ್ತಾಂಶ ಸಂಗ್ರಹಿಸಿದ್ದು, ಹೊಸ ತಂತ್ರಾಂಶಕ್ಕೆ ಬದಲಾವಣೆಯಾಗುತ್ತಿರುವುದರಿಂದ ಸ್ವಲ್ಪ ಸಮಸ್ಯೆಯಾಗಿದೆ ಎಂದು ಮೈಸೂರು ಪಾಲಿಕೆ ಕಂದಾಯ ವಿಭಾಗದ ಉಪ ಆಯುಕ್ತ ಜಿ.ಎಸ್.ಸೋಮಶೇಖರ್ ತಿಳಿಸಿದರು.

ರಿಯಲ್ ಎಸ್ಟೇಟ್ ಉದ್ಯಮ ಸ್ಥಗಿತ: ಆಸ್ತಿ ಮಾಲೀಕರಿಗೆ ಹಕ್ಕು ಪತ್ರ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ನೀಡಿರುವ ರಾಜ್ಯ ಸರ್ಕಾರ ಇ–ಖಾತೆಯನ್ನು ಜವಾಬ್ದಾರಿ ವಹಿಸಿ ನೀಡಬೇಕು. ಆದರೆ, ಇ–ಖಾತೆಗೆ ಅರ್ಜಿ ಕರೆದು ಆಸ್ತಿ ಮಾಲೀಕರನ್ನು ಅಲೆಯುವಂತೆ ಮಾಡಿದೆ. ಸರ್ವರ್ ಡೌನ್‌ನಿಂದ ಇ–ಖಾತೆಗೆ ತಿಂಗಳುಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇ–ಖಾತೆ ಇಲ್ಲದೆ ಯಾವುದೇ ರಿಜಿಸ್ಟ್ರೇಷನ್‌ಗಳನ್ನು ಮಾಡುತ್ತಿಲ್ಲ. ಹಾಗಾಗಿ ರಿಯಲ್ ಎಸ್ಟೇಟ್ ಉದ್ಯಮ ಕಳೆದ ಎರಡು ತಿಂಗಳಿಂದ ಸ್ಥಗಿತಗೊಂಡಿದೆ. ಸಮಸ್ಯೆ ಬಗೆಹರಿಸಲು ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಸಿಆರ್‌ಇಡಿಎಐ–ಕ್ರೆಡಾಯ್) ಮೈಸೂರು ಚಾಪ್ಟರ್ ಅಧ್ಯಕ್ಷ ಎಂ.ಎಸ್.ಹರೀಶ್ ಶೆಣೈ ಬೇಸರ ವ್ಯಕ್ತಪಡಿಸಿದರು.

ಲಿಂಕ್ ಮಾಡಿ ಬಿಟ್ಟಿದ್ದಾರೆ: ರಾಜ್ಯದಲ್ಲಿ ಇ–ಖಾತೆ ನೀಡುವ ಪ್ರಕ್ರಿಯೆ ಸರಿಯಾಗಿ ನಡೆಯುತ್ತಿಲ್ಲ. ಎಲ್ಲೆಡೆ ಸರ್ವರ್ ಡೌನ್. ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಳೆದ 6 ತಿಂಗಳಿಂದ ಹೊಸ ಪ್ರಾಜೆಕ್ಟ್‌ಗಳೇ ಬಂದಿಲ್ಲ. ಒಂದಕ್ಕೊಂದು ಲಿಂಕ್ ಮಾಡಿ ಬಿಟ್ಟಿದ್ದಾರೆ. ಆಸ್ತಿ ನೋಂದಣಿಗೆ ಇ–ಖಾತಾ ಕಡ್ಡಾಯ. ಮನೆ ನಿರ್ಮಿಸಿದ ನಂತರ ಆಕ್ಯುಪೆನ್ಸಿ ಪ್ರಮಾಣ ಪತ್ರ (OC)ಪಡೆಯಬೇಕು. ಓಸಿ ಇಲ್ಲದೆ ವಿದ್ಯುತ್ ಸಂಪರ್ಕ ಕೊಡಲ್ಲ. ಒಟ್ಟಿನಲ್ಲಿ ಸಾಕಷ್ಟು ಸಮಸ್ಯೆಯಾಗಿದೆ ಎಂದು ಬಿಲ್ಡರ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಆರ್.ಪ್ರಭಾಕರರಾವ್ ತಿಳಿಸಿದರು.

ಸಿಟಿಜನ್ ಲಾಗಿನ್‌ಗೆ ಅವಕಾಶ...!

ಮೈಸೂರಿನಲ್ಲಿ ಈಗಾಗಲೇ 60 ಸಾವಿರ ಆಸ್ತಿಗಳಿಗೆ ಇ–ಖಾತೆ ವಿತರಣೆ ಮಾಡಿದ್ದು, ರಾಜ್ಯದಲ್ಲಿಯೇ ಮೈಸೂರು ನಗರಪಾಲಿಕೆ ಪ್ರಥಮ ಸ್ಥಾನದಲ್ಲಿದೆ. ಆದರೆ, ಹೊಸ ಸಾಫ್ಟ್‌ವೇರ್‌ಗೆ ಬದಲಾಗುತ್ತಿರುವುದರಿಂದ ಸರ್ವರ್ ಸಮಸ್ಯೆ ಉಂಟಾಗಿದ್ದು, ಅಪ್‌ಡೇಟ್ ಮಾಡಿ ಬಗೆಹರಿಸಲಾಗುತ್ತಿದೆ. ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸಿ, ಇ–ಖಾತಾ ವಿತರಣೆ ಮಾಡಲಾಗುವುದು. ಇ–ಆಸ್ತಿ ತಂತ್ರಾಂಶದಲ್ಲಿ ಸಿಟಿಜನ್ ಲಾಗಿನ್ ಮೂಲಕ ಮನೆಯಲ್ಲಿಯೇ ಕುಳಿತು ಇ–ಖಾತೆಗೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ಇನ್ನೊಂದು ಹಂತದಲ್ಲಿ ಸಾಫ್ಟ್‌ವೇರ್ ಪರಿಶೀಲನೆ ನಡೆಯುತ್ತಿದ್ದು, ಪ್ರಾಯೋಗಿಕ ಪ್ರಯೋಗದ ನಂತರ ಚಾಲನೆ ನೀಡಲಾಗುವುದು.

–ಜಿ.ಎಸ್.ಸೋಮಶೇಖರ್, ಉಪ ಆಯುಕ್ತರು (ಕಂದಾಯ), ಮೈಸೂರು ನಗರಪಾಲಿಕೆ



ಹೊಸ ಸಾಫ್ಟ್‌ವೇರ್ ಬದಲಾವಣೆ ಮತ್ತು ಅಪ್‌ಡೇಟ್ ಮಾಡುತ್ತಿರುವುದರಿಂದ ಇ–ಖಾತೆ ನೀಡುವಲ್ಲಿ ಗೊಂದಲ ಉಂಟಾಗಿದೆ. ಗ್ರಾಮೀಣ ಭಾಗದಲ್ಲಿ ಈಗಾಗಲೇ ಸಮಸ್ಯೆ ಬಗೆಹರಿಯುವ ಹಂತದಲ್ಲಿದ್ದು, ನಗರ ಪ್ರದೇಶದಲ್ಲಿಯೂ ಇ–ಖಾತೆ ವಿತರಣೆಯಲ್ಲಾಗಿರುವ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನ ನಡೆಯುತ್ತಿದೆ. –ಜಿ.ಲಕ್ಷ್ಮಿಕಾಂತ್ ರೆಡ್ಡಿ, ಮೈಸೂರು ಡಿಸಿ

ಹನುಮಾನ್ ಚಾಲೀಸಾ ಪಾರಾಯಣ ರಥೋತ್ಸವಕ್ಕೆ ಚಾಲನೆ



ಮೈಸೂರಿನ ಅವಧೂತ ದತ್ತಪೀಠದಿಂದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನೇತೃತ್ವದಲ್ಲಿ ಫೆ.14ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಹನುಮಾನ್ ಚಾಲೀಸ ಮಾಹಾಪಾರಾಯಣ ಮಹಾಯಜ್ಞದ ಪ್ರಚಾರ ವಾಹನ ಮತ್ತು ಹನುಮಾನ್ ಸ್ಥಬ್ದಚಿತ್ರದ ವಾಹನಕ್ಕೆ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿ ಪುಷ್ಪನಮನ ಸಲ್ಲಿಸಿ, ನಗರ ಬಿಜೆಪಿ ಅಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರ ಬಿಜೆಪಿ ಕಾರ್ಯದರ್ಶಿ ಎಂ.ಎಸ್.ಪುನೀತ್, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಈ.ಬಸವರಾಜು, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್, ಸಿ.ಸಂತೋಷ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎನ್.ಯೋಗಾನಂದ್, ಕೆ.ಗಿರೀಶ್, ಅಜಯ್ ಶಾಸ್ತ್ರಿ, ವಿಕಾಸ್ ಶಾಸ್ತ್ರಿ, ಆಶ್ರಮದ ರಮೇಶ್, ವಿನಯ್ ಬಾಬು, ಪ್ರಜ್ವಲ್, ತೇಜಸ್ ವೇಣು, ಜೆ.ಸಿ.ಬಿ. ರವಿ, ಛಾಯಾರತಿ ಇತರರಿದ್ದರು.

ಆರಂಭದಲ್ಲೇ ಕ್ಯಾನ್ಸರ್‌ಗೆ ಚಿಕಿತ್ಸೆ ಸಾಧ್ಯ

ಮೈಸೂರು, ಫೆ. 4–ಕ್ಯಾನ್ಸರ್ ಕುರಿತು ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದಿಂದ ವಿಶ್ವ ಕ್ಯಾನ್ಸರ್ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ ಉದ್ಘಾಟಿಸಿ ಮಾತನಾಡಿದರು.

ಕ್ಯಾನ್ಸರ್ ಭಯಪಡಬೇಕಾದ ರೋಗವಲ್ಲ. ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಿದರೆ ಸಂಪೂರ್ಣ ಚಿಕಿತ್ಸೆ ಸಾಧ್ಯ ಎಂದರು. ಇಂದಿನ ಜೀವನಶೈಲಿ, ಆಹಾರ ಪದ್ಧತಿ ಹಾಗೂ ಧೂಮಪಾನ–ಮದ್ಯಪಾನಗಳ ದುಷ್ಪರಿಣಾಮಗಳು ಕ್ಯಾನ್ಸರ್‌ಗೆ ಪ್ರಮುಖ ಕಾರಣಗಳಾಗಿವೆ ಎಂದು ಹೇಳಿದರು.

ಕ್ಯಾನ್ಸರ್ ರೋಗದ ಆರಂಭಿಕ ಲಕ್ಷಣಗಳು, ತಡೆಗಟ್ಟುವ ಕ್ರಮಗಳು, ನಿಯಮಿತ ಆರೋಗ್ಯ ತಪಾಸಣೆ ಹಾಗೂ ವಿದ್ಯಾರ್ಥಿನಿಯರು ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕಾಗುವ ಮಹತ್ವದ ಬಗ್ಗೆ ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸ್ವರ್ಣಲತಾ ಸಲಹೆ ನೀಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯರು ವಿಶ್ವ ಕ್ಯಾನ್ಸರ್ ದಿನದ ಪ್ರತಿಜ್ಞೆ ಮಾಡಿದರು. ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಭಿತ್ತಿ ಚಿತ್ರಗಳ ಮೂಲಕ ಸಂದೇಶಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥ ಡಾ.ಅಭಿಜಿತ್ ಸಿಂಗ್, ಅಧ್ಯಾಪಕರು, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಿಶ್ವ ಕ್ಯಾನ್ಸರ್ ದಿನ ಆಚರಿಸಲಾಯಿತು.

ಅಪರಿಚಿತ ವ್ಯಕ್ತಿ ಸಾವು



ಮೈಸೂರು,ಫೆ.4–ಮಲಗಿದ್ದ ಜಾಗದಲ್ಲೇ ಅಪರಿಚಿತ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ, ಮೈಸೂರಿನ ಗಾಯಿತ್ರಿಪುರಂ 2ನೇ ಹಂತದ ನಿಂಬೆಹಣ್ಣು ಸರ್ಕಲ್ ಬಳಿಯ ಬಾರ್ ಸಮೀಪ ನಡೆದಿದೆ. ಮೃತನ ವಯಸ್ಸು ಸುಮಾರು 50ರಿಂದ 55 ವರ್ಷ, ಎತ್ತರ 5.7 ಅಡಿ, ಬಡಕಲು ಶರೀರ, ಗೋಧಿ ಮೈ ಬಣ್ಣ, ಕೋಲುಮುಖ, ಕಪ್ಪು ಬಿಳಿ ಮಿಶ್ರಿತ ತಲೆಗೂದಲು ಮತ್ತು ಗಡ್ಡ ಹೊಂದಿದ್ದು, ಬಿಳಿ ಬಣ್ಣದ ತುಂಬುತೋಳಿನ ಶರ್ಟ್, ಕಪ್ಪು ಬಿಳಿ ಗೆರೆಯುಳ್ಳ ಪ್ಯಾಂಟ್ ಖಾಕಿ ಬಣ್ಣದ ಬೆಲ್ಟ್ ಧರಿಸಿರುತ್ತಾರೆ. ಮೃತನ ವಾರಸುದಾರರು ಯಾರಾದರೂ ಇದ್ದಲ್ಲಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0821–2418309, 2418339ಗೆ ಸಂಪರ್ಕಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಂಗಾತ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ದ್ರೌಪದಿ–2 (ತ)	4 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ರಕ್ತ ಕಾಶ್ಮೀರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಮೈಸೂರಲ್ಲಿ 'ಬೌದ್ಧಿಕ ಸ್ವತ್ತು ಹಕ್ಕುಗಳ' ಕುರಿತು ರಾಷ್ಟ್ರೀಯ ಸಮ್ಮೇಳನ



ಮೈಸೂರಿನ ಟೆರೇಸಿಯನ್ ಕಾಲೇಜಿನಲ್ಲಿ ಬುಧವಾರ 'ಬೌದ್ಧಿಕ ಸ್ವತ್ತು ಹಕ್ಕುಗಳ' ಕುರಿತು ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಮೈಸೂರು, ಫೆ4(ಎಂಕೆ)– ಮೈಸೂ ರಿನ ಟೆರೇಸಿಯನ್ ಕಾಲೇಜಿನ ಗೋಲ್ಡನ್ ಜುಬಿಲಿ ಸಭಾಂಗಣದಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ 'ಬೌದ್ಧಿಕ ಸ್ವತ್ತು ಹಕ್ಕುಗಳ' ಕುರಿತು ರಾಷ್ಟ್ರೀಯ ಸಮ್ಮೇಳನ ನಡೆಯಿತು.

ಸಮ್ಮೇಳನ ಉದ್ಘಾಟಿಸಿದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಹೆಚ್. ರಾಜಶೇಖರ್ ಮಾತನಾಡಿ, ಡಿಜಿಟಲ್ ಯುಗದಲ್ಲಿ ಬೌದ್ಧಿಕ ಹಕ್ಕುಗಳು ಆರ್ಥಿಕ ಅಭಿವೃದ್ಧಿಗೆ ಅವಲಂಬಿತವಾಗಿವೆ ವಿದ್ಯಾರ್ಥಿಗಳು ತಮ್ಮ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು ಎಂದು ಸಲಹೆ ನೀಡಿದರು.

ಕೊಲ್ಕತ್ತಾದ ನ್ಯಾಷನಲ್ ಯೂನಿವರ್ಸಿಟಿ ಆಫ್ ಜುರಿಡಿಕಲ್ ಸೈನ್ಸಸ್ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ್ ಭಟ್, ಟೆರೇಸಿಯನ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಸಹಾಯ್‌ಮೇರಿ, ಡಾ.ರೋಹಿಣಿ, ಸಹಾಯಕ ಪ್ರಾಧ್ಯಾಪಕ ಡಾ.ಪಿ.ಎಂ.ಶಿವಪ್ರಸಾದ್, ಸಂಶೋಧನಾ ಕೇಂದ್ರದ ಸಂಶೋಧನಾ ನಿರ್ದೇಶಕಿ ಡಾ.ವೀಣಾ ಎಂ.ಡಿ ಅಲ್ಮೇಡಾ, ಐಕ್ಯೂಎಸಿ ಸಂಯೋಜಕ ವಿವೇಕ್ ಚಾರ್ಲ್ಸ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅವಧಿ ವಿಸ್ತರಣೆ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಅರ್ಜಿಗಳನ್ನು ಸಲ್ಲಿಸಲು ಅವಧಿ ವಿಸ್ತರಿಸಿದ್ದು, ssp.postmatric.karnataka.gov.Inನಲ್ಲಿ ಫೆಬ್ರವರಿ 28ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ–0821–2520910 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಮತ್ತೊಂದು ಐತಿಹಾಸಿಕ ಬೋಗಾದಿ ಕೆರೆ ಅವಸಾನದತ್ತ

ರಾಜ್ಯದಲ್ಲಿ ಕೆರೆ ಸಂರಕ್ಷಣೆಗೆಂದೇ ಸಣ್ಣ ನೀರಾವರಿ ಇಲಾಖೆ ಇರುವುದು ನಿರರ್ಥಕವಲ್ಲವೇ?



ಮೈಸೂರಿನ ಬೋಗಾದಿ ಕೆರೆ ಸಂಪೂರ್ಣವಾಗಿ ಬತ್ತಿರುವುದು

ಮೈಸೂರು: ಮೈಸೂರಿನ ಐತಿಹಾಸಿಕ ಬೋಗಾದಿ ಕೆರೆ ಸಂಪೂರ್ಣ ಬತ್ತಿ ಹೋಗಿದ್ದು, ಕಟ್ಟಡ ತ್ಯಾಜ್ಯ ಸುರಿಯುವ ಕೊಂಪೆಯಾಗಿ ಬದಲಾಗುತ್ತಿದೆ.

ಬೋಗಾದಿ ಕೆರೆಯು 11ನೇ ಶತಮಾನದ ಚೋಳರ ಕಾಲದಲ್ಲಿ ನಿರ್ಮಾಣವಾಗಿ ಮೈಸೂರು ಮಹಾರಾಜರಿಂದ ಅಭಿವೃದ್ಧಿಗೊಂಡಿದೆ ಎಂಬ ಐತಿಹ್ಯ ಇದೆ. ಆ ಕಾಲದ ಜನವಸತಿ ಪ್ರದೇಶಕ್ಕೆ ಈ ಕೆರೆಯೇ ಆಸರೆಯಾಗಿತ್ತು ಎಂದು ಹೇಳಲಾಗುತ್ತದೆ. ಮುಖ್ಯವಾಗಿ ಪ್ರಕೃತಿಯ ಜೀವಂತಿಕೆ ಹಾಗೂ ಜೀವ ವೈವಿಧ್ಯತೆಯ ತಾಣವಾಗಿದ್ದ ಬೋಗಾದಿ ಕೆರೆ, ನೋಡುನೋಡುತ್ತಲೇ ಕಣ್ಮರೆಯಾಗುವ ಹಾದಿಯಲ್ಲಿದೆ.

ಸಾಮಾನ್ಯವಾಗಿ ಮಳೆಗಾಲದಲ್ಲಿ ಈ ಕೆರೆಯು ತುಂಬಿ ನಳನಳಿಸುತ್ತದೆ. ಆದರೆ ನಿರ್ವಹಣೆ ಮಾಡದಿರುವುದರಿಂದ ಉಳಿದ ಕಾಲದಲ್ಲಿ ಕೇವಲ ಗುಂಡಿಗಳಲ್ಲಿ ಮಾತ್ರ ಒಂದಷ್ಟು ನೀರು ಕಾಣಿಸುತ್ತದೆ. ಆದರೆ ಈ ಬಾರಿ ಒಂದು ಹನಿಯೂ ಇಲ್ಲದಂತೆ ಒಣಗಿ ಬರಡಾಗಿದೆ. ಕಳೆದ ವರ್ಷ ಕೊಳಚೆ ನೀರಿನಿಂದ ಕೆರೆಯನ್ನು ವ್ಯಾಪಿಸಿದ್ದ ಗಂಟೆ ಹೂವಿನ ಜೊಂಡು, ಅಂತರಗಾವರೆ, ಕತ್ತೆಕಿವಿ ಇನ್ನಿತರ ತೇಲುಕಳೆ ಒಣಗಿ, ಭೂಮಿ ಕಚ್ಚಿದೆ ಆದರೆ ನೀರು ತುಂಬಿದಾಗ ಮತ್ತೆ ಈ ಕಳೆ ಎಲ್ಲೆಡೆ ಆವರಿಸಿಕೊಳ್ಳುವ ಸಾಧ್ಯತೆ ಇದೆ.

ಕಟ್ಟಡ ತ್ಯಾಜ್ಯದ ರಾಶಿ: ಹಸಿರಿನಿಂದ ಕಂಗೊಳಿಸುತ್ತಾ ಜೀವ ವೈವಿಧ್ಯತೆಯ ತಾಣವಾಗಬೇಕಿದ್ದ ಬೋಗಾದಿ ಕೆರೆ, ತ್ಯಾಜ್ಯ ಸುರಿಯುವ ದೊಡ್ಡ ಹೊಂಡವಾಗಿ ಬದಲಾಗುತ್ತಿದೆ. ರಾತ್ರೋರಾತ್ರಿ ಟಿಪ್ಪರ್, ಟ್ರ್ಯಾಕ್ಟರ್‌ಗಳಲ್ಲಿ ಕಟ್ಟಡ ಅವಶೇಷವನ್ನು ತಂದು ಸುರಿಯಲಾಗುತ್ತಿದೆ. ದಿನ ಕಳೆದಂತೆ ಹೀಗೆಯೇ ಕೆರೆಯನ್ನು ಮುಚ್ಚಿ, ಜನವಸತಿ ಬಡಾವಣೆ ನಿರ್ಮಿಸಿದರೂ ಆಶ್ಚರ್ಯ ಪಡುವಂತಿಲ್ಲ. ಹಗಲಲ್ಲೇ ಕೆರೆ ಆವರಣದ ಗಿಡಗಂಟಿ, ಪೊದೆಗಳ ಮರೆಯಲ್ಲಿ ಗುಂಪು ಗುಂಪಾಗಿ ಮದ್ಯಗೋಷ್ಠಿ, ಮಾದಕ ವಸ್ತು ಸೇವನೆ ಮಾಡುವುದು ಹೆಚ್ಚಾಗಿದೆ. ಮದ್ಯದ ಬಾಟೆಲ್, ಪ್ಯಾಕೆಟ್, ಪ್ಲಾಸ್ಟಿಕ್ ಲೋಟ, ಸಿಗರೇಟ್ ತುಂಡು, ಆಹಾರ ತ್ಯಾಜ್ಯ ಸೇರಿದಂತೆ ಉಳಿದಿದ್ದನ್ನೆಲ್ಲಾ ಎಲ್ಲೆಂದರಲ್ಲಿ ಬಿಸಾಡಿದ್ದಾರೆ. ಮನುಷ್ಯನ ದೌರ್ಜನ್ಯದಿಂದ ನಲುಗುತ್ತಿರುವ ಕೆರೆಯ ದುಸ್ಥಿತಿ ನೋಡಲಾಗದು ಎಂದು ಸ್ಥಳೀಯರು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಜಲ ಮೂಲ ರಕ್ಷಿಸಿ: ಕೆರೆ–ಕಟ್ಟೆ, ಬಾವಿ–ಹೊಂಡಗಳನ್ನು ಮುಚ್ಚುವುದು ಅತೀ ಸುಲಭ ಆದರೆ ಅವುಗಳ ಸಂರಕ್ಷಣೆ ಅತ್ಯವಶ್ಯ ಮಾತ್ರವಲ್ಲ ಅನಿವಾರ್ಯ. ಜಲಮೂಲಗಳ ರಕ್ಷಣೆಯಿಂದ ಸುತ್ತಮುತ್ತಲ ಪರಿಸರಕ್ಕೆ ಸಾಕಷ್ಟು ಪ್ರಯೋಜನಗಳಿವೆ. ಜನ–ಜಾನುವಾರುಗಳಿಗೆ ನೀರು ಒದಗಿಸುವುದರ ಜೊತೆಗೆ ಪ್ರಾಣಿ–ಪಕ್ಷಿಗಳು, ಅಪಾರ ದೇಶೀಯ ಗಿಡ ಗಂಟಿಗಳು, ಶೈವಲಗಳೊಂದಿಗೆ ಹಸಿರು ಪರಿಸರಕ್ಕೆ ಇವು ಒತ್ತಾಸೆಯಾಗಲಿವೆ. ಆದರೆ ಮೈಸೂರಿನ ಕೆರೆಗಳ ಸಂರಕ್ಷಣೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಜನ ಧ್ವನಿ ಎತ್ತಿದ ವೇಳೆ ನಾಮಕಾವಸ್ತೆಗೆ ಒಂದಷ್ಟು ಕೆಲಸ ಮಾಡಿ, ನಂತರ ಕೈತೊಳೆದುಕೊಳ್ಳಲಾಗುತ್ತದೆ. ಕೆಲ ದಿನಗಳ ಬಳಿಕ ಯಥಾಸ್ಥಿತಿ ನಿರ್ಮಾಣವಾಗುತ್ತದೆ. ಈಗಲಾದರೂ ಜಲಮೂಲಗಳ ರಕ್ಷಣೆಗೆ ಗಂಭೀರ ಪ್ರಯತ್ನಗಳಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ತ್ವರಿತ ಕ್ರಮವಾಗಬೇಕು: ಈ ಹಿಂದೆ 35 ಎಕರೆಗೂ ಹೆಚ್ಚು ವಿಸ್ತಾರವಾಗಿದ್ದ ಬೋಗಾದಿ ಕೆರೆ, ಸದ್ಯ 20–25 ಎಕರೆಯಷ್ಟು ಉಳಿದುಕೊಂಡಿದೆ. ಒಂದು ಹನಿಯೂ ನೀರಿಲ್ಲದ ಕಾರಣ ಪ್ರಾಣಿ–ಪಕ್ಷಿಗಳು ವಲಸೆ ಹೋಗಿವೆ. ಹಸಿರು ಮರೆಯಾಗಿ ಬಂಜರುಭೂಮಿಯಂತಾಗಿದೆ. ಇತ್ತೀಚೆಗೆ ಕಟ್ಟಡ ತ್ಯಾಜ್ಯ ಲೋಡ್‌ಗಟ್ಟಲೆ ಕೆರೆಯ ಒಡಲು ಸೇರುತ್ತಿದೆ. ಒತ್ತುವರಿ ಜೊತೆಗೆ ತ್ಯಾಜ್ಯ ಸುರಿಯುವ ನೆಪದಲ್ಲಿ ಕೆರೆಯನ್ನು ಪೂರ್ತಿ ಮುಚ್ಚುವ ಕೆಲಸ ಶುರುವಾಗಿದೆ. ಈ ಬಗ್ಗೆ ಆಡಳಿತ ವ್ಯವಸ್ಥೆ ಗಮನಹರಿಸಬೇಕು. ಒಂದು ಹನಿ ಕೊಳಚೆ ನೀರು ಕೆರೆಗೆ ಸೇರದಂತೆ ಹಾಗೂ ಮಳೆ ನೀರು ಸರಾಗವಾಗಿ ಕೆರೆಗೆ ಹರಿಯುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು. ಬರೀ ಮಾತಿನಲ್ಲಿ ಭರವಸೆ ನೀಡುವುದನ್ನು ಬಿಟ್ಟು, ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಕೂಡಲೇ ಮುಂದಾಗಬೇಕು ಎಂದು ಜನ ಆಗ್ರಹಿಸಿದ್ದಾರೆ.

> ಕುಕ್ಕರಹಳ್ಳಿ ಮತ್ತಿತರ ಕೆರೆಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕೋಟಿಗಟ್ಟಲೆ ಅನುದಾನ ನೀಡುತ್ತಾರೆ. ಆದರೆ ಐತಿಹಾಸಿಕ ಹಿನ್ನೆಲೆಯುಳ್ಳ ಬೋಗಾದಿ ಕೆರೆಯನ್ನು ಸ್ಥಳೀಯ ಆಡಳಿತ ಸಂಸ್ಥೆಗಳು ಕಡೆಗಣಿಸಿವೆ. ಕೆರೆ ಸಂರಕ್ಷಣೆ ಕಾರ್ಯ ತ್ವರಿತವಾಗಿ ಕೈಗೊಂಡು ನಿಸರ್ಗದ ಸೊಬಗು ಹೆಚ್ಚಿಸಬೇಕು.
> –ಎನ್.ಅರುಣ್‌ಕುಮಾರ್‌ಗೌಡ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ



ಕೆರೆ ಆವರಣದಲ್ಲಿ ಕಟ್ಟಡ ತ್ಯಾಜ್ಯ ಸುರಿದಿರುವುದನ್ನು ಕಾಣಬಹುದು.

> ಇದು ಬೋಗಾದಿ ಮರಿಯಪ್ಪನ ಕೆರೆ. ಇದನ್ನು ಸ್ಥಳೀಯರು 'ಬಕ್ಷಿ ಕೆರೆ' ಎಂದೇ ಕರೆಯುತ್ತಾರೆ. ಕೆಲ ವರ್ಷಗಳಿಂದ ಕೆರೆಯಲ್ಲಿ ನೀರು ಕಡಿಮೆಯಾಗುತ್ತಿತ್ತು, ಆದರೆ ಈ ವರ್ಷ ಸಂಪೂರ್ಣ ಬರಿದಾಗಿದೆ. ಇಲ್ಲಿಗೆ ಮಳೆ ನೀರು ಹರಿಯುವಂತೆ ವ್ಯವಸ್ಥೆ ಮಾಡಿ, ಅಭಿವೃದ್ಧಿಪಡಿಸಬೇಕು.
> –ಮಹಾದೇವ, ಸ್ಥಳೀಯರು

ಸಾರ್ವಜನಿಕ ಪ್ರಕಟಣೆ

ಶ್ರೀ ಬಾಲಾಜಿ ಕನ್ವೆನ್ಷನ್ ಹಾಲ್, ವಿದ್ಯಾರಣ್ಯಪುರಂ, ಮೈಸೂರು ಮತ್ತು
ಶ್ರೀಮತಿ ಸರಸ್ವತಿ ಕನ್ವೆನ್ಷನ್ ಹಾಲ್, ಕೆ.ಎಚ್.ಬಿ ಕಾಲೋನಿ, ಹೂಟಗಳ್ಳಿ, ಮೈಸೂರು

ಇಲ್ಲಿ ಫೆಬ್ರವರಿಯಿಂದ ಮುಂದಿನ ದಿನಗಳಲ್ಲಿ ನಡೆಯಲಿರುವ ಕಾರ್ಯಕ್ರಮಗಳಿಗೆ ದಿನಾಂಕ ಕಾಯ್ದಿರಿಸಿರುವವರು, ದಯವಿಟ್ಟು ತಮ್ಮ ಕಾರ್ಯಕ್ರಮದ ದಿನಾಂಕದ ವಿವರವನ್ನು ಕಚೇರಿಗೆ ಮುಂಚಿತವಾಗಿ ತಿಳಿಸುವಂತೆ ವಿನಂತಿ. ನಮ್ಮ ಸಂಸ್ಥೆಯಲ್ಲಿ ವ್ಯವಸ್ಥಾಪಕರ ಬದಲಾವಣೆ ನಡೆದಿರುವ ಹಿನ್ನೆಲೆ, ದಾಖಲೆಗಳನ್ನು ಸರಿಯಾಗಿ ನವೀಕರಿಸುವ ಉದ್ದೇಶದಿಂದ ಈ ಮಾಹಿತಿ ಅಗತ್ಯವಾಗಿದೆ.

ಸಂಪರ್ಕಿಸಿ: **099166-55522** ಕೊನೆಯ ದಿನಾಂಕ: 10–02–2026

ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., (ಜಿಲ್ಲಾ ಹಾಪ್‌ಕಾಮ್ಸ್) ಕರ್ಜನ್‌ಪಾರ್ಕ್, ಮೈಸೂರು

ಆಡಳಿತ ಮಂಡಳಿಯ ಚುನಾವಣೆ 2026

ಆತ್ಮೀಯ ಸಹಕಾರಿ ಬಂಧುಗಳೇ

ದಿನಾಂಕ 05-02-2026 ನೇ ಗುರುವಾರ ಬೆಳಿಗ್ಗೆ 9-00 ರಿಂದ ಸಂಜೆ 4-00 ರವರೆಗೆ ನಡೆಯಲಿರುವ ಮೇಲ್ಕಂಡ ಸಂಘದ ಚುನಾವಣೆಯಲ್ಲಿ ಈ ಕೆಳಕಂಡ ನಾವುಗಳು ಸ್ಪರ್ಧಿಸಿರುತ್ತೇವೆ. ನಿಮ್ಮ ಅಮೂಲ್ಯವಾದ ಮತವನ್ನು ನಮಗೆ ' ' ಈ ಚಿಹ್ನೆ ಒತ್ತುವುದರ ಮೂಲಕ ಮತ ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ನಿಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ

ಶ್ರೀ.ಸೂರ್ಯಕುಮಾರ್, ಹಾಲಿ ನಿರ್ದೇಶಕರು, ದೂ :9945799918

ಶ್ರೀ.ಹೆಚ್.ಎಸ್.ಚಂದ್ರೇಗೌಡ, ಹಾಲಿ ನಿರ್ದೇಶಕರು, ದೂ:9448186931

ಕ್ರಮ	ಹೆಸರು	ವಿವರ	ದೂರವಾಣಿ	ಚಿಹ್ನೆ
9	ನಳಿನಿ.ಎಸ್.ಜಿ	ಹಾಲಿ ಉಪಾಧ್ಯಕ್ಷರು, ಮಹಿಳಾ ಮೀಸಲು	9380680352	ಕಿರೀಟ
12	ಡಿ. ಪದ್ಮನಾಭ	ಹಾಲಿ ನಿರ್ದೇಶಕರು, ಪರಿಶಿಷ್ಟ ಜಾತಿ ಮೀಸಲು	9480388088	ಗುಡಿಸಲು
13	ಬಿ.ಎನ್. ಪ್ರಭುಸ್ವಾಮಿ	ಹಾಲಿ ನಿರ್ದೇಶಕರು, ನಂಜನಗೂಡು ತಾಲ್ಲೂಕು	9972726344	ಏಣಿ
17	ಬಿ.ಪಿ. ಬೋರೇಗೌಡ	ಹಾಲಿ ನಿರ್ದೇಶಕರು, ಹೆಚ್.ಡಿ. ಕೋಟೆ ತಾಲ್ಲೂಕು	9845048858	ವಿದ್ಯುತ್ ಕಂಬ
19	ಮಹದೇವ .ಜೆ	ಹಾಲಿ ನಿರ್ದೇಶಕರು, ಮೈಸೂರು ತಾಲ್ಲೂಕು	9481234890	ಸೂರ್ಯ
20	ವೈ.ಜಿ. ಮಹೇಂದ್ರ	ಹಾಲಿ ನಿರ್ದೇಶಕರು, ಟಿ. ನರಸೀಪುರ ತಾಲ್ಲೂಕು	9740133329	ನೇಗಿಲು
21	ರಘು	ಹೊಸಹುಂಡಿ, ಹಾಲಿ ಅಧ್ಯಕ್ಷರು, ಹಿಂದುಳಿದ ವರ್ಗ ಪ್ರವರ್ಗ ಬಿ	9845074873	ಬಲ್ಬ್
25	ರಾಜೀವ .ಎಂ.ಜೆ	ಜಿಲ್ಲಾ ಹತ್ತು ಬರಹಗಾರರು, ಮಿರ್ಲೆ, ಕೆ.ಆರ್. ನಗರ ತಾಲ್ಲೂಕು	94448731229	ಬಸ್ಸು
28	ಟಿ. ರಾಮೇಗೌಡ	ಹಾಲಿ ನಿರ್ದೇಶಕರು, ಹಿಂದುಳಿದ ವರ್ಗ ಪ್ರವರ್ಗ ಎ	9845911595	ಫ್ಯಾನ್
31	ಎಸ್.ಕೆ. ಶಿವಣ್ಣ	ಪಿರಿಯಾಪಟ್ಟಣ ತಾಲ್ಲೂಕು	9632465671	ಬುಗುರಿ
33	ಶೋಭ .ಬಿ.ಪಿ	ಮಹಿಳಾ ಮೀಸಲು	9945034210	ಅಂಚೆ ಪೆಟ್ಟಿಗೆ
35	ಆರ್. ಸರ್ವೇಶ	ಹಾಲಿ ನಿರ್ದೇಶಕರು, ಪರಿಶಿಷ್ಟ ಪಂಗಡ ಮೀಸಲು	9743660288	ಡೀಸೆಲ್ ಪಂಪು

ಚುನಾವಣೆ ನಡೆಯುವ ಸ್ಥಳ : ಜಿಲ್ಲಾ ಹಾಪ್‌ಕಾಮ್ಸ್, ಕರ್ಜನ್‌ಪಾರ್ಕ್, ಮೈಸೂರು

ವಿ.ಸೂ. : ಮತದಾನ ಮಾಡಲು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ತರತಕ್ಕದ್ದು



ಅಭಿನಂದನೆಗಳು

ದಿನಾಂಕ 31 ಜನವರಿ 2026 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ಜರುಗಿದ 21 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ **ಗೌರವ ಡಾಕ್ಟರೇಟ್ ಡಿ.ಲಿಟ್ ಗೌರವ ಪದವಿ** ಪುರಸ್ಕೃತರಾದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ರಿ), ಮೈಸೂರು ಇದರ ಅಧ್ಯಕ್ಷರಾದ **ಡಾ|| ಕೆ.ಬಿ ಲಿಂಗರಾಜು** ರವರಿಗೆ ಹೃತ್ಪೂರ್ವಕ ಅಭಿನಂದನೆಗಳು



ಮೈಸೂರಿನ ಕೈಗಾರಿಕಾ ವಲಯದ ಬೆಳವಣಿಗೆಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕ ಸಂಸ್ಥೆ (ರಿ) ಯ ಅಧ್ಯಕ್ಷರಾದ **ಡಾ|| ಕೆ.ಬಿ. ಲಿಂಗರಾಜು** ರವರ ಕೊಡುಗೆ ಅಪಾರ.

ಅಭಿನಂದಿಸುವವರು
ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ರಿ)

ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ.

ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ 2026

ದಿನಾಂಕ 05–02–2026ನೇ ಗುರುವಾರ ಬೆಳಗ್ಗೆ 9.00 ರಿಂದ ಸಂಜೆ 4.00 ಗಂಟೆರವರೆಗೆ
ಮತದಾನ ಮಾಡುವ ಸ್ಥಳ : ಜಿಲ್ಲಾ ಹಾಪ್‌ಕಾಮ್ಸ್, ಕರ್ಜನ್ ಪಾರ್ಕ್, ಮೈಸೂರು.

ಮಾನ್ಯ ಸಹಕಾರ ಬಂಧುಗಳೇ, ದಿನಾಂಕ 05–02–2026ನೇ ಗುರುವಾರದಂದು ನಡೆಯಲಿರುವ ಮೇಲ್ಕಂಡ ಸಹಕಾರ ಸಂಘದ ಚುನಾವಣೆಯಲ್ಲಿ ನಿರ್ದೇಶಕರುಗಳ ಸ್ಥಾನಕ್ಕಾಗಿ ಈ ಕೆಳಕಂಡ ನಾವುಗಳು ಸ್ಪರ್ಧಿಸಿರುತ್ತೇವೆ. ತಾವು ತಮ್ಮ ಅತ್ಯಮೂಲ್ಯವಾದ ಮತಗಳನ್ನು ನಮ್ಮ ತಂಡಕ್ಕೆ ಈ ಚಿಹ್ನೆಯನ್ನು ಒತ್ತುವುದರ ಮೂಲಕ ನಮ್ಮ ತಂಡದ ಎಲ್ಲಾ ಸದಸ್ಯರುಗಳನ್ನು ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆಯನ್ನು ಮತ್ತು ಸಂಘದ ಅಭಿವೃದ್ಧಿಯನ್ನು ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.



29 ವರುಣಾ ಮಹೇಶ್
ಮೈಸೂರು ತಾಲ್ಲೂಕು (ಸಾಮಾನ್ಯ)
ಮೊ. : 94482 46594
ಬಜಾಜ್ ಚೇತಕ್ ಸ್ಕೂಟರ್

ಕ್ರಮ	ಹೆಸರು	ವಿವರ	ಚಿಹ್ನೆ
4	ಗುರುಬಸಪ್ಪ ಕೆ.ಎಸ್.	ಕೂಡನಹಳ್ಳಿ (ಹಿಂದುಳಿದ ವರ್ಗ ಪ್ರವರ್ಗ–ಬಿ)	ಕ್ಯಾಲ್ಕುಲೇಟರ್
6	ಜಯಂತಿ	ಪಿರಿಯಾಪಟ್ಟಣ ತಾಲ್ಲೂಕು (ಸಾಮಾನ್ಯ)	ದ್ರಾಕ್ಷಿ ಗೊಂಚಲು
7	ಜೋಗಿಸಿದ್ದಯ್ಯ	ಹಂಚ್ಯಾ (ಪರಿಶಿಷ್ಟ ಜಾತಿ ಮೀಸಲು)	ಗೋಡೆ ಗಡಿಯಾರ
11	ಎನ್. ನಂಜುಂಡೇಗೌಡ	ಟಿ. ನರಸೀಪುರ ತಾಲ್ಲೂಕು (ಸಾಮಾನ್ಯ)	ಗಾಳಿಪಟ
14	ಪ್ರೇಮ ಕೆ.	ಬಸವನಪುರ, ಮೈಸೂರು ತಾಲ್ಲೂಕು (ಮಹಿಳಾ ಮೀಸಲು)	ಶಂಖ
16	ಎನ್. ಬಸವಣ್ಣ	ನಂಜನಗೂಡು ತಾಲ್ಲೂಕು (ಸಾಮಾನ್ಯ)	ಹಾಕಿ ದಾಂಡು, ಚೆಂಡು
22	ಎ.ಎಂ. ರಮೇಶ್	ಕೆ.ಆರ್. ನಗರ ತಾಲ್ಲೂಕು (ಸಾಮಾನ್ಯ)	ತಕ್ಕಡಿ
26	ಎಸ್.ಎಸ್. ರಾಮಚಂದ್ರ	ಹೆಚ್.ಡಿ. ಕೋಟೆ ತಾಲ್ಲೂಕು (ಸಾಮಾನ್ಯ)	ಗ್ಯಾಸ್ ಸಿಲಿಂಡರ್
30	ಶಿವಣ್ಣ	ಹುಣಸೂರು ತಾಲ್ಲೂಕು (ಪರಿಶಿಷ್ಟ ಪಂಗಡ ಮೀಸಲು)	ಜೋಡಿ ತೆಂಗಿನಮರ

ಒಬ್ಬ ಸದಸ್ಯರು 12 ಮತ ಚಲಾಯಿಸಬಹುದು

ವಿನ್ಯಾಸ : ಪ್ರಮುಖ ಪ್ರಿಂಟರ್ಸ್, ತ್ಯಾಗರಾಜ ರಸ್ತೆ, ಮೈಸೂರು. 98863 10048